₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಬುಧವಾರ 29.01.2025 ಸಂಪುಟ: 10 ಸಂಚಿಕೆ: 15 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಐಸಿಸಿ ಅಂಡರ್-19 ಮಹಿಳಾ ಟಿ-20 ವಿಶ್ವಕಪ್ ಕ್ರಿಕೆಟ್

ತ್ರಿಷಾ ದಾಖಲೆಯ ಶತಕ

ಐಸಿಸಿ ಅಂಡರ್-19 ಮಹಿಳಾ ಟಿ-20 ವಿಶ್ವಕಪ್ ಟೂರ್ನಿಯಲ್ಲಿ ಭಾರತದ ಆರಂಭಿಕ ಆಟಗಾರ್ತಿ ತ್ರಿಷಾ ಗೊಂಗಡಿ ಐತಿಹಾಸಿಕ ಶತಕದ ಸಾಧನೆ ಮಾಡಿದ್ದಾರೆ. ತ್ರಿಷಾ ಸಾಧನೆಯಿಂದ ಭಾರತ ತಂಡವು ಸ್ಕಾಟ್ಲೆಂಡ್ ವಿರುದ್ಧ ಸೂಪರ್ ಸಿಕ್ಸ್ ಪಂದ್ಯದಲ್ಲಿ ಭರ್ಜರಿ 150 ರನ್ ಅಂತರದ ಗೆಲುವು ಸಾಧಿಸಿದೆ.

ಸೊಂಪಾದ ಪುಟಗಳು

ಪ್ರಾಚೀನ ರೋಮ್‌ನ ಮಿಲಿಟರಿ ಆಸ್ಪತ್ರೆಗಳು

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ 6

ಸಾಲಭಾರ, ಸಾಯ ಬಾರಾ ಆಗಬಾರದು!

ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ನಿಮ್ಮ ಗುಣ, ಸಾಮರ್ಥ್ಯ ಮತ್ತು ಯೋಗ್ಯತೆಯನ್ನು ಬೇರೆಯವರು ಗುರುತಿಸದಿದ್ದರೆ ಅದು ನಿಮ್ಮ ಸಮಸ್ಯೆ ಅಲ್ಲ. ಅಷ್ಟಕ್ಕೇ ನೀವು ಬೇಸರಿಸಿಕೊಳ್ಳಬೇಕಿಲ್ಲ. ಅದು ನಿಮ್ಮ ತಪ್ಪಲ್ಲ, ನಿಮ್ಮ ಯೋಗ್ಯತೆಯನ್ನು ಅರಿಯದವರ ತಪ್ಪು. ನೀವು ಮಾಡುತ್ತಿರುವ ಉತ್ತಮ ಕಾರ್ಯಗಳನ್ನು ಮುಂದುವರಿಸಬೇಕು.

ವಕ್ರತುಂಡೋಕ್ತಿ

ಉತ್ತಮ ಮ್ಯಾನೇಜ್ಮೆಂಟ್ ಬಗ್ಗೆ ಇರುವ ಭ್ರಮೆ ಅಂದ್ರೆ, ಅಂಥದ್ದೊಂದು ವ್ಯವಸ್ಥೆ ಇದೆ ಎಂದು ಭಾವಿಸುವುದು.

ಭಾರತ-ಚೀನಾ ಮತ್ತೆ ವಿಮಾನ ಶುರು

ದೆಹಲಿ: ಕೋವಿಡ್-19 ವೈರಸ್ ವ್ಯಾಪಕ ಹರಡುವಿಕೆ ಸಂದರ್ಭ ಸ್ಥಗಿತವಾಗಿದ್ದ ಭಾರತ-ಚೀನಾ ನಡುವಿನ ನೇರ ವಿಮಾನ ಸೇವೆ 5 ವರ್ಷಗಳ ಬಳಿಕ ಪುನಾರಂಭಗೊಳ್ಳುತ್ತಿದೆ. ನೇರ ವಿಮಾನ ಸಂಚಾರಕ್ಕೆ ಭಾರತ-ಚೀನಾ ಸರಕಾರಗಳು ಇದೀಗ ಒಪ್ಪಿಗೆ ನೀಡಿವೆ.

ಭಾರತ, ಚೀನಾ, ಬ್ರೆಜಿಲ್‌ಗೆ ಸುಂಕ ಭಾರ

ಫ್ಲೋರಿಡಾ: ಅಮೆರಿಕದ ವಾಣಿಜ್ಯ ಹಿತಾಸಕ್ತಿಗೆ ಹಾನಿ ಮಾಡುವಂತಹ ಕ್ರಮ ಕೈಗೊಳ್ಳುವ ದೇಶಗಳ ಮೇಲೆ ಅಮೆರಿಕ ಹೆಚ್ಚುವರಿ ಸುಂಕ ವಿಧಿಸಲಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಂದೇಶ ರವಾನಿಸಿದ್ದಾರೆ. ಅವರ ಪ್ರಕಾರ ಚೀನಾ, ಬ್ರೆಜಿಲ್, ಭಾರತ ಆ ಪಟ್ಟಿಯಲ್ಲಿವೆ.

ಮೀನುಗಾರರಿಗೆ ಗುಂಡೇಟು

ದೆಹಲಿ: ಶ್ರೀಲಂಕಾ ನೌಕಾಪಡೆ ಬುಧವಾರ ಡೆಲ್ಫ್ಟ್ ದ್ವೀಪದ ಬಳಿ ಭಾರತೀಯ ಮೀನುಗಾರರ ಮೇಲೆ ಗುಂಡಿನ ದಾಳಿ ನಡೆಸಿದ್ದು, ಐವರು ಮೀನುಗಾರರು ಗಾಯಗೊಂಡಿದ್ದಾರೆ.

ಮಾತಂದ್ರೆ ಮಾತು

ಗಂಗೆಯಲ್ಲಿ ಸ್ನಾನ ಮಾಡಿದರೆ ಪಾಪ ಪರಿಹಾರವಾಗುತ್ತದೆ ಎಂಬ ನಂಬಿಕೆ ಇದೆ. ಆದರೆ ನಾವು ಬಸವಣ್ಣನವರ ಅನುಯಾಯಿಗಳು. ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ ಎಂಬ ಬಸವಣ್ಣನವರ ಮಾತಿನಲ್ಲಿ ನಂಬಿಕೆ ಇದೆ.

- ಸಿದ್ದರಾಮಯ್ಯ
ಮುಖ್ಯಮಂತ್ರಿ

ಫನ್‌ತರಂಗ

- ರಘುಪತಿ ಶೃಂಗೇರಿ -



ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ಖಚಿತ | ಶ್ರೀ ರಾಮುಲು ಜತೆ ಯತ್ನಾಳ್ ಮಾತುಕತೆ | ಬಿವೈವಿ ವಿರುದ್ಧ ಸ್ಪರ್ಧೆಗೆ ಮನವೊಲಿಕೆ ಯತ್ನ

ರಾಮುಲುಗೆ ಶಾ ಬುಲಾವ್



- ಚುನಾವಣೆಯಲ್ಲಿ ಸ್ಪರ್ಧಿಸುವ ನಿಲುವು ಬದಲಿಸಿಕೊಂಡ ಯತ್ನಾಳ್
- ಭಿನ್ನ ಬಣದ ಪರ ಕಣಕ್ಕಿಳಿಯುವಂತೆ ಶ್ರೀರಾಮುಲುಗೆ ಆಹ್ವಾನ
- ರೆಬೆಲ್ ಸದಸ್ಯರ ಆಹ್ವಾನಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಮಾಜಿ ಡಿಸಿಎಂ
- ಜನಾರ್ದನ ರೆಡ್ಡಿ ವಿರುದ್ಧ ಒಗ್ಗಟ್ಟು ಪ್ರದರ್ಶನಕ್ಕೆ ಮುಂದಾದ ಭಿನ್ನರ ಬಣ

ಬೆಂಗಳೂರು: ರಾಜ್ಯ ಬಿಜೆಪಿಯಲ್ಲಿನ ಬಣ ಬಡಿದಾಟ ತಾರಕಕ್ಕೇರಿರುವ ಹಿನ್ನೆಲೆಯಲ್ಲಿ ವರಿಷ್ಠರ ಎಂಟ್ರಿಯಾಗಿದ್ದು, ಮಾಜಿ ಡಿಸಿಎಂ ಬಿ.ಶ್ರೀರಾಮುಲುಗೆ ದೆಹಲಿಯಿಂದ ಬುಲಾವ್ ಬಂದಿದೆ.

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಕೋರ್ ಕಮಿಟಿಯಲ್ಲಿ ನಡೆದ ಘಟನೆಯಿಂದ ಶ್ರೀರಾಮುಲು ಅವರು ಪಕ್ಷ ತೊರೆಯುವ ಬಗ್ಗೆ ಮಾತನಾಡಿದ್ದರು. ಶ್ರೀರಾಮುಲುಗೆ ಕಾಂಗ್ರೆಸ್ ಆಮಿಷ ಒಡ್ಡಿದೆ ಎಂಬ ಮಾತುಗಳೂ ಕೇಳಿಬಂದಿದ್ದವು. ಇದರಿಂದ ಎಚ್ಚೆತ್ತುಕೊಂಡ ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ಅವರು ಶ್ರೀರಾಮುಲು ಅವರಿಗೆ ದೂರವಾಣಿ ಕರೆ ಮಾಡಿ ದೆಹಲಿಗೆ ಬರಲು ತಿಳಿಸಿದ್ದರು. ನಡ್ಡಾ ದೆಹಲಿಗೆ ಕರೆದು ಒಂದು ವಾರವಾದರೂ ಶ್ರೀರಾಮುಲು ದೆಹಲಿಗೆ ಹೋಗಿಲ್ಲ. ಹೀಗಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಶ್ರೀರಾಮುಲುಗೆ ಕರೆ ಮಾಡಿ ಸೋಮವಾರವೇ ದೆಹಲಿಗೆ ಬರುವಂತೆ ತಿಳಿಸಿದ್ದಾರೆ.

ರೆಬೆಲ್ ಗುಂಪಿನತ್ತ ವಾಲಿದ ರಾಮುಲು: ಬಿಜೆಪಿ ರಾಜ್ಯಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಯುವುದು ಬಹುತೇಕ ಖಚಿತವಾಗಿದೆ. ಹಾಲಿ ಅಧ್ಯಕ್ಷ ವಿಜಯೇಂದ್ರ ಸ್ಪರ್ಧಿಸುವುದು ಕೂಡ ಖಚಿತವಾಗಿದೆ. ಇನ್ನು ನಾನೇ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದು ಖಚಿತ, ನನ್ನ ಗೆಲುವು ನಿಶ್ಚಿತ ಎಂದು ಹೇಳಿದ್ದ ಯತ್ನಾಳ್, ಈಗ ತಮ್ಮ ನಿಲುವು ಬದಲಾಯಿಸಿಕೊಂಡಿದ್ದಾರೆ. ರಾಮುಲು ಜತೆ ನಿರಂತರ ಸಂಪರ್ಕದಲ್ಲಿರುವ ಯತ್ನಾಳ್ ಮತ್ತು ಭಿನ್ನ ಬಣದ ಸದಸ್ಯರು ತಮ್ಮ ಪರವಾಗಿ ಅಧ್ಯಕ್ಷ ಗಾದಿಗೆ ಅಭ್ಯರ್ಥಿಯಾಗಿ ಕಣಕ್ಕಿಳಿಸುವುಂತೆ ಮನವಿ ಮಾಡಿದ್ದಾರೆ ಎನ್ನಲಾಗಿದೆ. ಇದಕ್ಕೆ ಶ್ರೀರಾಮುಲು ಕೂಡ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎನ್ನಲಾಗಿದ್ದು, ಯತ್ನಾಳ್ ಬಣಕ್ಕೆ ಹೆಚ್ಚಿನ ಬಲ ಬಂದಂತಾಗಿದೆ.

ರೆಡ್ಡಿ ಉಚ್ಚಾಟನೆಗೆ ಹೆಚ್ಚಿದ ಬೇಡಿಕೆ: ಶ್ರೀರಾಮುಲು ವಿರುದ್ಧ ಪಕ್ಷದ್ರೋಹದ ಆರೋಪ ಮಾಡಿರುವ ಜನಾರ್ದನ ರೆಡ್ಡಿಯವರನ್ನೇ ಪಕ್ಷದಿಂದ ಉಚ್ಚಾಟಿಸಬೇಕು ಎನ್ನುವ ಹೊಸ ಬೇಡಿಕೆ ಭಿನ್ನ ಬಣದಿಂದ ಹುಟ್ಟಿಕೊಂಡಿದೆ. ಈ ನಿಟ್ಟಿನಲ್ಲಿ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ ಬಣ ಜೋರಾಗಿ ಧ್ವನಿ ಎತ್ತಿದೆ. ಅಲ್ಲದೆ 'ನಿಮ್ಮ ಜತೆ ನಾವಿದ್ದೇವೆ, ಬೇಸರಿಸಿಕೊಳ್ಳಬೇಡಿ, ನಮ್ಮೆಲ್ಲರದ್ದೂ ಒಂದೇ ಸಮಸ್ಯೆ' ಎಂದು ರಾಮುಲುಗೆ ಹೇಳಿದ್ದಾರೆ. ಯತ್ನಾಳ್ ಬಣದ ಈ ಹೊಸ ತಂತ್ರ, ಬಿಜೆಪಿ ವರಿಷ್ಠರಿಗೆ ಹೊಸ ತಲೆನೋವಾಗಿ ಪರಿಣಮಿಸಿದೆ.

ಯತ್ನಾಳ-ರಾಮುಲು ಮಹತ್ವದ ಮಾತುಕತೆ: ಶ್ರೀರಾಮುಲು ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿರುವ ಯತ್ನಾಳ್ ಬಣ ಬಿಜೆಪಿ ರಾಜ್ಯಾಧ್ಯಕ್ಷ ಚುನಾವಣೆಗೆ ಸ್ಪರ್ಧಿಸುವ ಕುರಿತು ಮಾತುಕತೆ ನಡೆಸಿದೆ. ಇದಕ್ಕೆ ಶ್ರೀರಾಮುಲು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎನ್ನಲಾಗಿದೆ. ಒಂದು ವೇಳೆ ರಾಜ್ಯಾಧ್ಯಕ್ಷರ ಸ್ಥಾನಕ್ಕೆ ಶ್ರೀರಾಮುಲು ರಂಗ ಪ್ರವೇಶಿಸಿದರೆ, ಕಣ ರಂಗೇರಲಿದೆ. ಹೇಗಾದರೂ ಮಾಡಿ ಅಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಕೆಳಗಿಳಿಸುವ ರೇಸ್‌ನಲ್ಲಿರುವ ಯತ್ನಾಳ್ ಬಣಕ್ಕೆ ಮತ್ತೊಂದು ಅಸ್ತ್ರ ಸಿಕ್ಕಂತಾಗಿದೆ.

ರಾಮುಲು ಮುನಿಸಿಗೆ ಕಾರಣಗಳೇನು?

ಸಂಡೂರಿನಲ್ಲಿ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತು ವಿರುದ್ಧ ರಾಮುಲು ಕೆಲಸ ಮಾಡಿದ್ದೇ ಬಿಜೆಪಿ ಸೋಲಿಗೆ ಕಾರಣ ಎಂದು ಜನಾರ್ದನ ರೆಡ್ಡಿ ಆರೋಪ ಮಾಡಿದ್ದಲ್ಲದೆ, ಶ್ರೀರಾಮುಲು ಅವರ ಹಳೆಯ ವಿಚಾರವನ್ನೆಲ್ಲ ಕೆದಕಿದ್ದರು. ಸತೀಶ್ ಜಾರಕಿಹೊಳಿಯವರನ್ನು ಹಣಿಯಲು ಅದೇ ಸಮುದಾಯದ ಶ್ರೀರಾಮುಲು ಅವರನ್ನು ಪಕ್ಷಕ್ಕೆ ಸೆಳೆಯಲು ಡಿ.ಕೆ.ಶಿವಕುಮಾರ್ ಪ್ರಯತ್ನಿಸುತ್ತಿದ್ದಾರೆ ಎಂದೂ ರೆಡ್ಡಿ ಆರೋಪ ಮಾಡಿದ್ದರು. ಇದು ಆಪ್ತಮಿತ್ರರ ವಿರುದ್ಧ ವಾಕ್ ಸಮರಕ್ಕೆ ಕಾರಣವಾಯಿತು. ಬೆಂಗಳೂರಿನಲ್ಲಿ ಕೋರ್ ಕಮಿಟಿ ಸಭೆಯಲ್ಲಿ ರಾಜ್ಯ ಬಿಜೆಪಿ ಉಸ್ತುವಾರಿ ರಾಧಾ ಮೋಹನ್ ಅವರು, ಜನಾರ್ದನ ರೆಡ್ಡಿ ಹೇಳಿಕೆಯನ್ನೇ ಉಲ್ಲೇಖಿಸಿ 'ಸಂಡೂರಿನಲ್ಲಿ ಬಿಜೆಪಿ ಸೋಲಿಗೆ ಶ್ರೀರಾಮುಲು ಕಾರಣ' ಎಂದು ಹೇಳಿದ್ದರು. ಈ ವೇಳೆ ಸಭೆಯಲ್ಲಿ ರಾಜ್ಯಾಧ್ಯಕ್ಷ ವಿಜಯೇಂದ್ರ ಇದ್ದರೂ ರೆಡ್ಡಿ ಮಾತು ಕೇಳಿ ತಮ್ಮ ಪರ ನಿಲ್ಲಲಿಲ್ಲ. ಸಂಡೂರಿನಲ್ಲಿ ಕೆಲಸ ಮಾಡಿದ್ದು ಗೊತ್ತಿದ್ದರೂ ಸಭೆಯಲ್ಲಿ ತಮ್ಮ ಪರ ದನಿ ಎತ್ತಿಲ್ಲ ಎಂಬುದು ಶ್ರೀರಾಮುಲು ಅಸಮಾಧಾನಕ್ಕೆ ಕಾರಣವಾಗಿದೆ.

ಸುತ್ತೂರು ರಥೋತ್ಸವ ಸಂಭ್ರಮ



ಸಾವಿರಾರು ಭಕ್ತರ ಮುಗಿಲು ಮುಟ್ಟುವ ಜಯಘೋಷಗಳೊಂದಿಗೆ ಸುತ್ತೂರು ಶಿವರಾತ್ರೀಶ್ವರ ಶಿವಯೋಗಿಗಳ ರಥೋತ್ಸವ ಮಂಗಳವಾರ ಬೆಳಗ್ಗೆ ವಿಜೃಂಭಣೆಯಿಂದ ನೆರವೇರಿತು. ಭಕ್ತರು ರಥಕ್ಕೆ ಹಣ್ಣು-ದವನ ಎಸೆದು ಹರಕೆ ತೀರಿಸಿದರು.

ಇ.ಡಿ, ಲೋಕಾಯುಕ್ತಕ್ಕೆ ಸ್ನೇಹಮಯಿ ಕೃಷ್ಣ ದೂರು

ಜಿಟಿಡಿ ಬುಡಕ್ಕೆ ಮುಡಾ ಹಗರಣ

ಮೈಸೂರು: ಮುಡಾ ನಿವೇಶನ ಹಂಚಿಕೆ ಅಕ್ರಮ ಕುರಿತಂತೆ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿಕೃಷ್ಣ ಸಿಎಂ ಸಿದ್ದರಾಮಯ್ಯ ಕುಟುಂಬದ ವಿರುದ್ಧ ಹೋರಾಟ ನಡೆಸುತ್ತಿದ್ದು, ಇದೀಗ ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ವಿರುದ್ಧ ಇಡಿ, ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ.

ದೂರಿನಲ್ಲೇನಿದೆ?: ಜಿ.ಟಿ.ದೇವೇಗೌಡ ತಮ್ಮ ಸಹೋದರಿಯ ಮಗ ಮಹೇಂದ್ರ ಹೆಸರಿನಲ್ಲಿ ಅಕ್ರಮವಾಗಿ 50:50 ಅನುಪಾತದಲ್ಲಿ 19 ನಿವೇಶನಗಳನ್ನು ಪರಿಹಾರವಾಗಿ ಪಡೆದುಕೊಂಡಿದ್ದಾರೆ. ದೇವನೂರು ಗ್ರಾಮದ ಗುಂಗ್ರಾಲ್ ಛತ್ರದ ಸರ್ವೆ ನಂ.81/2ರಲ್ಲಿದ್ದ ಮಹೇಂದ್ರಗೆ ಸೇರಿದ 2.22 ಎಕರೆ ಭೂಮಿ ಉಪಯೋಗಿಸಿ ಕೊಂಡಿರುವುದಾಗಿ ಮುಡಾ ಹೇಳಿ ಕೊಂಡಿದೆ. ಆದರೆ ಯಾವಾಗ ಆ ಭೂಮಿ ವಶಪಡಿಸಿಕೊಂಡು ಅಭಿವೃದ್ಧಿಪಡಿಸಲಾಗಿದೆ ಎನ್ನುವ ಮಾಹಿತಿ ಇಲ್ಲ. ಅಲ್ಲದೆ, ಗ್ರಾಮದ ಭೂಮಿಗೆ ವಿಜಯನಗರ 3ನೇ ಹಂತದಲ್ಲಿ ಬದಲಿ ನಿವೇಶನ ಮಂಜೂರು ಮಾಡಲಾಗಿದೆ. ಸ್ವಇಚ್ಛೆಯಿಂದ ಭೂಮಿ ಬಿಟ್ಟುಕೊಟ್ಟಿದ್ದಾರೆ ಎಂದು ಕ್ರಯ ಪತ್ರದಲ್ಲಿ ನಮೂದು ಆಗಿದ್ದು, ಈ ಯೋಜನೆಗೆ ನೀಡಬೇಕಿರುವುದು ಕೇವಲ 2 ಸೈಟ್‌ಗಳು ಮಾತ್ರ. ಅದರಂತೆ 40x60 ಮತ್ತು 40x30ರ 3600 ಚದರ ಅಡಿ ಮಾತ್ರ ಪರಿಹಾರವಾಗಿ ಸಿಗಬೇಕಾಗಿತ್ತು. ಆದರೆ, ಅವರಿಗೆ 19 ನಿವೇಶನಗಳನ್ನು ನೀಡಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.



- ಜಿ.ಟಿ.ದೇವೇಗೌಡ ತಮ್ಮ ಸಹೋದರಿಯ ಮಗ ಮಹೇಂದ್ರ ಹೆಸರಿನಲ್ಲಿ ಅಕ್ರಮವಾಗಿ 19 ನಿವೇಶನ ಪಡೆದಿದ್ದಾರೆ.
- ಮಹೇಂದ್ರಗೆ ಸೇರಿದ 2.22 ಎಕರೆ ಭೂಮಿ ಉಪಯೋಗಿಸಿ ಕೊಂಡಿರುವುದಾಗಿ ಮುಡಾ ಹೇಳಿಕೊಂಡಿದೆ. ಆದರೆ ಯಾವಾಗ ಆ ಭೂಮಿ ವಶಪಡಿಸಿಕೊಂಡು ಅಭಿವೃದ್ಧಿಪಡಿಸಲಾಗಿದೆ ಎನ್ನುವ ಮಾಹಿತಿ ಇಲ್ಲ
- ದೇವನೂರು ಗ್ರಾಮದ ಭೂಮಿಗೆ ವಿಜಯನಗರ 3ನೇ ಹಂತದಲ್ಲಿ ಬದಲಿ ನಿವೇಶನ ಮಂಜೂರು ಮಾಡಲಾಗಿದೆ
- ಸ್ವಇಚ್ಛೆಯಿಂದ ಭೂಮಿ ಬಿಟ್ಟುಕೊಟ್ಟಿದ್ದಾರೆ ಎಂದು ಕ್ರಯ ಪತ್ರದಲ್ಲಿ ನಮೂದು ಆಗಿದ್ದು, ಈ ಯೋಜನೆಗೆ ನೀಡಬೇಕಿರುವುದು ಕೇವಲ 2 ಸೈಟ್‌ಗಳು ಮಾತ್ರ. ಆದರೆ, ಪರಿಹಾರವಾಗಿ 19 ನಿವೇಶನಗಳನ್ನು ನೀಡಲಾಗಿದೆ.

ಕೆಪಿಎಸ್‌ಸಿಗೆ ಕೆಎಟಿ ನೋಟಿಸ್

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗವು 2024ರ ಡಿಸೆಂಬರ್ 29ರಂದು 384 ಹುದ್ದೆಗಳ ಭರ್ತಿಗೆ ನಡೆಸಿದ್ದ ಪೂರ್ವಭಾವಿ ಮರು ಪರೀಕ್ಷೆಯಲ್ಲಿ ದೋಷ ಕಂಡು ಬಂದಿರುವ ಕಾರಣ ಪರೀಕ್ಷೆ ರದ್ದುಪಡಿಸಬೇಕು ಎಂದು ಕೋರಿ ಹಲವು ಅಭ್ಯರ್ಥಿಗಳು ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಮೊರೆ ಹೋಗಿದ್ದಾರೆ.

ಈ ಸಂಬಂಧ ಕೃಷ್ಣ ಮತ್ತಿತರರು ಸಲ್ಲಿಸಿರುವ ಅರ್ಜಿಯನ್ನು ಕೆಎಟಿ ನ್ಯಾಯಾಂಗ ಸದಸ್ಯ ಎಸ್.ವೈ.ವಟವಟಿ ಮತ್ತು ಆಡಳಿತ ಸದಸ್ಯೆ ಅಮಿತಾ ಪ್ರಸಾದ್ ಅವರಿದ್ದ ಪೀಠ ಮಂಗಳವಾರ ವಿಚಾರಣೆ ನಡೆಸಿತು. ಕೆಲಕಾಲ ವಾದ-ಪ್ರತಿವಾದ ಆಲಿಸಿದ ಬಳಿಕ ಪೀಠವು, ಕೆಪಿಎಸ್‌ಸಿ ಅಭಿಪ್ರಾಯ ಆಲಿಸದೆ ಯಾವುದೇ ಮಧ್ಯಂತರ ಆದೇಶ ನೀಡಲು ಸಾಧ್ಯವಿಲ್ಲ ಎಂದು ತಿಳಿಸಿ, ರಾಜ್ಯ ಸರಕಾರ ಮತ್ತು ಕೆಪಿಎಸ್‌ಸಿ ಪರ ವಕೀಲರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಪರೀಕ್ಷೆಗೆ ಸಂಬಂಧಿಸಿದಂತೆ ಮುಂದಿನ ವಿಚಾರಣೆವರೆಗೆ ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ಕೆಪಿಎಸ್‌ಸಿಗೆ ನಿರ್ದೇಶಿಸಿರುವ ಪೀಠವು ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಿದೆ.

ಮೊದಲ ದಿನ ರಾಷ್ಟ್ರಪತಿ ಮುರ್ಮು ಭಾಷಣ

ಫೆ.1ರಂದು ನಿರ್ಮಲಾ ಬಜೆಟ್ ಮಂಡನೆ

ಜ. 31ರಿಂದ ಕೇಂದ್ರ ಬಜೆಟ್ ಅಧಿವೇಶನ

ದೆಹಲಿ: ಜ.31ರಂದು ಸಂಸತ್ತಿನ ಬಜೆಟ್ ಅಧಿವೇಶನ ಆರಂಭಗೊಳ್ಳಲಿದ್ದು, ಮೊದಲ ದಿನವಾದ ಶುಕ್ರವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಅಧಿವೇಶನ 2 ಭಾಗಗಳಲ್ಲಿ ಏ.4ರವರೆಗೂ ನಡೆಯಲಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಫೆ.1ರಂದು ಬೆಳಗ್ಗೆ 11 ಗಂಟೆಗೆ ತಮ್ಮ 8ನೇ ಬಜೆಟ್ ಮಂಡಿಸಲಿದ್ದಾರೆ.

ಸಂಸತ್ತಿನ ಬಜೆಟ್ ಅಧಿವೇಶನದ ಮೊದಲ ಭಾಗ ಜ.31ರಂದು ಪ್ರಾರಂಭವಾಗಿ ಫೆ.13 ರಂದು ಕೊನೆಗೊಳ್ಳುತ್ತದೆ. ಅಧಿವೇಶನದ 2ನೇ ಭಾಗ ಮಾ.10ರಂದು ಪ್ರಾರಂಭವಾಗಿ ಏ.4 ರವರೆಗೂ ಮುಂದುವರಿಯುತ್ತದೆ. ಮೊದಲ ಭಾಗದಲ್ಲಿ ರಾಷ್ಟ್ರಪತಿಗಳ ಭಾಷಣದ ಮೇಲಿನ ಚರ್ಚೆ-ಧನ್ಯವಾದ ನಿರ್ಣಯಕ್ಕೆ ಪ್ರಧಾನಿ ಮೋದಿ ಅವರು ಪ್ರತಿಕ್ರಿಯಿಸುತ್ತಾರೆ. ಅಲ್ಲದೇ, ಬಜೆಟ್ ಮಂಡನೆಯಾಗಲಿದೆ ಮತ್ತು ಬಜೆಟ್ ಮೇಲಿನ ಚರ್ಚೆಗೆ ಸಚಿವೆ ನಿರ್ಮಲಾ ಸೀತಾರಾಮನ್ ಉತ್ತರಿಸುತ್ತಾರೆ.

→ 4

- ರಾಷ್ಟ್ರಪತಿ ಭಾಷಣದ ನಂತರ ಶುಕ್ರವಾರವೇ ಸಮೀಕ್ಷಾ ವರದಿ ಸಲ್ಲಿಕೆ
- ಫೆ.3, 4ರಂದು ಲೋಕಸಭೆಯಲ್ಲಿ ಚರ್ಚೆ, ರಾಜ್ಯಸಭೆಗೆ 3 ದಿನ ಅವಕಾಶ
- ವಿವಿಧ ಸಚಿವರಿಂದ ಅನುದಾನ ಬೇಡಿಕೆ ಕುರಿತು ಮಾ.10ರಿಂದ ಚರ್ಚೆ
- ಒಟ್ಟು 27 ದಿನಗಳ ಚರ್ಚೆಯ ಬಳಿಕ ಏ.4ರಂದು ಅಧಿವೇಶನಕ್ಕೆ ತೆರೆ

ಇಂದು ಮೌನಿ ಅಮಾವಾಸ್ಯೆ ಕುಂಭಮೇಳಕ್ಕೆ 10 ಕೋಟಿ ಜನ

ಪ್ರಯಾಗ್‌ರಾಜ್: ಜ.29ರಂದು 'ಮೌನಿ ಅಮಾವಾಸ್ಯೆ' ಇರುವುದರಿಂದ ಉತ್ತರ ಪ್ರದೇಶದಲ್ಲಿನ ಪ್ರಯಾಗ್‌ರಾಜ್ ನಗರದಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ದೇಶ-ವಿದೇಶದಿಂದ ಒಟ್ಟು 10 ಕೋಟಿ ಭಕ್ತರು ಆಗಮಿಸಿ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡುವ ನಿರೀಕ್ಷೆ ಇದೆ.

ಮೌನಿ ಅಮಾವಾಸ್ಯೆ ಬಹಳ ವಿಶೇಷ ದಿನವಾಗಿರುವುದರಿಂದ ಗಂಗಾ-ಯಮುನಾ-ಸರಸ್ವತಿ(ಗುಪ್ತಗಾಮಿನಿ) ನದಿಗಳ ಸಂಗಮ ಸ್ಥಳದಲ್ಲಿ ಪುಣ್ಯಸ್ನಾನ ಮಾಡುವುದರಿಂದ ಶ್ರೇಷ್ಠ ಫಲ ಸಿಗಲಿದೆ, ಪಾಪವೆಲ್ಲಾ ತೊಳೆದು ಹೋಗಲಿದೆ, ಸದ್ಗತಿ ದೊರಕಲಿದೆ ಎಂಬ ನಂಬಿಕೆ ಸನಾತನ ಧರ್ಮದಲ್ಲಿ ಇರುವುದರಿಂದ ಬುಧವಾರ ಪ್ರಯಾಗ್‌ರಾಜ್‌ನಲ್ಲಿನ ಮಹಾ ಕುಂಭಮೇಳಕ್ಕೆ ಜನಸಾಗರವೇ ಹರಿದು ಬರುವ ಸಾಧ್ಯತೆ ಇದೆ. ಅದಕ್ಕಾಗಿ ಉತ್ತರ ಪ್ರದೇಶ ಸರಕಾರ ಭಾರೀ ಸಿದ್ಧತೆ ಮಾಡಿಕೊಂಡಿದೆ.

- ದೇಶದ ವಿವಿಧೆಡೆಯಿಂದ ಪ್ರಯಾಗ್‌ರಾಜ್‌ಗೆ 60 ವಿಶೇಷ ರೈಲು
- ಒಟ್ಟು 360 ರೈಲುಗಳ ಸಂಚಾರ ವ್ಯವಸ್ಥೆ ಮಾಡಿರುವ ರೈಲ್ವೆ ಇಲಾಖೆ
- ರೈಲ್ವೆ ನಿಲ್ದಾಣದಲ್ಲಿನ ಭದ್ರತಾ ವ್ಯವಸ್ಥೆಯಲ್ಲಿಯೂ ಬದಲಾವಣೆ

ಜ.13ರಿಂದ ಈವರೆಗೆ 14.76 ಕೋಟಿ ಭಕ್ತರು ತ್ರಿವೇಣಿ ಸಂಗಮ ಸ್ಥಳದಲ್ಲಿ ಪವಿತ್ರ ಸ್ನಾನ ಮಾಡಿ ಪುನೀತ ಭಾವ ಅನುಭವಿಸಿದ್ದಾರೆ.

ಇಸ್ರೋದ ಶತಕ ಸಾಧನೆಗೆ ಕ್ಷಣಗಣನೆ

ಜ.29ರ ಬೆಳಗ್ಗೆ 6.23ಕ್ಕೆ ನಭಕ್ಕೆ ಚಿಮ್ಮಲಿರುವ ಜಿಎಸ್‌ಎಲ್‌ವಿ ಎಫ್-15

ಶ್ರೀಹರಿಕೋಟಾ: ವಾಹನಗಳ ಸಂಚಾರಕ್ಕೆ ಅಗತ್ಯವಿರುವ ಮಾಹಿತಿ ಒದಗಿಸುವ ಉದ್ದೇಶದ ನ್ಯಾವಿಗೇಷನ್ ಉಪಗ್ರಹ ಉಡ್ಡಯನಕ್ಕೆ ಕ್ಷಣಗಣನೆ ಮಂಗಳವಾರ ಆರಂಭವಾಗಿದ್ದು, ಇದು, ಇಸ್ರೋದ ಐತಿಹಾಸಿಕ 100ನೇ ಉಡ್ಡಯನ ಕಾರ್ಯಕ್ರಮವಾಗಿದೆ. ದೇಶೀಯವಾಗಿಯೇ ಅಭಿವೃದ್ಧಿಪಡಿಸಲಾಗಿರುವ ಕ್ರಯೋಜನಿಕ್ ತಂತ್ರಜ್ಞಾನ ಆಧಾರಿತ ರಾಕೆಟ್ ಜಿಎಸ್‌ಎಲ್‌ವಿ ಎಫ್-15, ನ್ಯಾವಿಗೇಷನ್ ಉಪಗ್ರಹ ಎನ್‌ವಿಎಸ್-02 ಅನ್ನು ಹೊತ್ತು ಜ.29ರ ಬೆಳಗ್ಗೆ 6.23ಕ್ಕೆ ನಭಕ್ಕೆ ಚಿಮ್ಮಲಿದೆ. 27.30 ಗಂಟೆಗಳ ಕ್ಷಣಗಣನೆ ಮಂಗಳವಾರ ನಸುಕಿನ ಜಾವ 2.53ಕ್ಕೆ ಆರಂಭವಾಗಿದೆ.

ಪ್ರಯೋಜನ

- ಭೂ ಮತ್ತು ವಾಯು ಪ್ರದೇಶ, ಕಡಲ ಯಾನಕ್ಕೆ ಸಂಬಂಧಿಸಿದ ಮಾಹಿತಿ ಪಡೆಯಲು ಸಹಾಯ
- ಕೃಷಿ ಕ್ಷೇತ್ರದ ನಿಖರ ಮಾಹಿತಿ ಒದಗಿಸಲು ಸಾಧ್ಯ
- ಮೊಬೈಲ್ ಸಾಧನಗಳಲ್ಲಿ ಲೊಕೇಷನ್ ಆಧಾರಿತ ಸೇವೆ ಪ್ರಯೋಜನ
- ಉಪಗ್ರಹಗಳು ಯಾವ ಕಕ್ಷೆಯಲ್ಲಿ ಪರಿಭ್ರಮಿಸುತ್ತಿವೆ ಎಂಬುದರ ಮಾಹಿತಿ
- ಇಂಟರ್‌ನೆಟ್ ಆಫ್ ಥಿಂಗ್ಸ್ (ಐಒಟಿ) ಆಧಾರಿತ ಸೇವೆಗಳಿಗೆ ಸಹಾಯ

ವಿಶೇಷ

ನಾವಿಕ್ (ನ್ಯಾವಿಗೇಷನ್ ವಿತ್ ಇಂಡಿಯನ್ ಕಾನ್ಸ್ಟಲೇಷನ್) ಸರಣಿಯ ಎರಡನೇ ಉಪಗ್ರಹ ಇದಾಗಿದೆ. ಭಾರತ ಉಪಖಂಡ ಹಾಗೂ ಇದಕ್ಕೆ ಹೊಂದಿಕೊಂಡಿರುವ ಭೌಗೋಳಿಕ ಪ್ರದೇಶದ ಪೈಕಿ 1,500 ಕಿ.ಮೀ. ವ್ಯಾಪ್ತಿಯಲ್ಲಿನ ವಾಹನಗಳ ಸ್ಥಾನ, ವೇಗ ಹಾಗೂ ಸಮಯ ಕುರಿತು ನಿಖರ ಮಾಹಿತಿಯನ್ನು ಈ ಉಪಗ್ರಹ ಒದಗಿಸಲಿದೆ. ಈ ಸರಣಿಯ ಮೊದಲ ಉಪಗ್ರಹವನ್ನು (ಎನ್‌ವಿಎಸ್-01) 2023ರ ಮೇ 29ರಂದು ಉಡ್ಡಯನ ಮಾಡಲಾಗಿತ್ತು.

ಫೆ.1ರಿಂದ ರಾಜ್ಯದ ಹಲವೆಡೆ ಮಳೆ

ಬೆಂಗಳೂರು: ರಾಜ್ಯದ ಹಲವೆಡೆ ಫೆ.1ರಿಂದ ಮೂರು ದಿನಗಳು ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಚಾಮರಾಜನಗರ, ಮೈಸೂರು, ಹಾಸನ, ಕೊಡಗು, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಯ ಒಂದೆರಡು ಕಡೆ ಫೆ.1ರಂದು ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ.

ದಕ್ಷಿಣ ಕನ್ನಡ, ಉಡುಪಿ, ಬೆಳಗಾವಿ, ಧಾರವಾಡ, ಗದಗ ಮತ್ತು ಹಾವೇರಿಯ ಒಂದೆರಡು ಕಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ. ಈ ಜಿಲ್ಲೆಗಳ ಕೆಲವೆಡೆ ಫೆ.2 ಮತ್ತು ಫೆ.3ರಂದೂ ಮಳೆಯಾಗುವ ಸಂಭವವಿದೆ. ಬೆಂಗಳೂರಿನಲ್ಲಿ ಒಣಹವೆ ಇರುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಪಿಸ್ತೂಲ್‌ಗಾಗಿ ಕೋರ್ಟ್ ಮೊರೆ

ಬೆಂಗಳೂರು: ತಮಗೆ ಮಂಜೂರು ಮಾಡಲಾಗಿದ್ದ ಪಿಸ್ತೂಲ್ ಪರವಾನಗಿ ಅಮಾನತುಪಡಿಸಿ



ಮುಟ್ಟುಗೋಲು ಹಾಕಿಕೊಂಡಿರುವ ಪೊಲೀಸರ ಕ್ರಮವನ್ನು ಪ್ರಶ್ನಿಸಿ ನಟ ದರ್ಶನ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ನನ್ನ ಪಿಸ್ತೂಲ್ ಪರವಾನಗಿ ಅಮಾನತುಪಡಿಸಿ ಉಪ ಪೊಲೀಸ್ ಆಯುಕ್ತರು ಇದೇ 16ರಂದು ಆದೇಶಿಸಿದ್ದಾರೆ ಮತ್ತು ಇದೇ 20ರಂದು ಪಿಸ್ತೂಲ್ ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಅವರ ಆದೇಶ ಸಂಪೂರ್ಣ ಏಪಕ್ಷೀಯ ಮತ್ತು ಕಾನೂನುಬಾಹಿರ. ನನಗೆ ಕಿರುಕುಳ ನೀಡುವ ಉದ್ದೇಶದಿಂದಲೇ ಈ ಆದೇಶ ಹೊರಡಿಸಲಾಗಿದೆ. ಎಲ್ಲ ಕಾನೂನು ಪ್ರಕ್ರಿಯೆ ಪಾಲಿಸಿದ ನಂತರವೇ ನನಗೆ ಶಸ್ತ್ರಾಸ್ತ್ರ ಪರವಾನಗಿ ನೀಡಲಾಗಿತ್ತು. ಆದ್ದರಿಂದ, ಉಪ ಪೊಲೀಸ್ ಆಯುಕ್ತರ ಆದೇಶ ರದ್ದುಪಡಿಸಬೇಕು ಎಂದು ದರ್ಶನ್ ಅರ್ಜಿಯಲ್ಲಿ ಕೋರಿದ್ದಾರೆ.

ಶಿಕ್ಷಣ ಕ್ಷೇತ್ರದ ವಾರ್ಷಿಕ ವರದಿಯಲ್ಲಿ ಹಲವು ವಿಚಾರ ಪ್ರಸ್ತಾಪ

ಕೋವಿಡ್ ಬಳಿಕ ಸರಕಾರಿ ಶಾಲೆಗಳಲ್ಲಿ ದಾಖಲಾತಿ ಕುಸಿತ

ದೆಹಲಿ: ಕೋವಿಡ್-19 ಪಿಡುಗಿನ ವೇಳೆ ದೇಶದ ಹಲವು ರಾಜ್ಯಗಳಲ್ಲಿ ಸರಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಳಗೊಂಡಿತ್ತು. ನಂತರದ ವರ್ಷಗಳಲ್ಲಿ ದಾಖಲಾತಿಯಲ್ಲಿ ಕ್ರಮೇಣ ಇಳಿಕೆ ಕಂಡುಬಂದಿದೆ. 6-14 ವರ್ಷ ವಯೋಮಾನದ ಮಕ್ಕಳ ದಾಖಲಾತಿ ಪ್ರಮಾಣವು 2018ರಲ್ಲಿ ಇದ್ದ ಮಟ್ಟಕ್ಕೆ ತಲುಪಿದೆ.

'ಪ್ರಥಮ' ಎಂಬ ಎನ್‌ಜಿಒ ನಡೆಸಿರುವ ವಾರ್ಷಿಕ ಶೈಕ್ಷಣಿಕ ಸ್ಥಿತಿಗತಿ ಸಮೀಕ್ಷಾ ವರದಿಯನ್ನು ಮಂಗಳವಾರ ಬಿಡುಗಡೆಗೊಳಿಸಿದ್ದು, ಕೋವಿಡ್-19 ಪಿಡುಗಿನ ವೇಳೆ ಮಕ್ಕಳು ಕಲಿಕಾ ನಷ್ಟ ಎದುರಿಸಿದ್ದರು. ತದನಂತರ, ಪರಿಹಾತ್ಮಕ ಬೋಧನೆ ಸೇರಿದಂತೆ ಹಲವು ಕ್ರಮಗಳ ಫಲವಾಗಿ, ಮಕ್ಕಳ ಕಲಿಕೆಯಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿದೆ. ಪ್ರಾಥಮಿಕ ಹಂತದ ಕಲಿಕಾ ಮಟ್ಟವು, ಈ ಹಿಂದಿನ ವರ್ಷಗಳಲ್ಲಿ ಇದ್ದ ಮಟ್ಟಕ್ಕಿಂತಲೂ ಉತ್ತಮಗೊಂಡಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ವರದಿಯಲ್ಲಿನ ಪ್ರಮುಖ ಅಂಶಗಳು

- **ಸ್ಮಾರ್ಟ್‌ಫೋನ್ ಬಳಕೆ:** 14-16 ವರ್ಷ ವಯೋ ಮಾನದ ಮಕ್ಕಳ ಪೈಕಿ ಶೇ.82ರಷ್ಟು ಮಕ್ಕಳಿಗೆ ಸ್ಮಾರ್ಟ್‌ಫೋನ್ ಬಳಕೆ ಬಗ್ಗೆ ಗೊತ್ತಿದೆ. ಸಮೀಕ್ಷೆ ನಡೆದಿದ್ದ ಹಿಂದಿನ ವಾರದ ಅವಧಿಯಲ್ಲಿ ಶೇ.57ರಷ್ಟು ಮಕ್ಕಳು ಸ್ಮಾರ್ಟ್‌ಫೋನ್ ಅನ್ನು ಶೈಕ್ಷಣಿಕ ಉದ್ದೇಶಕ್ಕೆ ಬಳಸಿದ್ದರೆ ಸಾಮಾಜಿಕ ಜಾಲತಾಣ ವೀಕ್ಷಣೆಗೆ ಬಳಸಿದ್ದಾಗಿ ಶೇ.76ರಷ್ಟು ಮಕ್ಕಳು ಹೇಳಿದ್ದಾರೆ.

→ 4

6,49,491
ಸಮೀಕ್ಷೆಯ ಭಾಗವಾಗಿದ್ದ ಗ್ರಾಮೀಣ ಭಾಗದ ಮಕ್ಕಳ ಸಂಖ್ಯೆ

17,997
ಸಮೀಕ್ಷೆ ನಡೆಸಲಾದ ಗ್ರಾಮಗಳ ಸಂಖ್ಯೆ

605
ಸಮೀಕ್ಷೆ ಕೈಗೊಂಡಿದ್ದ ಜಿಲ್ಲೆಗಳ ಸಂಖ್ಯೆ

ಸಮಾಚಾರ ಸಣ್ಣದಲ್ಲ

ಟ್ರ್ಯಾಕ್ಟರ್ ಡಿಕ್ಕಿ : ಬೈಕ್ ಸವಾರರಿಗೆ ಗಾಯ

ಮದ್ದೂರು: ಚಲಿಸುತ್ತಿದ್ದ ದ್ವಿಚಕ್ರ ವಾಹನಕ್ಕೆ ಟ್ರ್ಯಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ತೀವ್ರವಾಗಿ ಗಾಯಗೊಂಡು ಹಿಂಬದಿ ಸವಾರನಿಗೆ ಸಣ್ಣಪುಟ್ಟ ಗಾಯಗಳಾಗಿರುವ ಘಟನೆ ತಾಲೂಕಿನ ಯರಗನಹಳ್ಳಿ ಗ್ರಾಮದಲ್ಲಿ ಮಂಗಳವಾರ ಮಧ್ಯಾಹ್ನ ಜರುಗಿದೆ.

ಕುಣಿಗಲ್ ತಾಲೂಕಿನ ಕುಂಟನಪಾಳ್ಯ ಗ್ರಾಮದ ಜಯರಾಮಯ್ಯನವರ ಪುತ್ರ ಶ್ರೀಧರ್(30) ಗಾಯಗೊಂಡ ವ್ಯಕ್ತಿ. ತಕ್ಷಣ ಬೆಂಗಳೂರು ಆಸ್ಪತ್ರೆಗೆ ರವಾನಿಸಲಾಗಿದ್ದು ಹಾಗೂ ಹಿಂಬದಿ ಸವಾರ ಅದೇ ಗ್ರಾಮದ ಕಪ್ಪನಯ್ಯಗೆ ಸಣ್ಣಪುಟ್ಟ ಗಾಯಗಳಾಗಿದ್ದು ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಮದ್ದೂರಿನಿಂದ ವಾಪಸ್ ಸ್ವಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಟ್ರ್ಯಾಕ್ಟರ್ ಬೈಕಿಗೆ ಡಿಕ್ಕಿ ಹೊಡೆದಿದೆ. ಮದ್ದೂರು ಪೊಲೀಸ್ ಠಾಣೆಯಲ್ಲಿ ಪರಕರಣ ದಾಖಲಾಗಿದೆ.

ಅಪರಿಚಿತ ಮಹಿಳೆ ಶವ ಕೊಳೆತ ಸ್ಥಿತಿಯಲ್ಲಿ ಪತ್ತೆ

ಮದ್ದೂರು : ಪಟ್ಟಣದ ಪೂರ್ಣ ಪ್ರಜ್ಞಾ ವಿದ್ಯಾಸಂಸ್ಥೆಯ ಹಿಂಬದಿ ಕೊಲ್ಲಿ ನಾಲೆಯಲ್ಲಿ ಅಪರಿಚಿತ ಮಹಿಳೆಯ ಶವ ಪತ್ತೆಯಾಗಿದ್ದು ಸ್ಥಳಕ್ಕೆ ಮದ್ದೂರು ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸುಮಾರು 30 ವರ್ಷದ ಅಪರಿಚಿತ ಮಹಿಳೆ ಶವ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿದರು. ಕೈಗಳಲ್ಲಿ ಟ್ಯಾಟೂ ಕಂಡುಬಂದಿದ್ದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದ್ದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಡಿ.ವೈ.ಎಸ್.ಪಿ ಕೃಷ್ಣಪ್ಪ, ಸಿ.ಪಿ.ಐ ಶಿವಕುಮಾರ್ ಭೇಟಿ ನೀಡಿ ಮಾಹಿತಿ ಕಲೆ ಹಾಕಿದರು.

ಹಲ್ಲೆ, ದೌರ್ಜನ್ಯ ಹೇಡಿತನ : ಸಿಎನ್‌ಸಿ

ಮಡಿಕೇರಿ: ಅರ್ಚಕ ವಿಘ್ನೇಶ್ ಭಟ್ ಮೇಲೆ ನಡೆದ ಹಲ್ಲೆ ಮತ್ತು ಕಳೆದ ವರ್ಷ ಡಿ.27 ರಂದು ಕಟ್ಟೆಮಾಡು ದೇವಾಲಯದಲ್ಲಿ ಕೊಡವ ಮಹಿಳೆಯರ ಮೇಲೆ ನಡೆದ

ದೌರ್ಜನ್ಯ ಪ್ರಕರಣವನ್ನು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ತೀವ್ರವಾಗಿ ಖಂಡಿಸುವುದಾಗಿ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ. ಅಸಹಾಯಕ ಅರ್ಚಕರ ಮೇಲೆ ಹಲ್ಲೆ ನಡೆಸಿರುವುದು ಮತ್ತು ಕೊಡವ ಮಹಿಳೆಯರ ಮೇಲೆ ದೌರ್ಜನ್ಯ ಎಸಗಿರುವುದು ಹೇಡಿತನದ ಕೃತ್ಯಗಳಾಗಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕೊಡವರ ಭೌಗೋಳಿಕ, ರಾಜಕೀಯ ಸ್ವಾಯತ್ತತೆ, ಸಾಂಸ್ಕೃತಿಕ ಪರಂಪರೆಯನ್ನು ಗುರುತಿಸುವುದು ಮತ್ತು ಸಾಂಪ್ರದಾಯಿಕ ಭೂಮಿಯನ್ನು ರಕ್ಷಿಸುವುದು ಸೇರಿದಂತೆ ಕೊಡವ ಸಮುದಾಯದ ಹಕ್ಕುಗಳಿಗಾಗಿ ಸಿಎನ್‌ಸಿ ಪ್ರತಿಪಾದಿಸುತ್ತಿದೆ. ಅಲ್ಲದೆ ಸಂವಿಧಾನದ ಆಶಯದಂತೆ ಅಹಿಂಸಾತ್ಮಕ ವಿಧಾನಗಳ ಮೂಲಕ ಈ ಗುರಿಗಳನ್ನು ಸಾಧಿಸಲು ಬಯಸುತ್ತದೆ. ದೌರ್ಜನ್ಯ ಪ್ರಕರಣಗಳು ಭವಿಷ್ಯದಲ್ಲಿ ಮರುಕಳಿಸಬಾರದು. ಎಲ್ಲಾ ಸಮುದಾಯಗಳು ಸಹಬಾಳ್ವೆಯಿಂದ ಬದುಕುವ ವಾತಾವರಣಕ್ಕೆ ಸಿಎನ್‌ಸಿ ಒತ್ತಾಯಿಸುತ್ತದೆ ಎಂದು ನಾಚಪ್ಪ ತಿಳಿಸಿದ್ದಾರೆ.

ಕಳವಾದ ಬಸ್ ಪತ್ತೆ, ಟೋಲ್ ಕಟ್ಟಲು ಹಣ

ಚಾಮರಾಜನಗರ: ಖಾಸಗಿ ವಜ್ರ ಬಸ್ ಕಳವಿನ ಪ್ರಕರಣ ಸುಖಾಂತ್ಯವಾಗಿದ್ದು ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಕಳವಾಗಿದ್ದ ಬಸ್ ಪತ್ತೆಯಾಗಿದೆ. ಈ ಕುರಿತು ವಜ್ರ ಬಸ್ ನ ಮಾಲೀಕರಾದ ಸೋಮನಾಯಕ ಮಾಹಿತಿ ಕೊಟ್ಟಿದ್ದು, ತಡರಾತ್ರಿ ಬಸ್ ಕಳವಾಗಿತ್ತು, ಸಾಮಾಜಿಕ ಜಾಲತಾಣದಲ್ಲಿ ಬಸ್ ಕಳವಾದ ಬಗ್ಗೆ ಮಾಹಿತಿ ಹಂಚಿಕೊಂಡಿದ್ದೆ. ಬಸ್ ಕಳವು ಮಾಡಿದವನು ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಟೋಲ್ ಕಟ್ಟಲು ಹಣ ಇಲ್ಲದೇ ಬಸ್ ಬಿಟ್ಟು ಪರಾರಿಯಾಗಿದ್ದಾನೆ. ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದು ನಮಗೆ ನೆರವಾಯಿತು ಎಂದಿದ್ದಾರೆ. ಬಸ್ ಕಳವಿನ ದೃಶ್ಯವು ಕೂಡ ಸಿಸಿಟಿವಿಯಲ್ಲಿ ಸೆರೆಯಾಗಿದ್ದು ನಗರದ ಎಲ್ ಐಸಿ ಬಳಿ ಬಸ್ ನಿಲ್ಲಿಸಿದ್ದಾಗ ಖದೀಮ ಬಸ್ ಕದ್ದೊಯ್ದಿದ್ದ.

ಫೈನಾನ್ಸ್ ಕಿರುಕುಳ: ರೈತರ ಪ್ರತಿಭಟನೆ

ಚಾಮರಾಜನಗರ: ಮೈಕ್ರೋ ಫೈನಾನ್ಸ್ ಕಿರುಕುಳ, ಆನ್ ಲೈನ್ ಜೂಜಾಟ ವಿರುದ್ಧ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಜಿಲ್ಲಾಧ್ಯಕ್ಷ ಹಾಲಿನ ನಾಗರಾಜು ನೇತೃತ್ವದಲ್ಲಿ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತದಲ್ಲಿ ಕೆಲಕಾಲ ರಸ್ತೆ ತಡೆದು ಆಕ್ರೋಶ ಹೊರಹಾಕಿದರು. ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಹಾವಳಿ ಹೆಚ್ಚಿದ್ದು, ರೈತರು ಮಹಿಳೆಯರು ಯುವಕರು ಆತ್ಮಹತ್ಯೆ ಹಾದಿ ಹಿಡಿಯುತ್ತಿದ್ದಾರೆ. ಕಂಪನಿಗಳು ವಸೂಲಾತಿ ನಿಯಮವನ್ನು ಪಾಲಿಸುತ್ತಿಲ್ಲ ಎಂದು ಕಿಡಿಕಾರಿದರು.

{ಎನ್ .ಚಲುವರಾಯಸ್ವಾಮಿ} ಕೃಷಿ ಸಚಿವ

ಅಧಿಕಾರಕ್ಕೆ ಯಾರು ಬಂದರೂ ಲಂಚ ನಿಲ್ಲುತ್ತಿಲ್ಲವೆಂದು ದೂರಿದರೆ ನಾನು ಜವಬ್ದಾರನಲ್ಲ. ಲಂಚ ನಿಲ್ಲುತ್ತಿಲ್ಲವೆಂದರೆ ಅದು ನಿಮ್ಮಗಳಿಂದಾಗುವ ಅಪರಾಧ. ನಿಮ್ಮ ತಪ್ಪುಗಳನ್ನು ಮುಚ್ಚಿಡಲು ಲಂಚ ಕೊಟ್ಟು ನಮ್ಮ ಮೇಲೆ ದೂರಿದರೆ ನಿಮಗೆ ಶೋಭೆ ತರಲ್ಲ.ಕಾನೂನಾತ್ಮಕವಾಗಿ ಎಲ್ಲಾ ದಾಖಲೆಗಳು ಸರಿಯಿದ್ದರೆ ಒಂದು ರುಪಾಯಿ ಲಂಚ ನೀಡಬೇಡಿ. ಆ ಕೆಲಸ ನಾನು ಮಾಡಿಸಿಕೊಡುತ್ತೇನೆ.

ಬೇಲೂರಿನಲ್ಲಿ ತಾಲೂಕು ಆಡಳಿತದಿಂದ ಜನಸ್ಪಂದನ | ಸಚಿವ ಎನ್.ಚಲುವರಾಯಸ್ವಾಮಿ ಚಾಲನೆ

ಕಚೇರಿಗಳಲ್ಲಿ ದೂರು ಪುಸ್ತಕ ಕಡ್ಡಾಯ

ನಾಗಮಂಗಲ: ತಾಲೂಕು ಮಾತ್ರವಲ್ಲದೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ, ನಾಡಕಚೇರಿಗಳು ಸೇರಿದಂತೆ ಎಲ್ಲಾ ಇಲಾಖೆಗಳ ಕಚೇರಿಗಳಲ್ಲಿ ಕಡ್ಡಾಯವಾಗಿ ಸಾರ್ವಜನಿಕರಿಗೆ ದೂರು ಪುಸ್ತಕ ಇಡಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸೂಚಿಸಿದರು.

ತಾಲೂಕಿನ ಬೇಲೂರು ಪಟ್ಟಣದಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ ಜನಸ್ಪಂದನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಜಿಲ್ಲೆಯಲ್ಲಿ ಸರಳ ಹಾಗೂ ಪ್ರಾಮಾಣಿಕವಾದ ಆಡಳಿತ ಜಾರಿಗೆ ತರಲು ಹಲವು ಬದಲಾವಣೆಗಳನ್ನು ಜಾರಿಗೆ ತರಲಾಗುತ್ತಿದೆ. ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರಿಗೆ ದೂರು ಪುಸ್ತಕವನ್ನಿಡಬೇಕು. ಆ ಪುಸ್ತಕದಲ್ಲಿ ಸಾರ್ವಜನಿಕರು ಯಾವುದೇ ರೀತಿಯ ಕುಂದು ಕೊರತೆಗಳಿದ್ದರೆ ಅಲ್ಲಿ ಬರೆಯಬೇಕು ಎಂದರು.

ದೂರುಗಳು ಆ ಇಲಾಖೆಯ ಅಧಿಕಾರಿ ವಿರುದ್ಧ ಇದ್ದರೂ ಅದನ್ನು ಪರಿಶೀಲಿಸಿ ಕ್ರಮ ವಹಿಸಬೇಕು. ಆ ಇಲಾಖೆ ಮೇಲಾಧಿಕಾರಿಗಳು ತಿಂಗಳಿಗೊಮ್ಮೆ ಮೇಲ್ವಿಚಾರಣೆ ನಡೆಸಿ ದೂರುದಾರರನ್ನು ಕರೆಸಿ ಸಮಸ್ಯೆ ಬಗೆಹರಿಸಬೇಕು. ನಿರ್ಲಕ್ಷ್ಯ ಮಾಡಿದರೆ ಕ್ರಮಜರುಗಿಸಿ ಅಮಾನತುಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸರಕಾರದ ವೆಚ್ಚಗಳಿದ್ದರೆ ಅಂತಹ ಮೊತ್ತವನ್ನು ಮಾತ್ರ ಪಾವತಿಸಿ ಕೆಲಸ ಮಾಡಿಸಿಕೊಳ್ಳಿ. ಜನರು ತಾಳ್ಮೆಯಿಂದ ವರ್ತಿಸಬೇಕು, ನಿಮ್ಮ ತುರ್ತಿಗಾಗಿ ಲಂಚ ನೀಡುವುದು ಕೂಡ ಅಪರಾಧ. ಒಂದೇ ಸಲ ಹತ್ತಾರು ಜನ ಇವತ್ತೆ ಕೆಲಸ ಆಗಬೇಕು ಎಂದು ದುಂಬಾಲು ಬಿದ್ದರೆ ಕೆಲಸಗಳು ಆಗಲ್ಲ. ತಾಳ್ಮೆಯಿಂದ ಕೆಲಸ ಮಾಡಿಸಿಕೊಳ್ಳಿ. ಸಾರ್ವಜನಿಕರ ಕೆಲಸ ಮಾಡಿಸಿಕೊಡುವುದು ಸರಕಾರದ ಜವಾಬ್ದಾರಿ ಕೂಡ ಎಂದು ಹೇಳಿದರು.

ವಿಪಕ್ಷಗಳು ಒದ್ದಾಡ್ತಿವೆ: ನಮ್ಮ ಸರಕಾರ ಗ್ಯಾರಂಟಿಗಳನ್ನು ನೀಡುವ ಜತೆಗೆ ರಾಜ್ಯದಲ್ಲಿ ಹತ್ತು ಹಲವು ಐತಿಹಾಸಿಕ ಯೋಜನೆಗಳನ್ನು ಜಾರಿಗೆ ತರುತ್ತಿದೆ. ಬಿಜೆಪಿ ಮತ್ತು ಜೆಡಿಎಸ್ ಪಕ್ಷದವರು ವಿಲವಿಲ ಅಂತ ಒದ್ದಾಡ್ತಿದ್ದಾರೆ. ಜನರಿಗೆ ಇಷ್ಟೆಲ್ಲಾ ಯೋಜನೆಗಳನ್ನು ಕೊಡುತ್ತಿದ್ದಾರೆ ಅಂತ ಅವರಿಗೆ ಸಹಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಕಳೆದ 5 ವರ್ಷಗಳಲ್ಲಿ ಅಧಿಕಾರ ನಡೆಸಿದವರು ನಾನು ಆರಂಭಿಸಿದ್ದ ಕಾಮಗಾರಿ ಪೂರ್ಣಗೊಳಿಸಲು ಆಗಿಲ್ಲ. ಈಗ ಮತ್ತೆ ನಾನೇ ಅಧಿಕಾರಕ್ಕೆ ಬಂದು ಪೂರ್ಣಗೊಳಿಸುತ್ತಿದ್ದೇನೆ.

ಆದರೂ ಮಾಧ್ಯಮಗಳ ಮುಂದೆ ಹಾಗೂ ತಾಲೂಕಿನ ಜನರ ಮುಂದೆ ಮೀಸೆ ತಿರುವುತ್ತಾರೆ, ತೊಡೆ ತಟ್ಟಿ ವೀರಾವೇಷದಿಂದ ಮಾತನಾಡುತ್ತಾರೆ ಎಂದು ಮಾಜಿ ಶಾಸಕ ಸುರೇಶ್‌ಗೌಡ ವಿರುದ್ಧ ಪರೋಕ್ಷವಾಗಿ ಆಕ್ರೋಶ ವ್ಯಕ್ತಪಡಿಸಿದರು. ವೇದಿಕೆಯಲ್ಲಿ ಉಪ ವಿಭಾಗಾಧಿಕಾರಿ ಶ್ರೀನಿವಾಸ್, ತಹಸೀಲ್ದಾರ್ ಆದರ್ಶ್, ಬೆಳ್ಳೂರು ಪಪಂ ಅಧ್ಯಕ್ಷೆ ಲಕ್ಷ್ಮಮ್ಮ ಮಹೇಶ್, ಉಪಾಧ್ಯಕ್ಷ ಮಹಮ್ಮದ್ ಯಾಸೀನ್, ಗ್ಯಾರಂಟಿ ತಾ.ಅಧ್ಯಕ್ಷ ಮೂಡ್ಲಿಗೌಡ, ಪಪಂ ಸ್ಥಾಯಿ ಸಮಿತಿ ಅಧ್ಯಕ್ಷ ಆಕಾಶ್, ಡಿಸಿಸಿ ಬ್ಯಾಂಕ್ ನಿರ್ದೇಶಕ ದಿನೇಶ್, ಜಿ.ಪಂ.ಮಾಜಿ ಸದಸ್ಯ ಸುರೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಜೆ. ರಾಜೇಶ್, ಪಪಂ ಸದಸ್ಯ ಲ್ಯಾಬ್ ಮಂಜು, ಮುಖಂಡರಾದ ಸುನೀಲ್ ಲಕ್ಷ್ಮೀಕಾಂತ್, ಪಾಪಣ್ಣ, ಶಿವಣ್ಣ ಇದ್ದರು.



ಬೆಳ್ಳೂರು ಪಟ್ಟಣದಲ್ಲಿ ನಡೆದ ಜನಸ್ಪಂದನ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು.

ಸಚಿವರಿಂದ ಹಲವು ಕಾಮಗಾರಿಗಳಿಗೆ ಚಾಲನೆ

ಬೆಳ್ಳೂರು ಪಟ್ಟಣದ ಎಎಲ್‌ಕೆ ಪದವಿಪೂರ್ವ ಕಾಲೇಜಿನ ನೂತನ ಕಟ್ಟಡ ಉದ್ಘಾಟನೆ, ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯ ಕಾಮಗಾರಿ ಭೂಮಿಪೂಜೆ, ಪಟ್ಟಣದ ಶುದ್ಧ ಕುಡಿವ ನೀರಿನ ಯೋಜನೆಗೆ ಚಾಲನೆ, ಸರಕಾರಿ ಶಾಲೆ ನೂತನ ಕಟ್ಟಡ ಉದ್ಘಾಟನೆ, ತಾಲೂಕು ಆಡಳಿತಸೌಧದಲ್ಲಿ ಇ-ಆಫೀಸ್ ಉದ್ಘಾಟನೆ, ತುಪ್ಪದಮಡು ಗ್ರಾಮದಲ್ಲಿ ರಸ್ತೆ ಕಾಮಗಾರಿಗೆ ಸಚಿವ ಚಲುವರಾಯಸ್ವಾಮಿ ಚಾಲನೆ ನೀಡಿದರು.

ಕಸ್ತೂರಿ ವೇದಿಕೆಯಿಂದ ಗಣರಾಜ್ಯೋತ್ಸವ

ಚಾಮರಾಜನಗರ: ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನ ಇಡೀ ವಿಶ್ವಕ್ಕೆ ಮಾದರಿಯಾಗಿದೆ ಎಂದು ಕಸ್ತೂರಿ ಕನ್ನಡ ಜನಪರ ಹೋರಾಟ ವೇದಿಕೆ ಜಿಲ್ಲಾಧ್ಯಕ್ಷ ಎಂ.ನಾಗಬಸವಣ್ಣ ರಾಮಸಮುದ್ರ ಹೇಳಿದರು.

ನಗರದ ಚಾಮರಾಜೇಶ್ವರ ಉದ್ಯಾನ ಬಳಿ ಕಸ್ತೂರಿ ಕನ್ನಡ ಜನಪರ ಹೋರಾಟ ವೇದಿಕೆ ವತಿಯಿಂದ ನಡೆದ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ಸಂವಿಧಾನದ ಕರಡು ರಚನಾ ಸಮಿತಿ ಅಧ್ಯಕ್ಷರಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರಿಂದ ಪರಿಪೂರ್ಣ ಸಂವಿಧಾನ ರಚನೆಗೆ ಕೊಡುಗೆ ಅಪಾರವಾಗಿದೆ ಎಂದರು.

ವೇದಿಕೆ ಜಿಲ್ಲಾ ಉಪಾಧ್ಯಕ್ಷರಾದ ಬಿ.ಎಂ. ಮುಕುಂದಮೂರ್ತಿ, ಮಹದೇವಶೆಟ್ಟಿ, ಕಾರ್ಯಾಧ್ಯಕ್ಷ ಕುಮಾರ್, ಪ್ರಧಾನ ಕಾರ್ಯದರ್ಶಿಗಳಾದ ಎನ್. ಮಹದೇವಸ್ವಾಮಿ, ಮಹದೇವಸ್ವಾಮಿ ಬದನಗುಪ್ಪೆ, ಸಂಚಾಲಕರಾದ ಸೈಯದ್‌ಅಬ್ರಾರ್, ಮಹಮದ್ ಅಬ್ಬಾಸ್, ಮಹಮ್ಮದ್ ಮುಹಿಬ್, ರೇವಣ್ಣ, ಬಂಗಾರಸ್ವಾಮಿ, ಸೈಯದ್ ಆಸಿಫ್, ಸಿದ್ದಪ್ಪ, ಶಿವಕುಮಾರ್, ಮಹದೇವಸ್ವಾಮಿ ಮಾಸ್ಟರ್ ಇದ್ದರು.

ಕಸ್ತೂರಿ ಕನ್ನಡ ಜನಪರ ಹೋರಾಟ ವೇದಿಕೆಯಿಂದ ಗಣರಾಜ್ಯೋತ್ಸವ ಆಚರಿಸಲಾಯಿತು.

ಓದಿದ ಶಾಲೆಗೆ ಕಂಪ್ಯೂಟರ್ ಉಡುಗೊರೆ

ಕೆ ಆರ್ ಪೇಟೆ: ಬೂಕನಕರೆ ಹೋಬಳಿ ಮುದುಗೆರೆ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ಶಿಕ್ಷಣಕ್ಕೆ ಅನುಕೂಲವಾಗುವಂತೆ ಬೆಂಗಳೂರಿನ ಅಂಬೇಡ್ಕರ್ ಎಂಜಿನಿಯರಿಂಗ್ ಕಾಲೇಜಿನ ಉಪನ್ಯಾಸಕ ಡಾ.ಎಂ.ಡಿ.ಕೃಷ್ಣ ಹಾಗೂ ಅವರ ಪತ್ನಿ ಎಂಜಿನಿಯರ್ ಎಂ.ಬಿ.ಸ್ವರ್ಣ ಕೃಷ್ಣ ದಂಪತಿ ತಾವು ಓದಿದ ಶಾಲೆಗೆ ಏನಾದರೂ ನೀಡುವ ಹಂಬಲದಿಂದ ಕಂಪ್ಯೂಟರ್ ಗಳನ್ನು ಉಚಿತವಾಗಿ ನೀಡಿದ್ದಾರೆ.

ನಂತರ ಮಾತನಾಡಿದ ಡಾ.ಎಂ.ಡಿ.ಕೃಷ್ಣ , ನಾನು ಓದಿದ ಶಾಲೆ, ನನ್ನ ಹುಟ್ಟೂರು ಮುದುಗೆರೆ ಗ್ರಾಮದ ಶಾಲೆಯ ಮಕ್ಕಳಿಗೆ ಶಿಕ್ಷಣಕ್ಕೆ ಒತ್ತು ನೀಡುವ ಉದ್ದೇಶದಿಂದ ಕಂಪ್ಯೂಟರ್ ಉಚಿತವಾಗಿ ನೀಡಿದ್ದೇವೆ. ಇದರಿಂದ ನಮಗೆ ಆತ್ಮ ಸಂತೋಷವಾಗಿದೆ. ನಾವು ಬಡತನದಲ್ಲಿ ಬೆಳೆದು ಕಷ್ಟ ಪಟ್ಟು ಸರಕಾರಿ ಶಾಲೆಯಲ್ಲಿ ಓದಿ, ತಂದೆ ತಾಯಿ ಆಶೀರ್ವಾದದಿಂದ ಈ ಸಾಧನೆ ಮಾಡುವಂತಾಯಿತು ಎಂದರು.

ಗಂಜಿಗೆರೆ ಗ್ರಾಪಂ ಅಧ್ಯಕ್ಷ ಪರಮೇಶ್ ಮಾತನಾಡಿ, ನಮ್ಮೂರಿನವರೇ ಆದ ಡಾ.ಎಂ.ಡಿ.ಕೃಷ್ಣ ಹಾಗೂ ಅವರ ಮಡದಿ ಎಂಜಿನಿಯರ್ ಎಂ.ಬಿ. ಸ್ವರ್ಣಕೃಷ್ಣ ದಂಪತಿ ಹಾಗೂ ಸಮಾಜ ಸೇವಕ ರಾಜೇನಹಳ್ಳಿ ರೇವಣ್ಣ ನಮ್ಮೂರ ಶಾಲೆಯ ಮಕ್ಕಳಿಗೆ ಕಂಪ್ಯೂಟರ್ ನೀಡಿರುವುದು ಸಂತೋಷದ ಸಂಗತಿ ಎಂದರು.

ಈ ವೇಳೆ ಸಿ ಆರ್ ಸಿ ಧನೇಂದ್ರಕುಮಾರ್,ಸಮಾಜ ಸೇವಕ ರಾಜೇನಹಳ್ಳಿ ರೇವಣ್ಣ, ಎಂಜಿನಿಯರ್ ಸ್ವರ್ಣಕೃಷ್ಣ, ಗ್ರಾಪಂ ಮಾಜಿ ಸದಸ್ಯ ಯೋಗಣ್ಣ ಮುಖ್ಯ ಶಿಕ್ಷಕ ಬಲರಾಮು,ಮೂರ್ತಿ ಇದ್ದರು.

ಸಂವಿಧಾನದ ರಕ್ಷಣೆ ಪ್ರತಿಯೊಬ್ಬರ ಹೊಣೆ

ಮದ್ದೂರು: ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನದ ರಕ್ಷಣೆ ಪ್ರತಿಯೊಬ್ಬರ ಆದ್ಯ ಕರ್ತವ್ಯ ಎಂದು ಪುರಸಭಾ ಅಧ್ಯಕ್ಷೆ ಕೋಕಿಲಾ ರುಣ್ ತಿಳಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಭಾರತ ಸಂವಿಧಾನ ರಕ್ಷಣಾ ವೇದಿಕೆ ಹಾಗೂ ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ವೇದಿಕೆ ಆಯೋಜಿಸಿದ್ದ 76ನೇ ಗಣರಾಜ್ಯೋತ್ಸವದಲ್ಲಿ ಮಾತನಾಡಿದರು.

ಸಂವಿಧಾನದಿಂದಾಗಿ ಮಹಿಳೆಯರು ಉನ್ನತ ಹುದ್ದೆಗಳನ್ನು ಅಲಂಕರಿಸಲು ಸಾಧ್ಯವಾಗಿದೆ. ಮಹಿಳೆಯರಿಗಾಗಿ ಹಕ್ಕು ಹಾಗೂ ಮೀಸಲಾತಿ ಸೌಲಭ್ಯ ಕಲ್ಪಿಸಿದ್ದಾರೆ ಎಂದರು.

ಸಂಪನ್ಮೂಲ ವ್ಯಕ್ತಿ ಟಿ.ಎನ್.ಚಿಕ್ಕವೀರಯ್ಯ ಮಾತನಾಡಿ, ದೇಶದ ಪ್ರತಿಯೊಬ್ಬರಿಗೂ ಸಮಾನತೆ, ಏಕತೆ ತಂದುಕೊಟ್ಟ ಸಂವಿಧಾನವನ್ನು ಗೌರವಿಸಿ ಮುಂದಿನ ಪೀಳಿಗೆಗೂ ಪರಿಚಯಿಸುವ ಕೆಲಸವಾಗಬೇಕೆಂದರು.

ಅಭಿನಂದನೆ: ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸೋ.ಶಿ.ಪ್ರಕಾಶ್ (ಹೋರಾಟ), ಎಂ.ಆರ್.ಶಿವಾನಂದಯ್ಯ(ಸೇವೆ), ಸಿದ್ದರಾಜು(ರಾಜಕೀಯ), ಜಯರಾಮು, ಜೆ.ಬಿ.ಪ್ರೇಮ್‌ಕುಮಾರ್(ಸಾಮಾಜಿಕ), ಹುರಗಲವಾಡಿ ರಾಮಯ್ಯ(ಜಾನಪದ), ಚಂದ್ರು(ಸಾಹಿತ್ಯ), ದಾಕ್ಷಾಯಿಣಿ(ಸಂಘಟನೆ) ರವರನ್ನು ಅಭಿನಂದಿಸಿದರು.

ಸಂಶೋಧನಾ ಪರಿಷತ್‌ನ ಗೌರವಾಧ್ಯಕ್ಷ ಎಂ.ಸಿ.ಬಸವರಾಜು, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸಿದ್ದರಾಜು, ಬಿಸಿಎಂ ವೇದಿಕೆ ಅಧ್ಯಕ್ಷೆ ಎಲ್.ಸಂದೇಶ್‌ಕುಮಾರ್, ಜಾಗೃತಿ ವೇದಿಕೆ ಅಧ್ಯಕ್ಷ ಎಂ.ಕೃಷ್ಣ, ಎಸ್ಸಿಎಸ್ಟಿ ನೌಕರ ಸಂಘದ ಅಧ್ಯಕ್ಷ ಶಿವಣ್ಣ, ಕೆ.ಟಿ.ಶಿವಕುಮಾರ್, ಅಹಿಂದ ವೇದಿಕೆ ಅಧ್ಯಕ್ಷೆ ನಿಂಗಪ್ಪ ಇದ್ದರು.

ಸಾಧಕರನ್ನು ಪುರಸಭೆ ಅಧ್ಯಕ್ಷೆ ಕೋಕಿಲಾಅರುಣ್ ಅಭಿನಂದಿಸಿ ಗೌರವಿಸಿದರು.

ಪ್ರಸ್ತುತ ಬದುಕಿಗೆ ಅತ್ಯಮೂಲ್ಯ ಸಮಯವೇ ಹಣ

ಸುತ್ತೂರಿನಲ್ಲಿ ಶ್ರೀ ಶಿವರಾತ್ರಿಶ್ರೀಗಳ ರಥೋತ್ಸವ | ಧಾರ್ಮಿಕ ಸಭೆ | ಮಾಜಿ ಡಿಸಿಎಂ ಅಶ್ವಥ್ ನಾರಾಯಣ

ಮೈಸೂರು: ಈಗಿನ ಸ್ಪರ್ಧಾ ಕಾಲಕ್ಕೆ ಸಮಯವೇ ಹಣ ಎಂಬಂತಾಗಿದ್ದು, ಎಲ್ಲವೂ ಲಾಭದ ಲೆಕ್ಕಾಚಾರದಲ್ಲಿ ನಡೆದಿದೆ ಎಂದು ಮಾಜಿ ಉಪಮುಖ್ಯಮಂತ್ರಿ, ಶಾಸಕ ಡಾ.ಸಿ.ಎನ್. ಅಶ್ವಥ್ ನಾರಾಯಣ ಸೂಚ್ಯವಾಗಿ ತಿಳಿಸಿದರು.

ಮೈಸೂರಿನ ಸುತ್ತೂರು ಸುಕ್ಷೇತ್ರದಲ್ಲಿ ಮಂಗಳವಾರ ನಡೆದ ಶಿವರಾತ್ರಿ ಶಿವಯೋಗಿಗಳ ರಥೋತ್ಸವ ಹಾಗೂ ಧಾರ್ಮಿಕ ಸಭೆಯಲ್ಲಿ ಅವರು ಮಾತನಾಡಿದರು.

ಹಣವೇ ಇಂದು ಮುಂದಾಗಿರುವ ಸಂದರ್ಭದಲ್ಲಿ ಎಲ್ಲವೂ ಲಾಭದ ಲೆಕ್ಕಾಚಾರದಲ್ಲಿ ನಡೆದಿದೆ. ಬಿಡುವಿಲ್ಲದ ಸಮಯದ ನಡುವೆಯೂ ಜಾತ್ರೆ ಆಚರಣೆ ಮೂಲಕ ನಮ್ಮ ಸಂಸ್ಕೃತಿ , ಧರ್ಮದ ಉಳಿವು ನಡೆದಿದೆ ಎಂದು ಹೇಳಿದರು.

ಮದುವೆಗೆ ಇಂದು ಲಕ್ಷಾಂತರ ರೂ. ವೆಚ್ಚ ಆಗಲಿದೆ. ಸಾಲದ ಭಾರ ಕಡಿಮೆ ಮಾಡುವ ಉದ್ದೇಶದಿಂದ ಸುತ್ತೂರು ಮಠ ಸಾಮೂಹಿಕ ವಿವಾಹ ನಡೆಸುತ್ತಿರುವುದು ಔಚಿತ್ಯಪೂರ್ಣ. ಇನ್ನಷ್ಟು ಸತ್ಕಾರ್ಯ ಶ್ರೀಗಳ ನೇತೃತ್ವದಲ್ಲಿ ನಡೆಯಲಿ ಎಂದು ಆಶಿಸಿದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಸುತ್ತೂರು ಶ್ರೀಗಳು ಅನ್ನ, ಅಕ್ಷರ, ರೈತರ ಪರ ಕೆಲಸ ಮಾಡುತ್ತಿದ್ದಾರೆ. ರೈತರ ಬಗ್ಗೆ ಅಪಾರ ಕಾಳಜಿ ಇಟ್ಟು ಹಲವಾರು ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಮಾತ್ರವಲ್ಲ, ಸಂಸ್ಕಾರ ಉಳಿಸಿ ಬೆಳೆಸುವಲ್ಲಿಯೂ ಕೂಡ ಮಠ ನಾಂದಿ ಹಾಡಿದೆ ಎಂದರು.

ಶಾಸಕ ತನ್ವೀರ್ ಶೇಟ್ ಮಾತನಾಡಿ, ಸುತ್ತೂರು ಜಾತ್ರೆಯಿಂದ ಸಮಾಜಕ್ಕೆ ಮಾರ್ಗದರ್ಶನ ನಡೆದಿದೆ. ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕವಾಗಿ ಸುತ್ತೂರು ಮಠದ ಕೊಡುಗೆ ಅಪಾರವಾಗಿದ್ದು, ನಮ್ಮ ನಂಬಿಕೆ, ಧಾರ್ಮಿಕ ಆಚರಣೆಗಳಿಂದ ಪಡೆಯುವ ಸುಖ ನೆಮ್ಮದಿಗೆ ಇಂತಹ ಜಾತ್ರೆಗಳೇ ಸಾಕ್ಷಿ ಎಂದರು.

ಪಳನಿಯ ಶ್ರೀ ಪುಲಿಪ್ಪನಿ ಸಿದ್ದರ್ ಆಶ್ರಮದ ಶ್ರೀವಲಾರ್ ಶಿವಾನಂದ ಪುಲಿಪ್ಪನಿ ಪಾತಿರಕರ ಸ್ವಾಮಿಗಳ್, ಹೊಸಪೇಟೆ ಶ್ರೀ ಮುಪ್ಪಿನ ಬಸವಲಿಂಗ ಸ್ವಾಮಿಜಿ ಹಾಗೂ ಸುತ್ತೂರು ಶ್ರೀಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಈ ವೇಳೆ ಶಾಸಕರಾದ ಡಾ.ಸಿ.ಎನ್.ಅಶ್ವಥ್ ನಾರಾಯಣ, ತನ್ವೀರ್ ಸೇಟ್, ಶ್ರೀವತ್ಸ, ಜಿ.ಟಿ.ದೇವೇಗೌಡ, ಉದ್ಯಮಿಗಳಾದ ಎಚ್.ಎಸ್. ರಾಘವೇಂದ್ರ ರಾವ್, ದಿಲೀಪ್ ಪಾರ್ಥಸಾರಥಿ, ಬಾಬು ಕೀಲಾರ, ವಸುಧಾ ಕೀಲಾರ, ನಿಶಾಂತ್, ಡಾ.ಎಂ.ಎಸ್.ರವೀಂದ್ರ, ವಿಧೂಷಿ ಡಾ.ವಸುಂಧರ ದೊರೆಸ್ವಾಮಿ ಉಪಸ್ಥಿತರಿದ್ದರು.

ರಥೋತ್ಸವ ನಿಮಿತ್ತ ನಡೆದ ಧಾರ್ಮಿಕ ಸಭೆಯನ್ನು ಡಾ.ಸಿ.ಎನ್. ಅಶ್ವಥ್ ನಾರಾಯಣ ಉದ್ಘಾಟಿಸಿದರು.

ಕರೋಹಟ್ಟಿ ಗ್ರಾಪಂ ಉಪಾಧ್ಯಕ್ಷರಾಗಿ ರೇವಣ್ಣ ಆಯ್ಕೆ

ತಿ.ನರಸೀಪುರ: ತಾಲೂಕಿನ ಕರೋಹಟ್ಟಿ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರಾಗಿ ರೇವಣ್ಣ ಅವಿರೋಧ ಆಯ್ಕೆಯಾದರು.

ನಿಕಟಪೂರ್ವ ಉಪಾಧ್ಯಕ್ಷ ನಾಗರಾಜು ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ರೇವಣ್ಣ ಒಬ್ಬರೇ ನಾಮಪತ್ರ ಸಲ್ಲಿಸಿದ ಕಾರಣ ಚುನಾವಣಾಧಿಕಾರಿ ಎಇಇ ಮಂಜುನಾಥ್ ಆಯ್ಕೆಯನ್ನು ಘೋಷಿಸಿದರು. ಅವರ ಬೆಂಬಲಿಗರು ಪಟಾಕಿ ಸಿಡಿ ಸಂಭ್ರಮಿಸಿದರು. ಸದಸ್ಯರ ಸಹಕಾರದೊಂದಿಗೆ ಕುಡಿಯುವ ನೀರು, ಬೀದಿದೀಪ, ಚರಂಡಿ, ಮೂಲ ಸೌಕರ್ಯ ಒದಗಿಸುವ ಕಡೆ ಹೆಚ್ಚು ಗಮನಹರಿಸಲಾಗುವುದು ಎಂದು ಹೇಳಿದರು. ಗ್ರಾಪಂ ಅಧ್ಯಕ್ಷೆ ಮಂಜುಳ, ಸದಸ್ಯರಾದ ಕೆ.ಬಿ.ಜಗದೀಶ್, ಪುಟ್ಟಸ್ವಾಮಿ, ಎಸ್.ಎಲ್.ಜಯಶ್ರೀ, ನಂದಿನಿ, ನಾಗರಾಜು, ಪ್ರಭು, ಪುಟ್ಟಬಸಮ್ಮ, ಸುಶೀಲಮ್ಮ, ಸುರೇಶ್, ಮಂಜು, ಪಿಡಿಓ ಸುಲೇಮಾನ್ ರಾಜ್, ಮಾಜಿ ಅಧ್ಯಕ್ಷ ಚಿಕ್ಕಣ್ಣ, ಮುಖಂಡರಾದ ಕೇತಹಳ್ಳಿ ಲಿಂಗರಾಜು, ಬನ್ನಹಳ್ಳಿ ಸೋಮಣ್ಣ, ಕುಮಾರ್, ಹಸಿರುಬೇಳೆ ಮಹದೇವ್, ರಾಜಣ್ಣ, ಗುರುಮಲ್ಲಪ್ಪ ಇದ್ದರು.

ಸಂವಿಧಾನದಿಂದ ಸಿಕ್ಕಿದೆ ಸಮಾನತೆಯ ಅವಕಾಶ

ರಾಜ್ಯ ಛಲವಾದಿ ಸಂಘದ ಸಮಿತಿಯಿಂದ ಗಣರಾಜ್ಯೋತ್ಸವ ನಡೆಯಿತು.

ಚಾಮರಾಜನಗರ: ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನದ ಮೂಲಕ ಪ್ರತಿಯೊಬ್ಬರಿಗೂ ಸಮಾನ ಅವಕಾಶ ತಂದು ಕೊಟ್ಟಿದ್ದಾರೆ ಎಂದು ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಡಾ. ಎನ್. ರೇಣುಕಾದೇವಿ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ರಾಜ್ಯ ಛಲವಾದಿ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಸಮಿತಿ ವತಿಯಿಂದ ನಡೆದ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅಂಬೇಡ್ಕರ್ ಅವರು ದೇಶಕ್ಕೆ ಉತ್ತಮ ಸಂವಿಧಾನ ಬರೆದುಕೊಡುವ ಮೂಲಕ ಮೂಲಕ ಪ್ರತಿಯೊಬ್ಬರಿಗೂ ಸಮಾನ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಎಂದರು.

ಛಲವಾದಿ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಚಿದರವಳ್ಳಿ ಮಹದೇವಸ್ವಾಮಿ ಮಾತನಾಡಿ, ನಮ್ಮ ಸಂವಿಧಾನದಲ್ಲಿ ಸರ್ವರಿಗೂ ಸಮಪಾಲು, ಸಮಬಾಳು ಕೊಟ್ಟಿದ್ದಾರೆ. ಸಂವಿಧಾನದ ಆಶಯದಂತೆ ನಡೆದುಕೊಂಡರೆ ಸೌಹಾರ್ದತೆ ನೆಲೆಸಲು ಸಾಧ್ಯ ಎಂದರು.

ಸಂಘದ ಜಿಲ್ಲಾಧ್ಯಕ್ಷ ಎಂ.ಶಿವನಾಗಣ್ಣ ಮಾತನಾಡಿ, ಸಂಘದ ವತಿಯಿಂದ ಏಪ್ರಿಲ್ ನಲ್ಲಿ ಒಂದು ಸಾವಿರ ಜನರನ್ನು ಸೇರಿ ಒಂದು ಅದ್ಭುತ ಕಾರ್ಯಕ್ರಮ ಮಾಡಲು ಚಿಂತಿಸಲಾಗಿದೆ ಎಂದರು.

ಗುತ್ತಿಗೆದಾರರಾದ ಎಂ.ಎಸ್. ಮಾದಯ್ಯ, ಭೂಸೇನಾ ನಿಗಮದ ಎಇಇ. ಚಿಕ್ಕಲಿಂಗಯ್ಯ ಮಾತನಾಡಿದರು.

ಸಂಘದ ರಾಜ್ಯಾಧ್ಯಕ್ಷರು ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ರವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ಸಂಘದ ಉಪಾಧ್ಯಕ್ಷ ಕೃಷ್ಣರಾಜು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೋಮು ಸುಂದರ್, ಜಿಲ್ಲಾ ಖಜಾಂಚಿ ಎ.ಶಿವಣ್ಣ, ರವಿ, ಲಿಂಗಯ್ಯ, ಹೊಂಗನೂರು ಶಿವಕುಮಾರ್, ಅಮಚವಾಡಿ ಮಹೇಶ್, ಸಿದ್ದಯ್ಯಪುರದ ಸಿದ್ದರಾಜು, ಬಿಸಲವಾಡಿ ನಾಗರಾಜು, ಸಾವಿತ್ರಿ,ವೃಷಬೇಂದ್ರ, ಮಹದೇವಪ್ರಸಾದ್, ಬಸವರಾಜು, ಸಿದ್ದರಾಜು, ಪ್ರಸಾದ್, ರಾಜ್, ಸುರೇಂದ್ರ, ಪುಟ್ಟಲಿಂಗಮ್ಮ, ಮುರುಗೇಶ್, ಪಿ.ಶಾಂತರಾಜು, ಮತ್ತಿತರರು ಇದ್ದರು.

ಕಾರ್ಯಪ್ಪ ಸಮಾಧಿ ಸ್ಥಳಕ್ಕೆ ಪುಷ್ಪ ನಮನ

ಮಡಿಕೇರಿ: ಮಡಿಕೇರಿಯ ರೋಶನಾರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಸಮಾಧಿ ಸ್ಥಳದಲ್ಲಿ ಕಾರ್ಯಪ್ಪ ಅವರ 126ನೇ ವರ್ಷದ ಜನ್ಮದಿನ ಆಚರಿಸಲಾಯಿತು.

ಕಾರ್ಯಪ್ಪ ಅವರ ಪುತ್ರ ನಿವೃತ್ತ ಏರ್ ಮಾರ್ಷಲ್ ನಂದಾ ಕಾರ್ಯಪ್ಪ, ಸೊಸೆ ಮೀನಾ ಕಾರ್ಯಪ್ಪ, ಪುತ್ರಿ ನಳಿನಿ ಕಾರ್ಯಪ್ಪ, ನಿವೃತ್ತ ಕರ್ನಲ್ ಬಿ.ಜಿ.ವಿ. ಕುಮಾರ್, ಕೊಡಗು ವಿವಿ ಆಡಳಿತ ಮಂಡಳಿ ನಿರ್ದೇಶಕ ಸಿ.ಎಸ್. ಗುರುದತ್, ಪ್ರಾಚಾರ್ಯೆ ಸುಮಿತ್ರಾ, ಆಡಳಿತಾಧಿಕಾರಿ ರವಿ ಮತ್ತಿತರ ಗಣ್ಯರು ಕಾರ್ಯಪ್ಪ ಅವರ ಸಮಾಧಿ ಸ್ಥಳಕ್ಕೆ ಪುಷ್ಪಾರ್ಚನೆ ಮೂಲಕ ಗೌರವ ಸಮರ್ಪಿಸಿದರು.

ಭಾರತಕ್ಕೆ ಗುಣಮಟ್ಟದ ಮೂಲಸೌಕರ್ಯ ಬೇಕಿದೆ: ಸಂಸದ

ಮೈಸೂರು: 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ಆರ್ಥಿಕತೆಯನ್ನಾಗಿ ಪರಿವರ್ತಿಸುವಲ್ಲಿ ಎಂಜಿನಿಯರ್‌ಗಳು ಪ್ರಮುಖ ಪಾತ್ರ ವಹಿಸಲಿದ್ದಾರೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ವಿದ್ಯಾವರ್ಧಕ ಕಾಲೇಜ್ ಆಫ್ ಎಂಜಿನಿಯರಿಂಗ್ (ವಿವಿಸಿಇ) ಕ್ಯಾಂಪಸ್‌ನಲ್ಲಿ ನಡೆದ 'ಎನ್ವೆಂಚರ್ ಆಟೋ ಡೆಸ್ಕ್ ಸೆಂಟರ್ ಆಫ್ ಎಕ್ಸಲೆನ್ಸ್ 'ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಇದು ಶೈಕ್ಷಣಿಕ ಮತ್ತು ಉದ್ಯಮವನ್ನು ಒಟ್ಟುಗೂಡಿಸುತ್ತದೆ. ವಿದ್ಯಾರ್ಥಿಗಳು ಪದವಿ ಪಡೆಯುವ ಹೊತ್ತಿಗೆ ಉದ್ಯಮಕ್ಕೆ ಸಿದ್ಧರಾಗಲು ಅನುವು ಮಾಡಿಕೊಡುತ್ತದೆ. ಭವಿಷ್ಯದ ಎಂಜಿನಿಯರ್‌ಗಳನ್ನು ಕೇಳಿದಾಗ ಸಲಹೆ ನೀಡುವುದು ಮಾತ್ರವಲ್ಲ ಉತ್ತಮ ಗುಣಮಟ್ಟದ ಸಂಸ್ಥೆಗಳು ಮತ್ತು ಮೂಲಸೌಕರ್ಯಗಳ ಸೃಷ್ಟಿಗೆ ಪೂರ್ವಭಾವಿಯಾಗಿ ಕೊಡುಗೆ ನೀಡುವಂತೆ ಹೇಳಿದರು.

ಭಾರತಕ್ಕೆ ಈಗ ಕೇವಲ ದೊಡ್ಡ ಪ್ರಮಾಣದ ಅಭಿವೃದ್ಧಿಯ ಬದಲು ಗುಣಮಟ್ಟದ ಮೂಲಸೌಕರ್ಯದ ಅಗತ್ಯವಿದೆ. ಸಾವಯವ ಮತ್ತು ಸುಸ್ಥಿರ ಬೆಳವಣಿಗೆಯ ಮೇಲೆ ಗಮನ ಕೇಂದ್ರೀಕರಿಸಿ, ಬೆಳೆಯುತ್ತಿರುವ ಭಾರತದ ಅಗತ್ಯಗಳನ್ನು ಪೂರೈಸುವ ಮೂಲಸೌಕರ್ಯ ರಚಿಸುವುದು ಅತ್ಯಗತ್ಯ ಎಂದರು.

ಸೌಂದರ್ಯ ಮತ್ತು ಎಂಜಿನಿಯರಿಂಗ್ ಪ್ರತಿಭೆಗೆ ಹೆಸರುವಾಸಿ ಯಾದ ಅಜಂತಾ, ಎಲ್ಲೋರಾ ಮತ್ತು ಮಹಾಬಲಿಪುರಂ ದೇವಾಲ ಯಗಳಂತಹ ಸಾಂಪ್ರದಾಯಿಕ ರಚನೆಗಳ ಮಾದರಿ ನಮ್ಮ ಕಣ್ಣ ಮುಂದಿದೆ. ತಂತ್ರಜ್ಞಾನದ ಸಹಾಯವಿಲ್ಲದೆ ಭಾರತೀಯ ಎಂಜಿನಿಯರ್ಸ್ ರಚಿಸಿದ ಈ ಮೇರುಕೃತಿಗಳು ಕಾಲದ ಪರೀಕ್ಷೆ ಗೆದ್ದು ನಿಂತಿವೆ ಎಂದರು. ಮೈಸೂರು ಮಹಾರಾಜರು ತಮ್ಮ ಅವಧಿಯಲ್ಲಿ ಎಂಜಿನಿಯರಿಂಗ್ ಯೋಜನೆಗಳಲ್ಲಿ ಸೌಂದರ್ಯಶಾಸ್ತ್ರದ ಮೇಲೆ ಗಮನ ಕೇಂದ್ರೀಕರಿಸಿದ್ದನ್ನು ಯದುವೀರ್ ನೆನೆದರು.

ಮೈಸೂರಿನಲ್ಲಿ ತನ್ನ ಸೆಂಟರ್ ಆಫ್ ಎಕ್ಸಲೆನ್ಸ್ ಅನ್ನು ಸ್ಥಾಪಿಸಿದ್ದಕ್ಕಾಗಿ ಶ್ಲಾಘಿಸಿದರು, ಎಂಎನ್‌ಸಿ ನಿಗಮಗಳು ಈಗ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ಅಡಿ ಮೈಸೂರು, ಮಂಗಳೂರು, ಹುಬ್ಬಳ್ಳಿ ಮತ್ತು ಧಾರವಾಡದಂತಹ ಶ್ರೇಣಿ-2 ನಗರಗಳಲ್ಲಿ ಘಟಕ ಸ್ಥಾಪಿಸುತ್ತಿವೆ. ಇದು ಸ್ಥಳೀಯ ಆರ್ಥಿಕತೆಯನ್ನು ಉತ್ತೇಜಿಸುವುದಲ್ಲದೆ, ಸಣ್ಣ ನಗರಗಳಲಿ ಉದ್ಯೋಗಾವಕಾಶ ಸೃಷ್ಟಿಸುತ್ತವೆ, ಇದು ಪ್ರಧಾನಿ ಮೋದಿಯವರ 'ವಿಕಾಸ್ ಭಾರತ್' ದೃಷ್ಟಿಕೋನಕ್ಕೆ ಕೊಡುಗೆ ನೀಡುತ್ತದೆ ಎಂದು ಹೇಳಿದರು.

ವಿವಿಸಿಇ ಪ್ರಾಂಶುಪಾಲರಾದ ಸದಾಶಿವೇಗೌಡ ಮಾತನಾಡಿ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದೊಂದಿಗೆ ಇಂಟರ್ನ್‌ಶಿಪ್ ನೀಡಲು ಕಾಲೇಜು ಎನ್ವೆಂಚರ್ ಜೊತೆ ಒಪ್ಪಂದಕ್ಕೆ ಸಹಿ ಹಾಕಿದೆ ಎಂದರು.

ಎನ್ವೆಂಚರ್ ಎಂಜಿನಿಯರಿಂಗ್ ಸಿಇಒ ಅನಿಲ್ ಶಿವದಾಸ್ ಮಾತನಾಡಿ, ಅಮೆರಿಕಾದ ಗ್ರಾಹಕರಿಗೆ ಎತ್ತರದ ಕಟ್ಟಡಗಳು, ಕ್ರೀಡಾಂಗಣಗಳು, ಹೋಟೆಲ್, ಆಸ್ಪತ್ರೆಗಳನ್ನು ವಿನ್ಯಾಸಗೊಳಿಸುವತ್ತ ಗಮನ ಹರಿಸುತ್ತದೆ. ಇದರಿಂದ ಇಲ್ಲಿ ಉದ್ಯೋಗಾವಕಾಶ ಸೃಷ್ಟಿಸಲಾ ಗುತ್ತದೆ ಎಂದು ಹೇಳಿದರು. ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪ ಗೌಡ, ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲಾ ರಾಮಣ್ಣವರ್, ಆಟೋಡೆಸ್ಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಅಲೋಕ್ ಶರ್ಮಾ ಉಪಸ್ಥಿತರಿದ್ದರು.

ಮೈಸೂರಿನ ವಿವಿಸಿಇ ಕ್ಯಾಂಪಸ್‌ನಲ್ಲಿ ಎನ್ವೆಂಚರ್‌ನ ಹೊಸ ಸೌಲಭ್ಯವನ್ನು ಸಂಸದ ಯದುವೀರ್ ಒಡೆಯರ್ ಉದ್ಘಾಟಿಸಿದರು.

ಶಾಂತಿ ಕಾನೂನು ಸುವ್ಯವಸ್ಥೆ ಕಾಯುವ ಪೊಲೀಸರೇ ಸೂಪರ್ ಹೀರೋಗಳು

ಕೊಡಗು ಜಿಲ್ಲಾ ಪೊಲೀಸ್ ಸಾಂಸ್ಕೃತಿಕ ವೇದಿಕೆ ಅಸ್ತಿತ್ವಕ್ಕೆ

ಪೊಲೀಸ್ ಸಾಂಸ್ಕೃತಿಕ ವೇದಿಕೆಯ ಮಹಾ ಪೋಷಕರಾದ ಕೆ.ರಾಮರಾಜನ್ ಮಡಿಕೇರಿಯಲ್ಲಿ ಪೊಲೀಸ್ ಸಾಂಸ್ಕೃತಿಕ ವೇದಿಕೆಯನ್ನು ಉದ್ಘಾಟಿಸಿದರು.

ಮಡಿಕೇರಿ: ಸದಾ ಕಾನೂನು ಸುವ್ಯವಸ್ಥೆ ಕಾರ್ಯದಲ್ಲಿ ನಿರತರಾಗಿರುವ ಪೊಲೀಸ್ ಸಿಬ್ಬಂದಿಯ ಕಲಾ ಪ್ರತಿಭೆ ಅಭಿವ್ಯಕ್ತಿಗೆ ರಾಜ್ಯದಲ್ಲೆ ಪ್ರಥಮ ಬಾರಿ ಕೊಡಗು ಪೊಲೀಸ್ ಸಾಂಸ್ಕೃತಿಕ ವೇದಿಕೆ ಅಸ್ತಿತ್ವಕ್ಕೆ ಬಂದಿದೆ.

ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ನಡೆದ ವರ್ಣರಂಜಿತ ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಪೊಲೀಸ್ ಸಾಂಸ್ಕೃತಿಕ ವೇದಿಕೆಯ ಮಹಾ ಪೋಷಕರಾದ ಕೆ.ರಾಮರಾಜನ್ ವೇದಿಕೆಯನ್ನು ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು ಪೊಲೀಸರು ಸದಾ ಒತ್ತಡದ ನಡುವೆ ಕಾರ್ಯನಿರ್ವಹಣೆ ಮಾಡುವುದು ಅನಿವಾರ್ಯ. ಅವರ ಒತ್ತಡ ನಿವಾರಿಸಿ ಕಲಾ ಪ್ರತಿಭೆ ಹೊರ ತರುವಲ್ಲಿ ಪೊಲೀಸ್ ಸಾಂಸ್ಕೃತಿಕ ವೇದಿಕೆ ಆರಂಭಿಸಲಾಗಿದೆ ಎಂದರು.

ಪತ್ರಕರ್ತ ಜಿ.ಚಿದ್ವಿಲಾಸ್ ಮಾತನಾಡಿ, ಸಂಸ್ಕಾರ, ಸಂಸ್ಕೃತಿ, ಶಿಸ್ತು ಇರುವ ಮನೆಗಳು ಸುಂದರವಾಗಿರುತ್ತವೆ. ರಾಜ್ಯದಲ್ಲೆ ಮೊಟ್ಟ ಮೊದಲ ಬಾರಿಗೆ ಕೊಡಗು ಜಿಲ್ಲಾ ಪೊಲೀಸ್ ಇಲಾಖೆ ಸಾಂಸ್ಕೃತಿಕ ವೇದಿಕೆ ಹುಟ್ಟು ಹಾಕಿರುವುದು ಅಭಿಮಾನದ ವಿಚಾರವೆಂದರು.

ಬಹುಭಾಷಾ ನಟಿ ಹರ್ಷಿಕಾ ಪೂಣಚ್ಚ ಮಾತನಾಡಿ, ಸಮಾಜದ ಶಾಂತಿ ಸುವ್ಯವಸ್ಥೆ ಕಾಯುವ ಪೊಲೀಸರು ಸೂಪರ್ ಹೀರೋಗಳೆ ಆಗಿದ್ದಾರೆ. ಕೊಡಗು ಪೊಲೀಸರು ಮಾದಕ ದ್ರವ್ಯ ದಂಧೆ ಹತ್ತಿಕ್ಕಲು ಕಾರ್ಯಾಚರಣೆ ತೋರಿರುವುದು ನಿಜಕ್ಕೂ ಶ್ಲಾಘನೀಯ ಎಂದು ಬಣ್ಣಿಸಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ, ವೇದಿಕೆಯ ಅಧ್ಯಕ್ಷರಾದ ಕೆ.ಸ್.ಸುಂದರರಾಜ್ ಮಾತನಾಡಿ, ಇಲಾಖಾ ಸಿಬ್ಬಂದಿ ಪ್ರತಿಭಾ ಅನಾವರಣಕ್ಕೊಂದು ವೇದಿಕೆಯ ಅಗತ್ಯತೆ ಇತ್ತು, ಇದೀಗ ಅದನ್ನು ಕಾರ್ಯರೂಪಕ್ಕೆ ತಂದಿರುವುದಾಗಿ ಹೇಳಿದರು.

ನಟಿ ತೇಜಸ್ವಿನಿ, ಸರಿಗಮಪ ರಿಯಾಲಿಟಿ ಶೋನ ಸ್ಪರ್ಧೆಯ ಮುಖ್ಯಸ್ಥ ಸಚಿನ್ ಪ್ರಕಾಶ್ ಕುಂದನ ಕೋಡಿ, ಸಂಯುಕ್ತ ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಕೆ.ಕೆ.ನೌಶಾದ್, ಕರಾವಳಿ ಸಂಗೀತ ಕಲಾವಿದರ ಒಕ್ಕೂಟದ ಅಧ್ಯಕ್ಷ ಕೇಶವ ಕನಿಲ, ಸಿಪಿಐ ವೇದಿಕೆಯ ಪ್ರಧಾನ ಕಾರ್ಯದರ್ಶಿ ಪಿ.ಕೆ.ರಾಜು ಮಾತನಾಡಿದರು.

ವೇದಿಕೆ ಕಾರ್ಯಕ್ರಮಗಳ ಬಳಿಕ ರಿಯಾಲಿಟಿ ಶೋ ವಿಜೇತರಾದ ಚನ್ನಪ್ಪ ಹುದ್ದರ್, ಕೊಡಗಿನ ಪ್ರಗತಿ ಬಡಿಗೇರ್, ಪೊಲೀಸ್ ಸಿಬ್ಬಂದಿ ಸುಬ್ರಹ್ಮಣ್ಯ, ಬಾಳೆಲೆಯ ಅನ್ವಿತ್ ಕುಮಾರ್, ಜಿಲ್ಲೆಯವರಾದ ಪಂಚಮ್ ತ್ಯಾಗರಾಜ್, ಬುಟ್ಟಿಯಂಡ ಲಿಖಿತ, ಪೊಲೀಸ್ ಸಾಂಸ್ಕೃತಿಕ ವೇದಿಕೆಯ ಗಾಯಕರು ನಡೆಸಿಕೊಟ್ಟ ಸಂಗೀತ ರಸ ಸಂಜೆ ಗಮನ ಸೆಳೆಯಿತು.

ಸನ್ಮಾನ :

ವೇದಿಕೆ ರಚನೆಗೆ ಕಾರಣರಾದ ಡಿವೈಎಸ್‌ಪಿ ಮಹೇಶ್ ಕುಮಾರ್, ಛದ್ಮವೇಷ ಕಲಾವಿದರಾದ ನಿವೃತ್ತ ಎಎಸ್‌ಐ ಪಾರ್ಥ, ನಿಸ್ತಂತು ಘಟಕದ ಹೆಡ್ ಕಾನ್‌ಸ್ಟೇಬಲ್ ಈರಮಂಡ ವಿಜಯ್ ಅವರನ್ನು ಸನ್ಮಾನಿಸಲಾಯಿತು.

ವಿಜ್ಞಾನಿಗಳ ಪರಿಶ್ರಮ, ಆಹಾರ ಸ್ವಾವಲಂಬನೆ

ಸಚಿವ ಡಾ.ಜಿ.ಪರಮೇಶ್ವರ್ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಿದರು.

ತುಮಕೂರು: ರೈತರು ಮತ್ತು ಕೃಷಿ ವಿಜ್ಞಾನಿಗಳ ಪರಿಶ್ರಮದಿಂದ ದೇಶ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ ಎಂದು ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.

ನಗರದ ತೋಟಗಾರಿಕಾ ಇಲಾಖೆಯ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ತೋಟಗಾರಿಕಾ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದರು.

ಹಸಿರು ಕ್ರಾಂತಿಯ ಫಲವಾಗಿ ಭಾರತದಲ್ಲಿ ಕ್ಷಾಮ ಮತ್ತು ಹಸಿವು ನೀಗಿತು.ಇಂದಿನ ಫಲಪುಷ್ಪ ಪ್ರದರ್ಶನದಲ್ಲಿ ಕೃಷಿ, ತೋಟಗಾರಿಕೆ ಜೊತೆಗೆ, ವಿಜ್ಞಾನ, ತಂತ್ರಜ್ಞಾನದ ಆವಿಷ್ಕಾರಗಳನ್ನು ಪ್ರದರ್ಶಿಸುವ ಮೂಲಕ ಜ್ಞಾನ ಮತ್ತು ಅನುಭವದ ಸಮ್ಮಿಲನಕ್ಕೆ ಅವಕಾಶ ಕಲ್ಪಸಲಾಗಿದೆ ಎಂದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಜಿಪಂ ಸಿಇಒ ಜಿ.ಪ್ರಭು,ಕೃಷಿಯ ಜತೆಗೆ, ನಮ್ಮ ಸಂಸ್ಕೃತಿ, ಪರಂಪರೆ ವಿದ್ಯಾರ್ಥಿಗಳಿಗೆ ಪರಿಚಯಿಸಲಿದೆ. ಶಿಕ್ಷಣ ಕಾಶಿಯತ್ತ ದಾಪುಗಾಲು ಇಡುತ್ತಿರುವ ತುಮಕೂರು ಸಾಂಸ್ಕೃತಿಕವಾಗಿ ಬೆಳೆಯಲು ಎಲ್ಲಾ ರೀತಿಯ ಸಹಕಾರವನ್ನು ಸರಕಾರ ನೀಡುತ್ತಿದ್ದು, ಇದರ ದ್ಯೋತಕವಾಗಿ ಈ ಫಲಪುಷ್ಪ ಪ್ರದರ್ಶನ. ರೈತರೊಂದಿಗೆ ನೇರ ಸಂಪರ್ಕ ಹೊಂದಿರುವ ಕೃಷಿ, ರೇಷ್ಮೆ, ಹೈನುಗಾರಿಕೆ, ಮೀನುಗಾರಿಕೆ, ಜವಳಿ ಇಲಾಖೆಗಳು ತಮ್ಮ ಮಳಿಗೆ ತೆರೆದು ಜನರಿಗೆ ಸರಕಾರದ ಸೌಲಭ್ಯಗಳನ್ನು ಪರಿಚಯಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ನಗರ ಶಾಸಕ ಜಿ.ಬಿ.ಜ್ಯೋತಿಗಣೇಶ್ ಅಧ್ಯಕ್ಷತೆವಹಿಸಿದ್ದರು. ದೆಹಲಿ ವಿಶೇಷ ಪ್ರತಿನಿಧಿ, ಶಾಸಕ ಟಿ.ಬಿ.ಜಯಚಂದ್ರ ಕಿರು ಹೊತ್ತಿಗೆ ಬಿಡುಗಡೆ ಮಾಡಿದರು. ಶಾಸಕ ಸಿ.ಬಿ.ಸುರೇಶಬಾಬು, ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಎಸ್ಪಿ ಅಶೋಕ್, ಪಾಲಿಕೆ ಆಯುಕ್ತೆ ಅಶ್ವಿಜ, ಐಎಸ್‌ಆರ್‌ಹೆಚ್‌ನ ಡಾ. ತುಷಾರ ಕಾಂತಿ ಬೆಹೆರಾ,ಡಿಎಫ್‌ಒ ಅನುಪಮ,ತೋಟಗಾರಿಕಾ ಡಿಡಿ ಶಾರದಮ್ಮ, ನಿರ್ದೇಶಕಿ ರೂಪ ಎನ್.ಎಸ್, ಜಿಲ್ಲಾ ತೋಟಗಾರಿಕೆ ಸಂಘದ ಪದಾಧಿಕಾರಿಗಳಾದ ಪಿ.ಕೃಷ್ಣಪ್ಪ, ಆರ್. ಕಾಮರಾಜು, ಸ್ನೇಕ ನಂದೀಶ್, ನಿರ್ದೇಶಕರಾದ ಕೆ.ಎನ್.ಶಿವಶಂಕರ್, ಜಯಣ್ಣ, ಟಿ.ಹೆಚ್ ಪ್ರಸನ್ನಕುಮಾರ್, ವೈ.ಕೆ.ನಾಗಭೂಷಣ್, ಜಗ ಜ್ಯೋತಿ ಸಿದ್ದರಾಮಯ್ಯ, ಎಚ್.ಆರ್.ನಾಗೇಶ, ಕೆ.ಎಂ.ವಾಸು ಇದ್ದರು.

ಸಮ ಸಮಾಜ ಕಟ್ಟುವುದು ಸಂವಿಧಾನದ ಆಶಯ



ಪಿರಿಯಾಪಟ್ಟಣ: ಅಸಮಾನತೆ ಹೋಗಲಾಡಿಸುವ ಉದ್ದೇಶದಿಂದ ಡಾ. ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನವನ್ನು ರಚಿಸಿದರು ಎಂದು ಸಮಾಜ ಕಲ್ಯಾಣ ಸಚಿವ ಡಾ. ಎಚ್ ಸಿ ಮಹದೇವಪ್ಪ ತಿಳಿಸಿದರು.

ತಾಲೂಕಿನ ಹಲಗನಹಳ್ಳಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದರು. ಶಿಕ್ಷಣ, ಸಂಘಟನೆ ಮತ್ತು ಹೋರಾಟದಿಂದ ಮನುಷ್ಯನು ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬಹುದು. ಅವರ ಆಶಯಗಳನ್ನು ಅನುಸರಿಸುವ ಮೂಲಕ ಸಂವಿಧಾನಕ್ಕೆ ಗೌರವ ಸೂಚಿಸಬೇಕು ಎಂದರು.

ಖಡ್ಗದಿಂದ ಚರಿತ್ರೆ ನಿರ್ಮಿಸುವುದಲ್ಲ, ಪೆನ್ನಿನ ಮೂಲಕವು ಚರಿತ್ರೆ ನಿರ್ಮಿಸಬಹುದು ಎಂದು ಅಂಬೇಡ್ಕರ್ ಅವರು ತೋರಿಸಿಕೊಟ್ಟಿದ್ದಾರೆ. ಆ ಮಾರ್ಗದಲ್ಲಿ ನಾವು ನಡೆಯಬೇಕು ಎಂದರು.

ರೇಷ್ಮೆ ಖಾತೆ ಸಚಿವ ಕೆ.ವೆಂಕಟೇಶ್ ಮಾತನಾಡಿ, ಜನ ಸಂವಿಧಾನವನ್ನು ಕಾನೂನು ಅಂತ ಒಪ್ಪಿಕೊಂಡ ಈ ದಿನವನ್ನು ದೇಶದ ಪ್ರತಿಯೊಬ್ಬ ಪ್ರಜೆ ಹಬ್ಬದ ರೀತಿ ಆಚರಿಸಬೇಕು. ಆದರೆ ಇದು ಸಂವಿಧಾನ ಬದಲಿಸುವ ವ್ಯಕ್ತಿಗಳಿಗೆ ಅರ್ಥವಾಗುತ್ತಿಲ್ಲದಿರುವುದು ನಮ್ಮ ದುರಾದೃಷ್ಟಕರ ಎಂದರು.

ಮೈಸೂರಿನ ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಮಾತನಾಡಿ, ಕೆಲವು ಕಾಣದ ಕೈಗಳು ದೇಶವನ್ನು ವಿಭಜನೆ ಮಾಡಲು ಹೊರಟಿದ್ದಾರೆ. ಅದಕ್ಕೆ ನಾವು ಅವಕಾಶ ಮಾಡಿಕೊಡಬಾರದು ಎಂದರು.

ಈ ವೇಳೆ ತಹಸಿಲ್ದಾರ್ ನಿಸರ್ಗಪ್ರಿಯ, ತಾಪಂ ಇಒ ಸುನಿಲ್ ಕುಮಾರ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಹಮತ್ ಜಾನಬಾಬು, ಡಿ ಟಿ ಸ್ವಾಮಿ, ಹಲಗನಹಳ್ಳಿ ಗ್ರಾಪಂ ಅಧ್ಯಕ್ಷ ವೀಣಾ ವೆಂಕಟೇಶ್, ಸದಸ್ಯ ಸುಯೆಲ್ ಪಾಷಾ, ಅಂಬೇಡ್ಕರ್ ಪುತ್ಥಳಿ ದಾನಿಗಳಾದ ಪ್ರಶಾಂತ್, ಮುಖಂಡರಾದ ಶಂಕರೇಗೌಡ, ಮರಿಗೌಡ, ಸಂದೇಶ್, ನಜ್ಮಾ ನಜೀರ್ ಇದ್ದರು.

ಸಂವಿಧಾನದ ಆಶೋತ್ತರ ಈಡೇರಬೇಕಿದೆ: ಶಾಸಕ

ಶಾಸಕ ಎಸ್.ಆರ್.ಶ್ರೀನಿವಾಸ್ ಸಮ್ಮುಖದಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಾಧಕರಿಗೆ ಸನ್ಮಾನಿಸಲಾಯಿತು.

ಗುಬ್ಬಿ: ಶೋಷಿತ ವರ್ಗಕ್ಕೆ ಸಾಮಾಜಿಕ ನ್ಯಾಯ ತರುವಲ್ಲಿ ನಾವೆಲ್ಲರೂ ಇನ್ನೂ ಬದ್ಧತೆ ಬೆಳೆಸಿಕೊಳ್ಳಬೇಕಿದೆ. ಅಂಬೇಡ್ಕರ್ ಅವರ ಸಂವಿಧಾನ ಆಶೋತ್ತರದಂತೆ ಸಾಮಾಜಿಕ, ಆರ್ಥಿಕ ಸಮಾನತೆ ತರಬೇಕಿದೆ ಎಂದು ಶಾಸಕ ಎಸ್.ಆರ್.ಶ್ರೀನಿವಾಸ್ ಅಭಿಪ್ರಾಯ ವ್ಯಕ್ತಪಡಿಸಿದರು. ಪಟ್ಟಣದ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ತಾಲೂಕು ಆಡಳಿತದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಾಧಕರಿಗೆ ಸನ್ಮಾನಿಸಿ ಮಾತನಾಡಿದರು.

ಸಂವಿಧಾನದಂತೆ ಕೆಲಸ ಮಾಡುವ ಮೂರು ಪ್ರಮುಖ ಅಂಗಗಳು ಇನ್ನೂ ಮೇಲು ಕೀಳು, ಬಡವ ಶ್ರೀಮಂತ ತೊಡೆದು ಹಾಕಲು ಸಾಧ್ಯವಾಗಿಲ್ಲ. ಅಂಬೇಡ್ಕರ್ ಅವರ ಆಶಯದಂತೆ ನವ ಸಮಾಜ ಸಾಧ್ಯವಾಗಿಲ್ಲ. ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಒದಗಿಸುವ ಕೆಲಸವಾದರೆ ಸಂವಿಧಾನ ಸಾರ್ಥಕತೆ ಪಡೆಯುತ್ತದೆ. ಈ ಕೆಲಸಕ್ಕೆ ಉತ್ತಮ ಶಿಕ್ಷಣ ವೊಂದೇ ಪರಿಹಾರ ಎಂದರು. ಧ್ವಜಾರೋಹಣ ನೆರವೇರಿಸಿದ ತಹಸೀಲ್ದಾರ್ ಬಿ.ಆರತಿ ಸಂದೇಶ ನೀಡಿ, ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗ ಉತ್ತಮ ಆಡಳಿತ ನೀಡಿ ದೇಶದ ಉನ್ನತಿಗೆ ಶ್ರಮಿಸುತ್ತವೆ ಎಂದರು.

ಉಪನ್ಯಾಸಕ ತಿಮ್ಮೇಗೌಡ ಮಾತ ನಾಡಿ, ಇಡೀ ವಿಶ್ವದಲ್ಲೇ ಅತ್ಯಂತ ಶ್ರೇಷ್ಠ ಸಂವಿಧಾನ ನಮ್ಮದು ಎಂದರು. ವೇದಿಕೆಯಲ್ಲಿ ಪಪಂ ಅಧ್ಯಕ್ಷೆ ಮಂಗಳಮ್ಮ ರಾಜಣ್ಣ, ಉಪಾಧ್ಯಕ್ಷೆ ಮಮತಾ ಶಿವಪ್ಪ, ತಾಪಂ ಇಒ ಶಿವಪ್ರಕಾಶ್, ಬಿಇಒ ನಟರಾಜ್, ಸಿಪಿಐ ಗೋಪಿನಾಥ್, ಪ್ರಾಚಾರ್ಯ ಪ್ರಸನ್ನ, ಟಿಎಚ್ಒ ಡಾ. ಬಿಂದುಮಾಧವ ಇದ್ದರು.

ಅಭಿವೃದ್ಧಿ ದಿಕ್ಸೂಚಿಯೇ ಅಂಬೇಡ್ಕರ್

ಗೌರಿಬಿದನೂರು: ಡಾ.ಅಂಬೇಡ್ಕರ್ ನೀಡಿದ ಸಂವಿಧಾನದಿಂದ ಮಾತ್ರವೇ ದೇಶದ ಸಮಗ್ರ ಅಭಿವೃದ್ಧಿ ಸಾಧ್ಯ ಎಂದು ಶಾಸಕ ಕೆಎಚ್, ಪುಟ್ಟಸ್ವಾಮಿಗೌಡ ತಿಳಿಸಿದರು. ನಗರದ ನೇತಾಜೀ ಕ್ರೀಡಾಂಗದಲ್ಲಿ 76ನೇ ಗಣರಾಜೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣದಲ್ಲಿ ಮಾತನಾಡಿದರು. ಸಂವಿಧಾನದಲ್ಲಿ ಹಲವು ಹಕ್ಕುಗಳನ್ನು ನಮ್ಮ ದೇಶದ ಜನರಿಗೆ ನೀಡಿದೆ.ಸಮಾನತೆ ಧಾರ್ಮಿಕ ಹಕ್ಕು ಮತದಾನದ ಹಕ್ಕು ಎಲ್ಲರಿಗೂ ಶಿಕ್ಷಣದ ಹಕ್ಕು ಹೀಗೆ ಹಲವು ಹಕ್ಕುಗಳು ನಮಗೆ ಸಿಕ್ಕಿವೆ. ಇದರಿಂದ ದೇಶದ ಅಭಿವೃದಿಗೆ ಸಹಕಾರಿ ಸಹ ಆಗಿದೆ. ದೇಶದ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸೋಣ ಎಂದರು. ಗುಣ ಮಟ್ಟದ ಶಿಕ್ಷಣದಿಂದ ಮಾತ್ರ ವಿದ್ಯಾರ್ಥಿಗಳ ಮುನ್ನೆಲೆಗೆ ಬರಲು ಸಾಧ್ಯ. ಪ್ರತಿ ವರ್ಷ ಉತ್ತಮ ಅಂಕಗಳನ್ನು ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸಲಾಗುವುದು ಎಂದರು. ತಹಸೀಲ್ದಾರ್ ಮಹೇಶ್ ಪತ್ರಿ ಮಾತನಾಡಿ, ಪ್ರಜಾಪ್ರಭುತ್ವದ ಆಶಯಗಳನ್ನು ನಾವು ಸಾಕಾರಗೊಳಿಸಬೇಕಿದೆ ಎಂದರು.

31ರಿಂದ ಕೇಂದ್ರ ಬಜೆಟ್ ಅಧಿವೇಶನ

← ಮೊದಲಪುಟದಿಂದ

ಬಜೆಟ್ ಅಧಿವೇಶನ ಆರಂಭಕ್ಕೂ ಮುನ್ನ ಅಂದರೆ, ಜ.30ರಂದು ಸರ್ವಪಕ್ಷ ಸಭೆ ಕರೆಲಾಗಿದೆ ಎಂದು ಕೇಂದ್ರ ಸಂಸದೀಯ ವ್ಯವ ಹಾರಗಳ ಸಚಿವ ಕಿರಣ್ ರಿಜಿಜು ಸುದ್ದಿಗಾರರಿಗೆ ತಿಳಿಸಿದ್ದಾರೆ. ಬಜೆಟ್ ಅಧಿವೇಶನದಲ್ಲಿ ಸದನ ದಲ್ಲಿ ಸುಗಮ ಕಲಾಪಕ್ಕೆ, ಅಡೆತಡೆ ಇಲ್ಲದ ಚರ್ಚೆಗೆ, ವಿಧೇಯಕಗಳಿಗೆ ಅಂಗೀಕಾರ ಕೊಡುವುದಕ್ಕೆ ಪ್ರತಿಪಕ್ಷ ನಾಯಕರು ಸಹಕಾರ ನೀಡಬೇಕು ಎಂದು ಸಚಿವ ರಿಜಿಜು ಇದೇ ವೇಳೆ ಮನವಿ ಮಾಡಿದರು. ಸಂಸತ್ತಿನ ನಂತರ ಬಜೆಟ್ ಪ್ರಸ್ತಾವನೆಗಳನ್ನು ಪರಿಶೀಲಿಸಲು ಮತ್ತು ವಿವಿಧ ಸಚಿವಾಲಯಗಳ ಅನುದಾನದ ಬೇಡಿಕೆಗಳನ್ನು ಚರ್ಚಿಸಲು ಮತ್ತು ಬಜೆಟ್ ಪ್ರಕ್ರಿಯೆ ಪೂರ್ಣಗೊಳಿಸಲು ಸಂಸತ್ ಮಾ.10ರಿಂದ ಮತ್ತೆ ಸಭೆ ಸೇರಿ ಅಧಿವೇಶನ ನಡೆಸುತ್ತದೆ.

ಐಟಿ ಮಸೂದೆ ಮಂಡನೆ ಸಾಧ್ಯತೆ

ಈ ಬಾರಿಯ ಬಜೆಟ್ ಅಧಿವೇಶನದಲ್ಲಿ ಕೇಂದ್ರ ಸರಕಾರವು ಹೊಸ ಆದಾಯ ತೆರಿಗೆ ಮಸೂದೆಯನ್ನು ಮಂಡಿಸುವ ಸಾಧ್ಯತೆ ಇದೆ. ಪ್ರಸ್ತುತ ಇರುವ ಆದಾಯ ತೆರಿಗೆ ಕಾಯ್ದೆ ಬದಲಿಗೆ ಗ್ರಹಿಕೆಗೆ ಅನುಕೂಲಕರವಾಗುವಂತೆ ಸರಳೀಕರಣ ಮತ್ತು ಪುಟಗಳ ಸಂಖ್ಯೆಯನ್ನು ಶೇ.60ರಷ್ಟು ಕಡಿಮೆ ಮಾಡಿ ಹೊಸ ಕಾಯ್ದೆ ಮಂಡನೆಗೆ ಉದ್ದೇಶಿಸಲಾಗಿದೆ ಎನ್ನಲಾಗಿದೆ. 6 ತಿಂಗಳಲ್ಲಿ 6 ದಶಕಗಳಷ್ಟು ಹಳೆಯದಾದ ಆದಾಯ ತೆರಿಗೆ ಕಾಯ್ದೆ 1961 ಅನ್ನು ಸಮಗ್ರ ಪರಿಶೀಲನೆಗೆ ಒಳಪಡಿಸುವುದಾಗಿ ಕಳೆದ ವರ್ಷದ ಜುಲೈನಲ್ಲಿ ಮಧ್ಯಂತರ ಬಜೆಟ್ ಮಂಡನೆ ವೇಳೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದರು.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–2/ಟೆಂಡರ/2024–25/5051 ದಿನಾಂಕ:27/01/2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2024–25 ನೇ ಸಾಲಿನ ಲೆಕ್ಕ ಶೀರ್ಷಿಕೆ 5054–ರಾಜ್ಯ ಹೆದ್ದಾರಿ ಸುಧಾರಣೆ ಅಡಿ 3 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಕನಿಷ್ಟ ಮೊತ್ತ ರೂ. 80.00 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 400.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ. 1 ಮತ್ತು 3 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:10–02–2025 ರಂದು (11.00 ಗಂಟೆಗೆ), 2)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:11–02–2025 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:13–02–2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):15–02–2025 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕ್ರ.ಸಂ. 2 ರಲ್ಲಿನ ಕಾಮಗಾರಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:14–02–2025 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:15–02–2025 (ಸಾಯಂಕಾಲ 5.30 ಗಂಟೆಯ ವರೆಗೆ),3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 18–02–2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):20–02–2025 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1541/KSMCA/2024-25

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ, ಐಬಿಸಿ, ನಿಮಪೋ ವಿಭಾಗ, ರಾಂಪೂರ (ಪ.ಅ), ತಾ: ಸಿಂದಗಿ, ಜಿ: ವಿಜಯಪುರ.
CIN L 85320 KA 1994 SGC 016101 ದೂರವಾಣಿ ಸಂಖ್ಯೆ: 08488–224328,
ಇ–ಮೇಲ್:kbjnleerampur@gmail.com.

ಸಂ:ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಪಿಬಿ–2/2024–25/2441 ದಿನಾಂಕ:24.01.2025

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ) ಇವರು ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಅನುಮೋದನೆಗೊಂಡಿರುವ ಒಟ್ಟು 05–ಹೊರಗುತ್ತಿಗೆ ನೌಕರರ ನಿಯೋಜನೆ ಸೇವೆಗಳಿಗಾಗಿ ರೂ: 11.97 ಲಕ್ಷ ಮೊತ್ತದ ಸೇವೆಗಳಿಗೆ Registration certificate of establishment from Govt of Karnataka & Department of Labour as per section 12(1) of Contract Labour Act ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಸೇವಾ ದರದ ಟೆಂಡರನ್ನು ದ್ವಿ–ಲಕೋಟೆ ಪದ್ಧತಿಯ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್ ಸೈಟ್ https://kppp.karnataka.gov.in ಮಾಹಿತಿ ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು.

- ಕೆ.ಪಿ.ಪಿ.ಪಿ. ಪೋರ್ಟಲ್ https://kppp.karnataka.gov.in ವೆಬ್‌ಸೈಟ್ ನಿಂದ ಖಾಲಿ ಟೆಂಡರ್ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು ಮತ್ತು ಭರ್ತಿ ಮಾಡಿದ ಬಿಡ್ ದಾಖಲೆಗಳನ್ನು ಸಲ್ಲಿಸುವ ದಿನಾಂಕ: **27.01.2025** ರಿಂದ **03.02.2025** ರ ಸಾಯಂಕಾಲ 5.30 ಗಂಟೆಯವರೆಗೆ ಸಲ್ಲಿಸುವುದು.
- ಗುತ್ತಿಗೆದಾರರು ದಿನಾಂಕ: **27.01.2025** ರಿಂದ **03.02.2025** ರ ಸಾಯಂಕಾಲ 5.30 ಗಂಟೆಯವರೆಗೆ ಇ–ಟೆಂಡರ ಪುಸ್ತಕವನ್ನು Access ಮಾಡಬಹುದು.
- ಭರ್ತಿಗೊಳಿಸಿದ ಇ–ಟೆಂಡರ ಪುಸ್ತಕವನ್ನು ದಿನಾಂಕ: **27.01.2025** ರಿಂದ **03.02.2025** ರ ಸಾಯಂಕಾಲ 5.30 ಘಂಟೆಯವರೆಗೆ ಸಲ್ಲಿಸುವದು.
- ದ್ವಿ–ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ನಿಮಪೋ ವಿಭಾಗ ರಾಂಪೂರ (ಪಿಎ) ತಾ: ಸಿಂದಗಿ ಜಿಲ್ಲೆ: ವಿಜಯಪೂರ ಕಛೇರಿಯಲ್ಲಿ ದಿನಾಂಕ: **05.02.2025** ರ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.
- ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ ರಾಂಪೂರ (ಪ.ಅ) ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https://kppp.karnataka.gov.in ವೆಬ್‌ಸೈಟ್ ನಿಂದ ಪಡೆಯಬಹುದು.
- ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.
- ಯಾವುದೇ ಕಾರಣ ನೀಡದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಐಬಿಸಿ ನಿಮಪೋ ವಿಭಾಗ
ರಾಂಪೂರ(ಪಅ)

ವಾಸಾಸಂಇ/ವಿಜಯಪುರ/640/ಕೆಎಸ್‌ಎಂಸಿಎ/2024–25

ಮಂಡ್ಯದಲ್ಲಿ ಮಹಿಳೆ ಆತ್ಮಹತ್ಯೆಗೆ ಯತ್ನ | ಯಾದಗಿರಿಯಲ್ಲಿ ಪಿಗ್ಮಿ ಕಲೆಕ್ಷನ್ ಏಜೆಂಟ್ ಆತ್ಮಹತ್ಯೆ

ರಾಜ್ಯದಲ್ಲಿ ಮುಂದುವರಿದ ಫೈನಾನ್ಸ್ ಹಾವಳಿ

ಹಲಗೂರು ಸಮೀಪದ ಕೊನ್ನಾಪುರದಲ್ಲಿ ಪ್ರೇಮಾ ಅವರ ಮನೆಯನ್ನು ಖಾಸಗಿ ಫೈನಾನ್ಸ್ ಕಂಪನಿಯವರು ಜಪ್ತಿ ಮಾಡಿದ ದೃಶ್ಯ.

ಬೆಂಗಳೂರು: ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳ ಹಾವಳಿ ಮಿತಿಮೀರಿದೆ. ಯಾವುದೇ ಭದ್ರತೆ ಇಲ್ಲದೆ ಕರೆದು ಕೊಡುವ ಸಾಲಕ್ಕೆ ಕೈಯೊಡ್ಡುವ ಬಡವರು, ಕೂಲಿ ಕಾರ್ಮಿಕರು ಬಳಿಕ ಅಕ್ರಮ ಬಡ್ಡಿ ದಂಧೆಯ ಕಿರುಕುಳ, ದೌರ್ಜನ್ಯ ಸಹಿಸಲಾಗದೆ ಊರನ್ನೇ ತೊರೆದು ಹೋಗುತ್ತಿರುವ ಪ್ರಕರಣಗಳು, ಕಿರುಕುಳಕ್ಕೆ ಆತ್ಮಹತ್ಯೆ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಯಾದಗಿರಿ, ತುಮಕೂರು, ಹಾವೇರಿ, ಮಂಡ್ಯದಲ್ಲಿ ಫೈನಾನ್ಸ್ ಕಂಪನಿಗಳ ಕಿರುಕುಳಕ್ಕೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಿಗ್ಮಿ ಕಲೆಕ್ಷನ್ ಏಜೆಂಟ್ ಆತ್ಮಹತ್ಯೆ: ಫೈನಾನ್ಸ್‌ನಲ್ಲಿ ಪಿಗ್ಮಿ ಕಲೆಕ್ಷನ್ ಹಣವನ್ನು ಸ್ವಂತಕ್ಕೆ ಬಳಸಿಕೊಂಡಿರುವ ಆರೋಪ ಮಾಡಿದ್ದಕ್ಕೆ ಮನನೊಂದು ಹಣ ಕಲೆಕ್ಷನ್ ಮಾಡುತ್ತಿದ್ದ ಏಜೆಂಟ್ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಯಾದಗಿರಿ ಜಿಲ್ಲೆಯ ಸುರಪುರ ನಗರದ ರಂಗಂಪೇಟ ಬಡಾವಣೆಯಲ್ಲಿ ನಡೆದಿದೆ. ಮೃತನನ್ನು ಮಲ್ಲಿಕಾರ್ಜುನ (40) ಎಂದು ಗುರುತಿಸಲಾಗಿದೆ. ಕಳೆದ ಕೆಲ ವರ್ಷಗಳಿಂದ ಸುರಪುರದ ಮಹಾಲಕ್ಷ್ಮಿ ಫೈನಾನ್ಸ್‌ನಲ್ಲಿ ಮಲ್ಲಿಕಾರ್ಜುನ ಪಿಗ್ಮಿ ಕಲೆಕ್ಟ್ ಮಾಡುತ್ತಿದ್ದರು. ಈ ವೇಳೆ ಪಿಗ್ಮಿ ಹಣದಲ್ಲಿ 5 ಲಕ್ಷ ರು. ವ್ಯತ್ಯಾಸ ಕಂಡುಬಂದಿದ್ದು, ಫೈನಾನ್ಸ್ ಮಾಲೀಕರು ಹಣ ಕಟ್ಟದೆ ಸ್ವಂತಕ್ಕೆ ಬಳಕೆ ಮಾಡಿಕೊಂಡಿರುವುದಾಗಿ ಆರೋಪಿಸಿದ್ದಾರೆ. ಜತೆಗೆ 5 ಲಕ್ಷ ರು. ಹಣವನ್ನು ಮೃತ ಮಲ್ಲಿಕಾರ್ಜುನಗೆ ಕಟ್ಟುವಂತೆ ತಿಳಿಸಿದ್ದಾರೆ. ಇದಕ್ಕೆ ಮನನೊಂದ ಮಲ್ಲಿಕಾರ್ಜುನ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸುರಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಹೃದಯಾಘಾತದಿಂದ ವ್ಯಕ್ತಿ ಸಾವು: ಮೈಕ್ರೋ ಫೈನಾನ್ಸ್‌ನಿಂದ ಸಾಲ ಪಡೆದಕ್ಕಿಂತ ಹೆಚ್ಚು ಬಡ್ಡಿಯನ್ನೇ ಕಟ್ಟಿ ಹೃದಯಾಘಾತದಿಂದ ವ್ಯಕ್ತಿಯೊಬ್ಬ ಸಾವಿಗೀಡಾದ ಘಟನೆ ತುಮಕೂರಿನಲ್ಲಿ ನಡೆದಿದೆ.

ತುಮಕೂರು ನಗರದ ಲೇಬರ್ ಕಾಲೋನಿಯ ಸೈಯದ್ ಸಮಿವುಲ್ಲಾ ಸಾವಿಗಿಡಾದ ವ್ಯಕ್ತಿ. ಇವರು ಫೈವ್ ಸ್ಟಾರ್ ಫೈನಾನ್ಸ್‌ನಿಂದ 2019ರಲ್ಲಿ 4.66 ಮನೆ ಸಾಲ ಪಡೆದಿ ದ್ದರು. 2024 ಮೇವರೆಗೆ ಬರೊಬ್ಬರಿ 7.20 ಲಕ್ಷ ಬಡ್ಡಿ ಕಟ್ಟಿದ್ದರು. ಆದರೆ ಅಸಲು ಹಾಗೆಯೇ ಉಳಿದಿತ್ತು. ಮತ್ತೆ ಅಸಲು ಕಟ್ಟುವಂತೆ ಫೈನಾನ್ಸ್‌ನವರು ಕಿರುಕುಳ ಕೊಡುತ್ತಿದ್ದರು. ಈ ಕಿರುಕುಳ ತಾಳಲಾರದೆ ಹೃದಯಾಘಾತದಿಂದ ಸಮೀವುಲ್ಲಾ ಮೇ ತಿಂಗಳಲ್ಲಿ ಸಾವಿಗೀಡಾಗಿದ್ದಾರೆ. ಇವರಿಗೆ ಸುಮಾರು 24.55 % ಬಡ್ಡಿ ಹಾಕಲಾಗಿತ್ತು. ಈಗ ಫೈನಾನ್ಸ್‌ನವರು ಸಮೀವುಲ್ಲಾ ಮನೆಗೆ ಬಂದು ಅವರ ಪತ್ನಿ ಬಳಿ ಸಾಲ ಮರುಪಾವತಿ ಮಾಡುವಂತೆ ಕಿರುಕುಳ ನೀಡುತ್ತಿದ್ದಾರೆ. ಪತಿಯಂತೆ ನಾನೂ ಮಕ್ಕಳೊಂದಿಗೆ ಸಾಯಬೇಕಾಗುತ್ತದೆ ಎಂದು ಪತ್ನಿ ತಬಸಮ್ ಬಾನು ಕಣ್ಣೀರು ಹಾಕುತ್ತಿದ್ದಾರೆ.

ಲೋನ್ ಕೊಡದೇ 4.20 ಲಕ್ಷ ಕಟ್ಟಿಸಿಕೊಂಡ ಕಂಪನಿ

ಹೌಸಿಂಗ್ ಲೋನ್ ಕೊಡುವುದು ಲೇಟಾಗಿದ್ದಕ್ಕೆ ಫೈನಾನ್ಸ್ ಮುಂದೆ ದಂಪತಿ ಪ್ರತಿಭಟನೆ ಮಾಡಿದ ಘಟನೆ ಹಾವೇರಿ ನಗರದಲ್ಲಿರುವ ಹಿಂದೂಜಾ ಫೈನಾನ್ಸ್ ಮುಂದೆ ನಡೆದಿದೆ. ಬಾಗಿಲು ಮುಚ್ಚಲು ಬಿಡದೆ ಒಳಗೆ ಕುಳಿತು ಹಿಂದೂಜಾ ಫೈನಾನ್ಸ್ ಸಿಬ್ಬಂದಿ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ. ನಿರ್ಮಲಾ ಶರಣಯ್ಯ ಮಹಂತಿಮಠ ಮಹಿಳೆಯಿಂದ ಹಾವೇರಿ ನಗರ ಪೊಲೀಸ್ ಠಾಣೆಯಲ್ಲಿ ಫೈನಾನ್ಸ್ ವಿರುದ್ಧ ದೂರು ನೀಡಲಾಗಿದೆ. ಲೋನ್ ಕೊಡುವುದಾಗಿ ನಂಬಿಸಿ ಲೋನ್ ಕೊಡದೆ, 10 ತಿಂಗಳು ಇಎಂಐ ಕಟ್ಟಿಸಿಕೊಂಡಿದ್ದಾರೆ. ಇದುವರೆಗೆ 4.20 ಲಕ್ಷ ಹಣ ಇಎಂಐ ಕಟ್ಟಿದ್ದೇವೆ. ಆದರೂ, ಲೋನ್ ಕೊಟ್ಟಿಲ್ಲ ಎಂದು ಆಕ್ರೋಶ ಹೊರ ಹಾಕಿದ್ದಾರೆ.

ಕೊನ್ನಾಪುರ: ಮನೆ ಜಪ್ತಿ

ಮೈಕ್ರೋ ಫೈನಾನ್ಸ್ ಕಂಪನಿಯಿಂದ ಪಡೆದಿದ್ದ ಸಾಲಕ್ಕೆ ಮನೆಯನ್ನೇ ಜಪ್ತಿ ಮಾಡಿದ ಕಂಪನಿಯ ಸಿಬ್ಬಂದಿಯವರ ಕಿರುಕುಳದಿಂದ ಮನನೊಂದ ಮಹಿಳೆಯೊಬ್ಬರು ವಿಷ ಸೇವಿಸಿ ಆತ್ಮಹತ್ಯೆಯ ಯತ್ನಿಸಿರುವ ಘಟನೆ ಮಳವಳ್ಳಿ ತಾಲೂಕು ಕೊನ್ನಾಪುರ ಗ್ರಾಮದಲ್ಲಿ ನಡೆದಿದೆ. ಈ ಗ್ರಾಮದ ಅಂದಾನಯ್ಯ ಎಂಬುವರ ಪತ್ನಿ 52 ವರ್ಷದ ಪ್ರೇಮ ಎಂಬಾಕೆ ಮಂಗಳವಾರ ಬೆಳಿಗ್ಗೆ 11.30ರ ಸಮಯದಲ್ಲಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಸಾವು ಬದುಕಿನೊಡನೆ ಹೋರಾಟ ನಡೆಸುತ್ತಿದ್ದಾರೆ. ಇವರಿಗೆ ಹಲಗೂರು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಅಪಘಾತ: ಮೂವರ ಸಾವು

ಗುಂಡ್ಲುಪೇಟೆ: ಎರಡು ಬೈಕ್ ಹಾಗೂ ಕಾರಿನ ನಡುವೆ ಅಪಘಾತ ಸಂಭವಿಸಿ ಮೂವರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿ–766ರ ಹಿರೀಕಾಟಿ ಗೇಟ್ ಬಳಿ ನಡೆದಿದೆ. ನಂಜನಗೂಡು ತಾಲೂಕಿನ ಕೂಡ್ಲಾಪುರ ಗ್ರಾಮದ ಬೈಕ್ ಸವಾರ ಶಶಿಧರ್ (25), ಪತ್ನಿ ಶಾಲಿನಿ ಹಾಗೂ ತಾಯಿ ಭಾಗ್ಯಮ್ಮ ಮೃತರು. ಮತ್ತೋರ್ವನಿಗೂ ತೀವ್ರ ಗಾಯಗಳಾಗಿದ್ದು ಬೇಗೂರು ಆಸ್ಪತ್ರೆಗೆ ರವಾನಿಸಲಾಗಿದೆ. ಬೇಗೂರು ಕಡೆಯಿಂದ ಸ್ವಗ್ರಾಮಕ್ಕೆ ಬೈಕ್ ನಲ್ಲಿ ತೆರಳುತ್ತಿದ್ದವರಿಗೆ ಕಾರು ವೇಗವಾಗಿ ಬಂದು ಗುದ್ದಿದೆ ಎನ್ನಲಾಗುತ್ತಿದೆ.

ಕರ್ನಾಟಕ ಸರ್ಕಾರ
ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆಯುಷ್ ಕಾರ್ಯಾಲಯ ಉತ್ತರ ಕನ್ನಡ ಜಿಲ್ಲೆ, ಕಾರವಾರ
Tender Number AYD/2024-25/IND0086 ದಿನಾಂಕ: 25–01–2025

ಇ–ಟೆಂಡರ್ ಪ್ರಕಟಣೆ

ಜಿಲ್ಲಾ ಆಯುಷ್ ಅಧಿಕಾರಿಗಳು, ಉತ್ತರಕನ್ನಡ ಜಿಲ್ಲೆ ಕಾರವಾರ ಇವರ ಆಡಳಿತ ವ್ಯಾಪ್ತಿಯಲ್ಲಿ ಬರುವ 04 ಸರ್ಕಾರಿ ಆಯುರ್ವೇದ ಆಸ್ಪತ್ರೆಗಳಿಗೆ ಬರುವ ರೋಗಿಗಳ ಶುಶ್ರೂಷಗೆ ಅವಶ್ಯವಿರುವ ಆಯುರ್ವೇದ ಔಷಧಿಗಳ ಪೂರೈಕೆಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಇ–ಟೆಂಡರ್ ಪೋರ್ಟಲ್‌ನಲ್ಲಿ ಪಡೆದುಕೊಳ್ಳಬಹುದು.

(1) ಟೆಂಡರ್ ಫಾರ್ಮ ಸಲ್ಲಿಸಲು ಪ್ರಾರಂಭ ದಿನಾಂಕ ಮತ್ತು ಸಮಯ: 27–01–2025 ಮುಂಜಾನೆ 10.30 ಘಂಟೆಗೆ (2) ಪ್ರೀ ಬಿಡ್ ದಿನಾಂಕ ಮತ್ತು ಸಮಯ: 05–02–2025 ಮುಂಜಾನೆ 11.00 ಘಂಟೆಗೆ (3) ಭರ್ತಿ ಮಾಡಿದ ಫಾರ್ಮಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 10–02–2025 ಸಾಯಂಕಾಲ 4.30 ಘಂಟೆಯ ವರೆಗೆ (4) ಮಾದರಿಗಳ ಸಲ್ಲಿಕೆಯ ದಿನಾಂಕ (Medicine Sample) ಸಮಯ: 11–02–2025 ಮದ್ಯಾಹ್ನ 3.00 ಘಂಟೆಯ ವರೆಗೆ ಮಾತ್ರ (5) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 12–02–2025 ಸಾಯಂಕಾಲ 4.00 ಘಂಟೆಗೆ (6) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 17–02–2025 ಮುಂಜಾನೆ 11.00 ಘಂಟೆಗೆ (7) ಇ.ಎಂ.ಡಿ. ಮೊತ್ತ: 66,100/–

ಸಹಿ/– ಜಿಲ್ಲಾ ಆಯುಷ್ ಅಧಿಕಾರಿಗಳು
ಉತ್ತರ ಕನ್ನಡ ಜಿಲ್ಲೆ, ಕಾರವಾರ

DIPR/KWR/MCA/804/24-25 dt. 28.01.2025

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.

ಟೆಂಡರ್ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಯೋಜನಾ ಉಸ್ತುವಾರಿ ಸಂಸ್ಥೆಯ (PMC) ನೇಮಕಾತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಇಂಡೆಂಟ್ ಸಂಖ್ಯೆ
1	ಕೊಪ್ಪಳ ಜಿಲ್ಲೆ ಮತ್ತು ತಾಲ್ಲೂಕಿನ ಕೊಪ್ಪಳ ಗ್ರಾಮದ **ಬ್ಲಾಕ್–ಎ** ರಲ್ಲಿ ಅಭಿವೃದ್ಧಿಪಡಿಸುತ್ತಿರುವ ನಿವೇಶನ ಮತ್ತು ಸೇವೆಗಳ ಕಾಮಗಾರಿ (21.31 ಎಕರೆ).	KHB/CE/PMC/NIT No. KHB/2024-25/SE0228 Date:27.01.2025
2	ಕೊಪ್ಪಳ ಜಿಲ್ಲೆ ಮತ್ತು ತಾಲ್ಲೂಕಿನ ಕೊಪ್ಪಳ ಗ್ರಾಮದ **ಬ್ಲಾಕ್–ಬಿ** ರಲ್ಲಿ ಅಭಿವೃದ್ಧಿಪಡಿಸುತ್ತಿರುವ ನಿವೇಶನ ಮತ್ತು ಸೇವೆಗಳ ಕಾಮಗಾರಿ (25.87 ಎಕರೆ).	KHB/CE/PMC/NIT No. KHB/2024-25/SE0229 Date:27.01.2025
3	ಕೊಪ್ಪಳ ಜಿಲ್ಲೆ ಮತ್ತು ತಾಲ್ಲೂಕಿನ ಕೊಪ್ಪಳ ಗ್ರಾಮದ **ಬ್ಲಾಕ್–ಸಿ** ರಲ್ಲಿ ಅಭಿವೃದ್ಧಿಪಡಿಸುತ್ತಿರುವ ನಿವೇಶನ ಮತ್ತು ಸೇವೆಗಳ ಕಾಮಗಾರಿ (24.97 ಎಕರೆ),	KHB/CE/PMC/NIT No. KHB/2024-25/SE0230 Date:27.01.2025
4	ಕೊಪ್ಪಳ ಜಿಲ್ಲೆ ಮತ್ತು ತಾಲ್ಲೂಕಿನ ಕೊಪ್ಪಳ ಗ್ರಾಮದ **ಬ್ಲಾಕ್–ಡಿ** ರಲ್ಲಿ ಅಭಿವೃದ್ಧಿಪಡಿಸುತ್ತಿರುವ ನಿವೇಶನ ಮತ್ತು ಸೇವೆಗಳ ಕಾಮಗಾರಿ (52.33 ಎಕರೆ),	KHB/CE/PMC/NIT No. KHB/2024-25/SE0231 Date:27.01.2025
ಟೆಂಡರ್ ಸ್ವೀಕರಿಸಲು ಕೊನೆಯ **ದಿನಾಂಕ: 10.02.2025 ಸಂಜೆ 4.00 ಗಂಟೆಯವರೆಗೆ**		

ಕಾಮಗಾರಿಯ ಬಗ್ಗೆ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ.
ಕಾರ್ಯಪಾಲಕ ಅಭಿಯಂತರರು,ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು,
Telephone No: **080-22273511/ 080-22100077 web site: https://kppp.karnataka.gov.in**

ಸಹಿ/–ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/CP/VCPL/4631/2024-25

ಮೂವರಿಗೆ ಅರಿವೇ ಗುರು ಪ್ರಶಸ್ತಿ



ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ ನೀಡುವ ಅರಿವೇ ಗುರು' ಪ್ರಶಸ್ತಿಗೆ ಸಾಹಿತ್ಯ ಕ್ಷೇತ್ರದಿಂದ ಪ್ರೊ.ಚಂದ್ರಶೇಖರ ಕಂಬಾರ, ಸಮಾಜ ವಿಜ್ಞಾನ ಕ್ಷೇತ್ರದಿಂದ ಪ್ರೊ.ವಿ.ಜಿ.ತಳವಾರ ಹಾಗೂ ವಿಜ್ಞಾನ ಕ್ಷೇತ್ರದಿಂದ ಪ್ರೊ. ಪ್ರೊ.ಎನ್.ಎಂ. ಬುಜುರ್ಕೆ ಅವರನ್ನು ಆಯ್ಕೆ ಮಾಡಲಾಗಿದೆ. ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಭವನದಲ್ಲಿ ಜ.29ರಂದು ಬೆಳಿಗ್ಗೆ 11ಗಂಟೆಗೆ ಪ್ರಶಸ್ತಿ ಸಮಾರಂಭ ನಡೆಯಲಿದೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಡಿ.ಬಿ. ಪರಮಶಿವಮೂರ್ತಿ ಪ್ರಶಸ್ತಿ ಪ್ರದಾನ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

ಹೆಜ್ಜೇನು ದಾಳಿ: ವ್ಯಕ್ತಿ ಸಾವು

ಬೀದರ: ಜಮೀನಲ್ಲಿ ಬಂದ ಮಂಗ ಓಡಿಸಲು ಹೋದ ವೇಳೆ ಹೆಜ್ಜೇನು ದಾಳಿಗೆ ಒಳಗಾಗಿ ವ್ಯಕ್ತಿಯೊಬ್ಬ ಮೃತಪಟ್ಟ ಘಟನೆ ಹುಲಸೂರ ತಾಲೂಕಿನ ಗಡಿಗೌಂಡಗಾಂವ ಗ್ರಾಮದಲ್ಲಿ ನಡೆದಿದೆ. ಯುವರಾಜ ನಾಗಶಟ್ಟಿ ಬಿರಾದಾರ (42) ಮೃತಪಟ್ಟ ವ್ಯಕ್ತಿ. ಜಮೀನಿಗೆ ಬಂದಿದ್ದ ಮಂಗಗಳನ್ನು ಓಡಿಸಲೆಂದು ತಂದೆ ಹಾಗೂ ಸಹೋದರನೊಂದಿಗೆ ತೆರಳಿದ್ದ. ಈ ವೇಳೆ ಜಮೀನಿನಲ್ಲಿರುವ ಮಾವಿನ ಮರದಲ್ಲಿದ್ದ ಹೆಜ್ಜೇನು ಓಡಿಸಲೆಂದು ಮರದ ಕೆಳಗೆ ಬೆಂಕಿ ಹಚ್ಚಿದ್ದು, ಈ ವೇಳೆ ಹೆಜ್ಜೇನು ದಾಳಿ ನಡೆಸಿವೆ.

ಗ್ರಾಮೀಣ ಪತ್ರಕರ್ತರಿಗೆ ಜಿಲ್ಲಾ ಬಸ್ ಪಾಸ್‌ಗೆ ಅರ್ಜಿ ಆಹ್ವಾನ

ಬೆಂಗಳೂರು: ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಾಮೀಣ ಪತ್ರಕರ್ತರಿಗೆ ವೃತ್ತಿ ಸಂಬಂಧಿತ ಚಟುವಟಿಕೆಗಳಿಗೆ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಯಾಣಿಸಲು ಉಚಿತ ಬಸ್ ಪಾಸ್ ಯೋಜನೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ವಿದ್ಯುನ್ಮಾನ ಅಥವಾ ಮುದ್ರಣ ಮಾಧ್ಯಮಗಳಲ್ಲಿ ಪೂರ್ಣಾವಧಿಗೆ ನೇಮಕಗೊಂಡು 4 ವರ್ಷಗಳ ಸೇವಾನುಭವ ಹೊಂದಿರುವ ಪತ್ರಕರ್ತರು ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ನೇಮಕಾತಿ ಆದೇಶ/ವೇತನ ಪತ್ರ/ ಬ್ಯಾಂಕ್ ಸ್ಟೇಟ್ಮೆಂಟ್ ಗಳಲ್ಲಿ ಯಾವುದಾದರೂ ದಾಖಲೆಗಳನ್ನು ಸೇವಾನುಭವಕ್ಕಾಗಿ ಒದಗಿಸಬೇಕು. ಜಿಲ್ಲಾ ವ್ಯಾಪ್ತಿಯಲ್ಲಿ ಸಂಚರಿಸುವ ಕರ್ನಾಟಕ ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ಜಿಲ್ಲಾ ವ್ಯಾಪ್ತಿಗೆ ಉಚಿತವಾಗಿ ಸಂಚರಿಸಬಹುದು. ತಹಸೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ ಒದಗಿಸಬೇಕು. ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸುವ ವರದಿಗಾರರಿಗೆ ಪ್ರತಿ ತಾಲೂಕಿಗೆ ಸಂಪಾದಕರು ಸೂಚಿಸುವ ಒಬ್ಬರಿಗೆ, ಜಿಲ್ಲಾ ಮಟ್ಟದ ಪತ್ರಿಕೆಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಒಬ್ಬರಿಗೆ, ಆರು ಪುಟಗಳಲ್ಲಿ ಪ್ರಕಟವಾಗುವ ಪ್ರಾದೇಶಿಕ ಪತ್ರಿಕೆಗಳು ಓರ್ವ ವರದಿಗಾರರು ಹಾಗೂ ಓರ್ವ ಫೋಟೊಗ್ರಾಫರ್, ಎಂಟು ಅಥವಾ ಹೆಚ್ಚು ಪುಟಗಳಲ್ಲಿ ಪ್ರಕಟವಾಗುವ ಪ್ರಾದೇಶಿಕ ಪತ್ರಿಕೆಗಳು ಇಬ್ಬರು ವರದಿಗಾರರು ಹಾಗೂ ಓರ್ವ ಫೋಟೊ ಗ್ರಾಫರ್‌ಗೆ ಬಸ್ ಪಾಸ್ ಪಡೆಯಲು ಅವಕಾಶವಿದೆ.

ಉಪಗ್ರಹ ಆಧಾರಿತ ವಿದ್ಯುನ್ಮಾನ ವಾಹಿನಿಗಳ ವರದಿಗಾರರು ತಾಲೂಕು ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೆ ಪ್ರತಿ ತಾಲೂಕಿಗೆ ಓರ್ವ ಕ್ಯಾಮರಾಮ್ಯಾನ್ ಹಾಗೂ ಓರ್ವ ವರದಿಗಾರರು ಬಸ್ ಪಾಸ್ ಪಡೆಯಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

12 ವರ್ಷಗಳ ನಂತರ ಮೊದಲ ಮಗುವಿನ ನಿರೀಕ್ಷೆಯಲ್ಲಿದ್ದ ಅಂಜಲಿ ಕುಟುಂಬ

ರಾಜ್ಯದಲ್ಲಿ ಮತ್ತೆ ಇಬ್ಬರು ಬಾಣಂತಿಯರ ಸಾವು

ಅಂಜಲಿ ಪಾಟೀಲ್

ಕೆ.ಆರ್.ಅಶ್ವಿನಿ

ಬೆಳಗಾವಿ/ ತುಮಕೂರು: ಮದುವೆಯಾದ 12 ವರ್ಷಗಳ ನಂತರ ಮೊದಲ ಮಗುವಿನ ನಿರೀಕ್ಷೆಯ ಲ್ಲಿದ್ದ ಕುಟುಂಬಕ್ಕೆ ಬರಸಿಡಿಲು ಬಡಿದಂತಾಗಿದ್ದು, ಹೆರಿಗೆಯಾದ ಕೆಲವೇ ಗಂಟೆಗಳಲ್ಲಿ ಬಾಣಂತಿ ಮೃತಪಟ್ಟ ಘಟನೆ ಮಂಗಳವಾರ ಬಿಮ್ಸ್ ಆಸ್ಪತ್ರೆಯಲ್ಲಿ ನಡೆದಿದೆ.

ಬೆಳಗಾವಿ ತಾಲೂಕಿನ ನಿಲಜಿ ಗ್ರಾಮದ ಅಂಜಲಿ ಪಾಟೀಲ್ (31) ಮೃತ ದುರ್ದೈವಿ. ಕಳೆದ ಹನ್ನೆರಡು ವರ್ಷಗಳ ಹಿಂದೆ ನಿಲಜಿ ಗ್ರಾಮದ ನಿಂಗಾಣಿ ಪಾಟೀಲ ಎಂಬುವವರ ಜೊತೆ ಮದುವೆಯಾಗಿತ್ತು. ಹನ್ನೆರಡು ವರ್ಷಗಳ ನಂತರ ಅಂಜಲಿ ಗರ್ಭಿಯಾದ ಹಿನ್ನಲೆಯಲ್ಲಿ ಮನೆಯಲ್ಲಿ ಸಂತೋಷ ಮನೆ ಮಾಡಿತ್ತು. ಹೆರಿಗೆಗೆಂದು ಸೋಮವಾರ ಬಿಮ್ಸ್ ಆಸ್ಪತ್ರೆಗೆ ಗರ್ಭಿಣಿ ಮಹಿಳೆ ಅಂಜಲಿ ದಾಖಲಾಗಿದ್ದಳು.

ತಡರಾತ್ರಿ ಹೆರಿಗೆ ನೋವು ಕಾಣಿಸಿಕೊಂಡಿದ್ದು ಆರೋಗ್ಯದಲ್ಲಿ ಕೊಂಚ ಏರುಪೇರಾದ ಹಿನ್ನೆಲೆಯಲ್ಲಿ ವೈದ್ಯರು ಸಿಜೇರಿಯನ್ ಮೂಲಕ ಹೆರಿಗೆ ಮಾಡಿದ್ದು, ಹೆಣ್ಣು ಮಗುವಿನ ಜನನವಾಗಿದೆ.

ಆರೋಗ್ಯವಾಗಿದ್ದ ಅಂಜಲಿಗೆ ಬಿಪಿಯಲ್ಲಿ ಏರುಪೇರು ಆದ ಕಾರಣ ಸಾವ ನ್ನಪ್ಪಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಕುಟುಂಬದವರು, ಮೊದಲಿಗೆ ವೈದ್ಯರು ಸಾಮಾನ್ಯ ಹೆರಿಗೆ ಆಗುತ್ತದೆ ಎಂದು ಹೇಳಿದ್ದರು. ಆಮೇಲೆ ಸಿಜೇರಿಯನ್ ಮಾಡಿದ್ದಾರೆ.

ಸರಿಯಾದ ಸಮಯಕ್ಕೆ ವೈದ್ಯರು ಚಿಕಿತ್ಸೆ ನೀಡಿಲ್ಲ. ಹಾಗಾಗಿ, ಅಂಜಲಿ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಆರೋಪಿಸಿದ್ದಾರೆ.

ತೀವ್ರ ರಕ್ತಸ್ರಾವದಿಂದ ಶಿಕ್ಷಕಿ ಸಾವು

ಹೊಸನಗರ ತಾಲೂಕಿನ ನಗರದ ಗರ್ಭಿಣಿಯೊಬ್ಬರು ತೀವ್ರ ರಕ್ತಸ್ರಾವದಿಂದ ಸಾವನ್ನಪ್ಪಿರುವ ಘಟನೆ ಶಿವಮೊಗ್ಗ ಖಾಸಗಿ ಆಸ್ಪತ್ರೆಯಲ್ಲಿ ನಡೆದಿದೆ.

ದುಬಾರ್ತಟ್ಟಿ ನಿವಾಸಿ, ನಗರ ಅಮೃತ ವಿದ್ಯಾಲಯದ ಶಿಕ್ಷಕಿ ಕೆ.ಆರ್.ಅಶ್ವಿನಿ (27) ಮೃತ ಗರ್ಭಿಣಿ. ಜ.24 ರಂದು ಅಶ್ವಿನಿ ಗರ್ಭಿಣಿಯಾಗಿರುವುದು ತವರು ಮನೆಗೆ ತಿಳಿಸಿದ್ದರು. ಆದರೆ ಜ.26 ರಂದು ರಕ್ತಸ್ರಾವವಾಗಿದ್ದರಿಂದ ಸಾಗರದ ಸರಕಾರಿ ಆಸ್ಪತ್ರೆಗೆ ಸೇರಿಸಿದ್ದರು. ಸೋಮವಾರ ಸಾಗರ ತಾಲೂಕು ಸರಕಾರಿ ಆಸ್ಪತ್ರೆಗೆ ಗರ್ಭಿಣಿ ಅಶ್ವಿನಿ ದಾಖಲಾಗಿದ್ದಳು.

ಅಶ್ವಿನಿಗೆ ಗರ್ಭಪಾತವಾದ ಹಿನ್ನೆಲೆ ತೀವ್ರ ರಕ್ತಸ್ರಾವ ಆಗಿತ್ತು. ಈ ವೇಳೆ ಖಾಸಗಿ ಆಸ್ಪತ್ರೆಗೆ ಕರೆದೊಯ್ಯುವಂತೆ ವೈದ್ಯರು ಸೂಚಿಸಿದ್ದರು. ಬಳಿಕ ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೆ ಮೃತ ಪಟ್ಟಿದ್ದಾರೆ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು
Telephone No: 9448994705

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office, Procurement Section, CESC, Mysuru-570017.
Website: www.cescmysore.org
E-mail ID: gmpurc@cescmysore.org

Company Identity Number(CIN): U40109KA2004SGC035177

ಚಾವಿಸನಿನಿ/ಪ್ರ.ವ್ಯ/ಉ.ಪ್ರ.ವ್ಯ(ಖ)/ಸ.ಪ್ರ.ವ್ಯ(ಖ–2)/2024–25/26825 **ದಿನಾಂಕ: 27.01.2025**

ಅಲ್ಪಾವಧಿ ಟೆಂಡರ್ ಪ್ರಕಟಣೆ

(ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾವಿಸನಿನಿಗೆ ಅವಶ್ಯವಾದ ಈ ಕೆಳಕಂಡ ಟಿ & ಪಿ ಮತ್ತು ಸುರಕ್ಷತ ಸಾಮಗ್ರಿಗಳನ್ನು ಸರಬರಾಜು ಮಾಡಲು ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ ಸಂ	ಸಾಮಾಗ್ರಿಗಳ ವಿವರ	ಟೆಂಡರ್ ವಿಚಾರಣೆ ಸಂಖ್ಯೆ/ದಿನಾಂಕ
1	ಮೈಸೂರು ಕಾರ್ಯ ಮತ್ತು ಪಾಲನಾ ವೃತ್ತ ವ್ಯಾಪ್ತಿಗೆ ಟಿ & ಪಿ ಮತ್ತು ಸುರಕ್ಷತ ಸಾಮಗ್ರಿಗಳನ್ನು ಸರಬರಾಜು ಮಾಡಲು	ಸಿ2–6031/27–01–2025
2	ಮಂಡ್ಯ ಕಾರ್ಯ ಮತ್ತು ಪಾಲನಾ ವೃತ್ತ ವ್ಯಾಪ್ತಿಗೆ ಟಿ & ಪಿ ಮತ್ತು ಸುರಕ್ಷತ ಸಾಮಗ್ರಿಗಳನ್ನು ಸರಬರಾಜು ಮಾಡಲು	ಸಿ2–6032/27–01–2025
3	ಹಾಸನ ಕಾರ್ಯ ಮತ್ತು ಪಾಲನಾ ವೃತ್ತ ವ್ಯಾಪ್ತಿಗೆ ಟಿ & ಪಿ ಮತ್ತು ಸುರಕ್ಷತ ಸಾಮಗ್ರಿಗಳನ್ನು ಸರಬರಾಜು ಮಾಡಲು	ಸಿ2–6033/27–01–2025
4	ಚಾಮರಾಜನಗರ–ಕೊಡಗು ಕಾರ್ಯ ಮತ್ತು ಪಾಲನಾ ವೃತ್ತ ವ್ಯಾಪ್ತಿಗೆ ಟಿ & ಪಿ ಮತ್ತು ಸುರಕ್ಷತ ಸಾಮಗ್ರಿಗಳನ್ನು ಸರಬರಾಜು ಮಾಡಲು	ಸಿ2–6034/27–01–2025

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 27.01.2025ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91–8046010000, +91–8068948777 ಅಥವಾ ಇ–ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.
ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

ಸಹಿ/– ಪ್ರಧಾನ ವ್ಯವಸ್ಥಾಪಕರು(ಖರೀದಿ), ಚಾ.ವಿ.ಸ.ನಿನಿ., ಮೈಸೂರು

DIPR/DDMYS/1187/KSMCA//2024-25

ಶಾಲೆಗಳಲ್ಲಿ ದಾಖಲಾತಿ ಕುಸಿತ

← ಮೊದಲಪುಟದಿಂದ

- **ದಾಖಲಾತಿಯಲ್ಲಿ ಏರಿಳಿತ:** 2006ರಲ್ಲಿ ಖಾಸಗಿ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ ಶೇ.18.7ರಷ್ಟಿತ್ತು. ಇದು 2014ರಲ್ಲಿ ಶೇ.30.8ಕ್ಕೆ ಏರಿಕೆಯಾಗಿತ್ತಲ್ಲದೇ 2018ರಲ್ಲಿಯೂ ಇಷ್ಟೇ ಪ್ರಮಾಣದಲ್ಲಿ ಇತ್ತು. ಕೋವಿಡ್–19 ಪಿಡುಗು ಕಾಣಿಸಿಕೊಂಡ ವರ್ಷಗಳಲ್ಲಿ ಸರಕಾರಿ ಶಾಲೆಗಳಿಗೆ ಪ್ರವೇಶ ಪಡೆಯುವ ಮಕ್ಕಳ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂತು. 2018ರಲ್ಲಿ ಸರಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಪ್ರಮಾಣ ಶೇ. 65.6ರಷ್ಟಿದ್ದದ್ದು 2022ರಲ್ಲಿ 72.9ಕ್ಕೆ ಏರಿತು. ಆದರೆ ನಂತರದ ವರ್ಷಗಳಲ್ಲಿ ದಾಖಲಾತಿ ಪ್ರಮಾಣ ಕುಸಿದಿದ್ದು, 2024ರಲ್ಲಿ ಶೇ.66.8ಕ್ಕೆ ಇಳಿದಿತ್ತು. ದಾಖ ಲಾತಿ ಪ್ರಮಾಣವು 2018ರಲ್ಲಿ ಇದ್ದ ಮಟ್ಟಕ್ಕೆ ಸಂಪೂರ್ಣವಾಗಿ ಮರಳಿದೆ. ಬೇರೆ ಬೇರೆ ಕ್ಷೇತ್ರಗಳ ಆರ್ಥಿಕತೆಯೂ ಮತ್ತೆ ಹಳಿಗೆ ಬಂದಿರುವುದನ್ನು ನೋಡಿದಾಗ ಶೈಕ್ಷಣಿಕ ರಂಗದಲ್ಲಿನ ಈ ಬದಲಾವಣೆ ಅಚ್ಚರಿ ಮೂಡಿಸುವುದಿಲ್ಲ.
- **ಓದುವ ಸಾಮರ್ಥ್ಯ:** ರಾಷ್ಟ್ರಮಟ್ಟಕ್ಕೆ ಸಂಬಂಧಿಸಿದಂತೆ 2014ರಲ್ಲಿ 3ನೇ ತರಗತಿ ಮಕ್ಕಳ ಪೈಕಿ ಓದುವ ಸಾಮರ್ಥ್ಯ ಹೊಂದಿದ್ದವರ ಸಂಖ್ಯೆ ಶೇ.23.6ರಷ್ಟಿತ್ತು. ಈ ಪ್ರಮಾಣ 2018ರಲ್ಲಿ ಶೇ.27.3ಕ್ಕೆ ಹೆಚ್ಚಳವಾಯಿತು. ಓದುವ ಸಾಮರ್ಥ್ಯ ಹೊಂದಿದ್ದ ಮಕ್ಕಳ ಸಂಖ್ಯೆ 2022ರಲ್ಲಿ ಶೇ.20.5ಕ್ಕೆ ಕುಸಿದಿತ್ತು. ಈಗ 3ನೇ ತರಗತಿ ಮಕ್ಕಳಲ್ಲಿ ಓದುವ ಸಾಮರ್ಥ್ಯದಲ್ಲಿ ಮತ್ತೆ ಸುಧಾರಣೆ ಕಂಡುಬಂದಿದ್ದು, ಶೇ.27.1ರಷ್ಟು ಮಕ್ಕಳು ನಿರರ್ಗಳವಾಗಿ ಓದಬಲ್ಲವರಾಗಿದ್ದಾರೆ.
- **ಕೆಲ ರಾಜ್ಯಗಳಿಂದ ಉತ್ತಮ ಸಾಧನೆ, ಬೋಧನೆ:** ಕಲಿಕೆ ಪ್ರಕ್ರಿಯೆಯಲ್ಲಿ ಕೆಲ ರಾಜ್ಯಗಳು ಉತ್ತಮ ಸಾಧನೆ ದಾಖಲಿಸಿವೆ. ಕೆಲ ರಾಜ್ಯಗಳು ಕೋವಿಡ್–19 ಪಿಡುಗಿಗೂ ಮುನ್ನ ಇದ್ದ ಕಲಿಕಾ ಮಟ್ಟಕ್ಕಿಂತಲೂ ಹೆಚ್ಚಿನ ಸುಧಾರಣೆ ದಾಖಲಿಸಿದ್ದರೆ ಇನ್ನೂ ಕೆಲ ರಾಜ್ಯಗಳಲ್ಲಿ ಸುಧಾರಣೆ ಕಂಡುಬರಬೇಕಿದೆ. ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ ಹಾಗೂ ತಮಿಳುನಾಡಿನಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿದೆ.
- **ಮಕ್ಕಳ ಸಂಖ್ಯೆ ಇಳಿಕೆ:** ರಾಷ್ಟ್ರ ಮಟ್ಟದಲ್ಲಿ 1ನೇ ತರಗತಿಗೆ ಪ್ರವೇಶ ಪಡೆದ ಮಕ್ಕಳ ಪೈಕಿ 5 ವರ್ಷ ಅಥವಾ ಅದಕ್ಕಿಂತ ಕಡಿಮೆ ವಯೋಮಾನದ ಮಕ್ಕಳ ಸಂಖ್ಯೆಯಲ್ಲಿ ಕ್ರಮೇಣ ಇಳಿಕೆ ಕಂಡುಬಂದಿದೆ. 2018ರಲ್ಲಿ ಇಂತಹ ಮಕ್ಕಳ ಪ್ರಮಾಣ ಶೇ.25.6ರಷ್ಟು ಇತ್ತು. 2022ರಲ್ಲಿ ಶೇ.22.7ಕ್ಕೆ ಕುಸಿಯಿತು. 2024ರ ವೇಳೆಗೆ ಈ ಪ್ರಮಾಣ ಶೇ.16.7ರಷ್ಟು ಇತ್ತು.

ಕೊಲೆ ಆರೋಪಿಗಳ ಕಾಲಿಗೆ ಗುಂಡೇಟು

ಹುಬ್ಬಳ್ಳಿ: ಹಳೇ ವೈಷಮ್ಯಕ್ಕೆ ಚಾಕುವಿನಿಂದ ಇರಿದು ಯುವಕನನ್ನು ಬರ್ಬರವಾಗಿ ಕೊಲೆಗೈದ ಘಟನೆ ಹುಬ್ಬಳ್ಳಿಯ ಲಿಂಗರಾಜನಗರ ರಸ್ತೆಯಲ್ಲಿನ ಗೋಲ್ಡನ್ ಹೈಟ್ಸ್ ಬಾರ್ ಪಾರ್ಕಿಂಗ್ ಸ್ಥಳದಲ್ಲಿ ನಡೆದಿದೆ. ಹತ್ಯೆಯಾಗಿರುವ ಯುವಕನನ್ನು ಆಕಾಶ್ ವಾಲ್ಮೀಕಿ (24) ಎಂದು ಗುರುತಿಸಲಾಗಿದೆ. ದುಷ್ಕರ್ಮಿಗಳ ಗುಂಪು ಆಕಾಶ್ ಮೇಲೆ ದಾಳಿ ಮಾಡಿ ಚಾಕುವಿನಿಂದ ಇರಿದು ಪರಾರಿಯಾಗಿದ್ದರು. ವಿಷಯ ತಿಳಿಯುತ್ತಿದ್ದಂತೆ ಘಟನಾ ಸ್ಥಳಕ್ಕೆ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್, ಡಿಸಿಪಿ ನಂದಗಾವಿ, ವಿದ್ಯಾನಗರದ ಪೊಲೀಸರು ದೌಡಾಯಿಸಿ ಪರಿಶೀಲಿಸಿ, ಕೊಲೆಗಾರರ ಬಂಧನಕ್ಕೆ ಕ್ರಮ ಕೈಗೊಂಡಿದ್ದರು. ಅದರಂತೆ ಬಂಧಿಸಲು ತೆರಳಿದ ಪೊಲೀಸರ ಮೇಲೆ ಆರೋಪಿಗಳು ಎಂಟಿಎಸ್ ಕಾಲೊನಿ ಬಳಿ ಹಲ್ಲೆ ಮಾಡಿ ತಪ್ಪಿಸಿಕೊಳ್ಳಲು ಯತ್ನಿಸಿದ್ದಾರೆ. ಆಗ ಪೊಲೀಸರು ಮೂವರ ಕಾಲಿಗೆ ಗುಂಡು ಹಾರಿಸಿ ಬಂಧಿಸಿದ್ದಾರೆ. ಗುಂಡೇಟು ಬಿದ್ದವರನ್ನು ಆನಂದ ನಗರದ ನಿವಾಸಿ ಅಭಿಷೇಕ್ ಶಿರೂರ, ವಿನೋದ್ ಅಂಬಿಗೇರ, ಉಲ್ಲಪ್ಪ ಕೋಟಿ ಎಂದು ಗುರುತಿಸಲಾಗಿದೆ. ಇವರನ್ನು ಕಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಎಳೆಲಿಂಬೆಕಾಯಿ ತಂಡದೊಂದಿಗೆ ಆರಂಭಗೊಂಡ ವಿಶ್ವವಾಣಿ ಒಂಬತ್ತು ವರ್ಷಗಳನ್ನು ಪೂರೈಸಿ ದಶಮಾನೋತ್ಸಕ್ಕೆ ಕಾಲಿಡುವ ಮೂಲಕ ಮಹತ್ವದ ಮೈಲಿಗಲ್ಲನ್ನು ದಾಟಿದೆ. ಆರಂಭದಲ್ಲಿ ದಿನಪತ್ರಿಕೆಯಾಗಿ ಓದುಗರ ಮನೆ ತಲುಪುತ್ತಿದ್ದ ವಿಶ್ವವಾಣಿ ಇದೀಗ ಡಿಜಿಟಲ್ ಚಾನೆಲ್, ಲೋಕಧ್ವನಿ ದಿನಪತ್ರಿಕೆ, ಇದೀಗ ಪ್ರವಾಸಿ ಪ್ರಪಂಚ ಸೇರಿ ತನ್ನ ಕಬಂದ ಬಾಹುಗಳನ್ನು ದಿನದಿಂದ ದಿನಕ್ಕೆ ವಿಸ್ತರಿಸಿಕೊಂಡು ಸಾಗುತ್ತಿದೆ. ವಿಶ್ವವಾಣಿಯಲ್ಲಿರುವ ಅಂಕಣಗಳು ಇಡೀ ಪತ್ರಿಕೆಯ ಜೀವಾಳ. ಪ್ರತಿ ಭಾನುವಾರ ಮೂಡಿಬರುವ ವಿರಾಮದ ನಾಲ್ಕು ಪುಟಗಳು ವಾರಕ್ಕಾಗುವಷ್ಟು ಸರಕನ್ನು ನೀಡುತ್ತವೆ. ವಿಶ್ವೇಶ್ವರ ಭಟ್ಟರ ಮುಂದಾಳತ್ವದಲ್ಲಿ ಪ್ರಜ್ವಲಿಸುತ್ತಿರುವ ವಿಶ್ವವಾಣಿ ಭವಿಷ್ಯದಲ್ಲಿ ಇನ್ನಷ್ಟು ಉತ್ತುಂಗಕ್ಕೆ ಏರಲಿ. ವಿಶ್ವವಾಣಿಯ ಈ ಪಯಣದಲ್ಲಿರುವ ಸಮಸ್ತ ಸಿಬ್ಬಂದಿ ಬಳಗಕ್ಕೆ ಹಾರ್ದಿಕ ಶುಭಾಶಯಗಳು.

– **ಎಚ್.ಜಿ. ಅಶ್ವತ್ಥನಾರಾಯಣ,** ಜಗಳೂರು

ನೋಡಿದಾಕ್ಷಣ ಓದಲೇಬೇಕೆಂಬ ಪುಟವಿನ್ಯಾಸವುಳ್ಳ ವಿಶ್ವವಾಣಿ ಪತ್ರಿಕೆಯ ಕಾಯಂ ಓದುಗರಲ್ಲಿ ನಾನೂ ಒಬ್ಬ. ಇದರ ಅಂಕಣ ಬರಹಗಳಿಗೆ ಮನಸೋತಿದ್ದೇನೆ. ವಿಶ್ವೇಶ್ವರ ಪತ್ರಿಕಾ ರಂಗದಲ್ಲಿ ಹೊಸಹೊಸ ಪ್ರಯೋಗಗಳನ್ನು ಮಾಡುತ್ತಾ,ಓದುಗರನ್ನು ನಿರಂತರವಾಗಿ ತನ್ನತ್ತ ಸೆಳೆದುಕೊಳ್ಳುವ ಗುಣವುಳ್ಳ ವಿಶ್ವೇಶ್ವರ ಭಟ್ಟರ ಬರವಣಿಗೆಗೆ ಆಯಸ್ಕಾಂತೀಯ ಶಕ್ತಿಯಿದೆ. ಅವರ ಸಾರಥ್ಯದಲ್ಲಿ ಬರುತ್ತಿರುವ ವಿಶ್ವವಾಣಿ ದಶಮಾನೋತ್ಸವ ಆಚರಿಸಿಕೊಳ್ಳುತ್ತಿರುವುದು ಸಂತೋಷ ತಂದಿದೆ.ಮುದ್ರಣ ಮಾಧ್ಯಮದ ನಿರಂತರ ಸವಾಲುಗಳ ನಡುವೆ ತನ್ನ ವೃತ್ತಿಪರತೆಯನ್ನು ಕಾಪಾಡಿಕೊಂಡು, ಗುಣಮಟ್ಟದ ಪತ್ರಿಕೆಯಾಗಿ ವಿಶ್ವವಾಣಿಯನ್ನು ಕಟ್ಟಿಬೆಳೆಸಿರುವುದು ಸಾಮಾನ್ಯ ಮಾತಲ್ಲ. ಇಂತಹ ಸ್ಪರ್ಧಾತ್ಮಕ ಮನೋಭಾವದ ವಿಶ್ವೇಶ್ವರ ಭಟ್ ಮತ್ತು ಅವರ ಇಡೀ ತಂಡಕ್ಕೆ ಶುಭವಾಗಲಿ.

-ಕೆ.ಎಚ್.ಪುಟ್ಟಸ್ವಾಮಿಗೌಡ, ಶಾಸಕ

ವಸ್ತುನಿಷ್ಠ ವರದಿಗಳು,ಸಮಕಾಲೀನ ವಿಷಯಗಳ ಮೇಲಿನ ಅಂಕಣಬರಹಗಳು, ಓದುಗರನ್ನು ಸೂಜಿಗಲ್ಲಿನಂತೆ ಸೆಳೆಯುವ ಆರಾಮ, ಹೀಗೆ ಒಂದೊಂದು ಪುಟವೂ ವಿಭಿನ್ನವಾಗಿ ಮೂಡಿಬರುತ್ತಿರುವ ವಿಶ್ವವಾಣಿಯ ಯಶಸ್ಸು ವೈಯಕ್ತಿಕವಾಗಿ ತುಂಬಾ ಸಂತೋಷ ತಂದಿದೆ.ಅವರ ಗರಡಿಯಲ್ಲಿ ಪಳಗಿರುವ ಶಾಸಕ ಪ್ರದೀಪ್ ಈಶ್ವರ್ ಕೂಡ ಆಗಾಗ ಅಂಕಣ ಬರಹ ಬರೆದಿರುವುದನ್ನು ಕಂಡಿದ್ದೇನೆ.ಈ ಪತ್ರಿಕೆ ದಶಮಾನೋತ್ಸವ ಅಲ್ಲ , ಶತಮಾನೋತ್ಸವ ಆಚರಿಸಲಿ ಎಂದು ಶುಭ ಹಾರೈಸುತ್ತೇನೆ.

-ಎಸ್.ಎನ್.ಸುಬ್ಬಾರೆಡ್ಡಿ , ಬಾಗೇಪಲ್ಲಿ ಶಾಸಕ

ದಶಕದ ಹಾದಿ ಹಿಂದಿದೆ, ರಜತಪಥದ ಗುರಿಯಿದೆ...

ಎಚ್.ಕೆ. ಮಧು, ದೋಹಾ, ಕತಾರ್

ನಡೆಯುವವನೆಡವದೆ, ಕುಳಿತವನೆಡವುವನೇ..? ಓಡುವವನಿಗಲ್ಲವೇ ಹಾದಿಯಲ್ಲಿ ಬರುವ, ಎದುರಾಗುವ ತೊಡರುಗಳ ಚಿಂತೆ? ಮಂದಿ ನೀಡುವ ಎಡರು-ತೊಡರುಗಳನ್ನು ಸಂಭಾಳಿಸಿ ಗುರಿಮುಟ್ಟಿ ಗೆಲ್ಲಬೇಕಾದ ಅನಿವಾ ರ್ಯತೆ..!

ಕೇವಲ ಯಶಸ್ಸಿನ ಹಾಗೂ ಜನಪ್ರಿಯತೆಯ ಸ್ಥಿತಿ ಏಕತಾನತೆಯನ್ನು ತಂದೊಡ್ಡಬಲ್ಲದು. ಮೈಮರೆಯುವಂತೆ ಮಾಡಬಲ್ಲದು. ಜೀವನದ ತಿಳಿದಿರದ, ತಿಳಿಯಬೇಕಾದ ಪಾಠಗಳನ್ನು ತಿಳಿಯದ ಹಾಗೆ ಮಾಡಿಬಿಡಬಹುದು. ಹೀಗಾಗಿ, ಕವಲುಗಳು, ಏರಿಳಿತಗಳು, ಆಭಾಸಗಳು, ಅಪಸವ್ಯಗಳು, ಮೂದಲಿಕೆ,ತೆಗಳಿಕೆ, ತೇಜೋವಧೆ, ನಕಾರಾತ್ಮಕತೆ ಯಾವುದೇ ಧೃಢ ಮನಸ್ಸನ್ನು ಧೃತಿಗೆಡಿಸಲಾರವು. ಆತ್ಮಸಾಕ್ಷಿಗನುಗುಣವಾಗಿ ಕೆಲಸ ಮಾಡುವವನನ್ನು ಯಾವುದೇ ಅಡ್ಡಿ ಆತಂಕಗಳು ಅಲ್ಲಾಡಿಸಲಾರವು.

ವೃತ್ತಿಜೀವನದಲ್ಲಿ ತಮ್ಮ ಕೊರಳನ್ನು ಅನೇಕ ಕಡೆ ಹೊರಳಿಸಿ, ತಮ್ಮ ಪ್ರತಿಭೆಯ ದಾಳಗಳನ್ನು ಉರುಳಿಸಿ, ಆಖ್ಯೆರೆಂಬಂತೆ ಕನ್ನಡದ ದಿಗ್ಗಜ ದಿವಂಗತ ಪಾಟೀಲ ಪುಟ್ಟಪ್ಪನವರ ಪತ್ರಿಕೆ, ಅದರ ಹೆಸರನ್ನು ಅಪ್ಪಿಕೊಂಡು, ಕನ್ನಡ ಜನತೆಗೆ ಒಪ್ಪಿಸಿಕೊಂಡು ವಿಶ್ವವಾಣಿ ಪತ್ರಿಕೆ, ಕಳೆದ ಹತ್ತು ವರ್ಷಗಳಿಂದ ಒಂದು ದಿನವೂ ಪ್ರಕಟಣೆಯನ್ನು ತಪ್ಪಿಸದೆ ಕನ್ನಡ ಪತ್ರಿಕಾರಂಗದಲ್ಲಿ ತನ್ನದೇ ಆದ ಛಾಪು ಮೂಡಿಸಿ ವಿಶಿಷ್ಟ ಸ್ಥಾನ ಪಡೆದಿದೆ.

ಅದು ಯಾವಾಗ ನೀವು ವಿಜಯಕರ್ನಾಟಕ ಪತ್ರಿಕೆಯ ಉಸ್ತುವಾರಿ ಹೊತ್ತು ಕನ್ನಡಿಗರಿಗೆ ಆತ್ಮೀಯವಾದರೋ, ವಿಭಿನ್ನ ಪ್ರಯೋಗಗಳಿಗೆ ಮುಂದಾದರೋ , ತೆರೆಮರೆಯಲ್ಲಿ ಅಡಗಿರುವ ಪ್ರತಿಭೆಗಳಿಗೆ ಬರೆಯುವ ವೇದಿಕೆ ಕಲ್ಪಿಸಿದರೋ, ವಿಜಯ ಕರ್ನಾಟಕ ಪತ್ರಿಕೆಯ ಪ್ರಸಾರದ ಸಂಖ್ಯೆಯಲ್ಲಿ ದಾಂಗುಡಿಯಿಟ್ಟರೋ, ಅಂದಿನವರೆಗೆ ಇದ್ದ ಅತ್ಯಧಿಕ ಪ್ರಸಾರದ ಪತ್ರಿಕೆಯ ಸ್ಥಾನ ಪಲ್ಲಟ ಮಾಡಿದಿರೋ, ಬೆಂಗಳೂರು, ಮಂಗಳೂರು ಹಾಗೂ ಹುಬ್ಬಳ್ಳಿಗೆ ಸೀಮಿತವಾಗಿದ್ದ ಕನ್ನಡ ಪತ್ರಿಕೆಗಳ ಮುದ್ರಣ ಕೇಂದ್ರವನ್ನು ಇತರ ನಗರ ಕೇಂದ್ರಗಳಿಗೆ ವಿಸ್ತರಿಸಿದಿರೋ ಅಂದಿನಿಂದಲೇ ನಿಮ್ಮ ನಾಗಾಲೋಟ ಶುರುವಾಗಿದೆ. ಮಾರ್ಗಮಧ್ಯದಲ್ಲಿ ನಿಮಗೆ ಹೂಗುಚ್ಛಗಳ ಜೊತೆ ಮುಳ್ಳುಗಳು ಎದುರಾಗಿವೆ.

ಅದುವರೆಗೆ ಯಾವುದೇ ಆ ರೀತಿಯ ಏರುಮುಖ ಕಾಣದ ಕನ್ನಡ ದಿನಪತ್ರಿಕೆ ವಿಜಯ ಕರ್ನಾಟಕ ವಿಜಯಿಯಾಯಿತು. ಜಡ್ಡುಗಟ್ಟುತ್ತಿದ್ದ ಪತ್ರಿಕೆಗಳಿಗೆ ಎಚ್ಚರಿಕೆಯಾಯಿತು. ಪತ್ರಿಕೆಗಳು ತಮ್ಮ ಹಾದಿಯನ್ನು ಬದಲಿಸಿಕೊಂಡವು. (ನಿಲುವನ್ನಲ್ಲ). ಆದರೆ ಸ್ಪರ್ಧಾಲೋಕದಲ್ಲಿ ನಿಮ್ಮ ಸಾರಥ್ಯದ ಪತ್ರಿಕೆ ಮುಂಚೂಣಿಯಲ್ಲಿತ್ತು. ಯಶಸ್ಸಿನ ಮಧ್ಯಭಾಗದಲ್ಲಿಯೇ ಸುದ್ದಿವಾಹಿನಿಯ ಸಾರಥ್ಯದ ಜೊತೆಗೆ ಕನ್ನಡಪ್ರಭ ನಿಮ್ಮ ಮಡಿಲಿಗೆ ಬಂತು.

ವಾಹಿನಿ ಹಾಗೂ ಪತ್ರಿಕೆಯನ್ನು ಸಂಭಾಳಿಸಿ, ವಿದಾಯ ಹೇಳಿ ಅಲ್ಲಿಂದ ಹುಬ್ಬಳ್ಳಿಗೆ ದೌಡಾಯಿಸಿ, ಕಸರತ್ತು ಮಾಡಿ ವಿಶ್ವವಾಣಿಯನ್ನು ತಬ್ಬಿಬಿಟ್ಟಿರಿ. ಹಂಗಿಲ್ಲದ ಜೀವನ, ನಿಮ್ಮ ಮನೋಧರ್ಮಕ್ಕನುಗುಣವಾಗಿ ದಿನಪತ್ರಿಕೆ ತರುವ ಪ್ರಯತ್ನ, ಗಟ್ಟಿಸ್ಥಾನವನ್ನು ಪಡೆದಿದ್ದ ಅನೇಕ ಪತ್ರಿಕೆಗಳೊಂದಿಗಿನ ಸೆಣಸಾಟ, ಸ್ಪರ್ಧೆ, ಈಗಲ್ಲದಿದ್ದರೆ, ಯಾವಾಗಲೂ ಆಗದೆಂಬ ಹಠಕ್ಕೆ ಬಿದ್ದ ನಿಮ್ಮ ಧೈರ್ಯಕ್ಕೆ ದೊಡ್ಡ ಸಲಾಂ.

ಬರವಣಿಗೆ, ಅಕ್ಷರಪ್ರೇಮ ಹಾಗೂ ಬರೆಯಬಲ್ಲ ಓದುಗ,ಲೇಖಕ, ಪಾಮರರಿಂದ ಹಿಡಿದು ಪಂಡಿತರವರೆಗೆ ಎಲ್ಲರಿಗೂ ಹೇರಳ ಅವಕಾಶ ನಿಮ್ಮ ವಿಶ್ವವಾಣಿಯ ಯಶೋಗಾಥೆಯಲ್ಲಿ ಪ್ರಮುಖವಾದದ್ದು. ನೀವೆಷ್ಟು ವಿಶಾಲ ಮನೋಭಾವದ ನಿಸ್ಪೃಹರಾಗಿರುವಿರೆಂದರೆ, ರವಿ ಬೆಳಗೆರೆಯವರ ಎರಡನೆಯ ಪತ್ನಿ ಯಶೋಮತಿಯವರಿಗೆ ವಿಶ್ವವಾಣಿಯಲ್ಲಿ ಅಂಕಣ ಬರೆಯಲು ಅವಕಾಶ ಕೊಟ್ಟಿರಿ. ಬೆಳಗೆರೆಯವರ ಅಂತರ್‌ವಲಯದ ಸಹೋದ್ಯೋಗಿ ಹಾಯ್ ಬೆಂಗಳೂರ್ ಪತ್ರಿಕೆಯಲ್ಲಿನ ಪ್ರಮುಖ ಪತ್ರಕರ್ತ ಆರ್. ಟಿ. ವಿಠಲಮೂರ್ತಿ ಈಗ ನಿಮ್ಮ ಪತ್ರಿಕೆಯ ವಾರದ ಅಂಕಣಕಾರ.

ಹೇಳಿ, ಕೇಳಿ ನಿಮ್ಮದು ದಿನಪತ್ರಿಕೆ. ಪತ್ರಿಕೆ ನಿಂತ ನೀರಾಗಬಾರದು. ಇಂದಿನ ಸಾಮಾಜಿಕ ಜಾಲತಾಣ ಮತ್ತು ಸುದ್ದಿ ವಾಹಿನಿಗಳ ಆರ್ಭಟದಲ್ಲಿ, ಓದುಗರಿಗೆ ಪತ್ರಿಕೆ ಕೇವಲ ಸುದ್ದಿ ಕೊಟ್ಟರೆ ಸಾಲದು, ಅದರಲ್ಲಿ ವಿಶೇಷವಿರಬೇಕು. ಸ್ವಾರಸ್ಯವಿರಬೇಕು. ವಿನ್ಯಾಸ, ವರ್ಣ, ಪುರವಣಿ, ಅಂಕಣ ಬರೆಯುವವರ ಸಾಮರ್ಥ್ಯ ಎಲ್ಲವೂ ಪರಿಗಣಿತವಾಗುತ್ತದೆ.

ನಿತ್ಯ ಪ್ರಸವದ ನಿಮ್ಮ ಕಾಯಕದಲ್ಲಿ ಸಂಪಾದಕೀಯದ ಜೊತೆಗೆ ಸೊಂಪಾದಕೀಯ, ಸದ್ಯ ಶೋಧನೆಗೆ ವಸ್ತುಗಳನ್ನು ಓದುಗರಿಗೆ ಒದಗಿಸಬೇಕಾದರೆ ನಿಮ್ಮಲ್ಲಿ ಅದೆಷ್ಟು ಸಾಮಗ್ರಿ ಇರಬೇಕು? ಅದೆಷ್ಟು ಓದಿ ತಿಳಿದಿರಬೇಕು? ಅದೇನೋ ನಿತ್ಯ ಪ್ರಶ್ನೋತ್ತರ ಬೇರೆ..! ವಾರಕ್ಕೆರಡು ಮಧ್ಯಪುಟದ ಅಂಕಣ. ಭಾನುವಾರದ ಪುರವಣಿಯಲ್ಲಿ ದೊಡ್ಡ ದೊಡ್ಡ ಪ್ರಶ್ನೆಗಳಿಗೆ ತಕ್ಕ ಉತ್ತರ ಬೇರೆ ಹೇಳಬೇಕು. ಹೊಸ ಹೊಸ ಪುಸ್ತಕಗಳನ್ನು ಪ್ರಕಟಿಸಬೇಕು.

ಇವೆಲ್ಲವನ್ನೂ ಮೀರುವಂತೆ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ವಿಶ್ವ ಪರ್ಯಟನೆ ಮಾಡಬೇಕು. ದೇಶ ಸುತ್ತು, ಕೋಶ ಓದು ಎಂಬ ಮಾತನ್ನು ಅನ್ವರ್ಥವಾಗಿಸಬೇಕು. ಅಲ್ಲಿ ಕಂಡಿದ್ದನ್ನು ಮತ್ತು ಅನುಭವಿಸಿದ್ದನ್ನು ಓದುಗ ದೊರೆಗಳ ಮುಂದಿಡಬೇಕು. ಜೊತೆಜೊತೆಗೆ ನೀವು ವಿಶ್ವದ ಯಾವುದೇ ಮೂಲೆಯಲ್ಲಿದ್ದರೂ ಪತ್ರಿಕೆಯ ಮುದ್ರಣ ಹಾಗೂ ಪತ್ರಿಕೆಯ ಸುದ್ದಿಯ ಗುಣಮಟ್ಟಕ್ಕೆ ಕೊಂಚವೂ ಕುಂದುಂಟಾಗಬಾರದು. ನಿಮ್ಮ ತಂಡ ಹಾಗೂ ಸಹೋದ್ಯೋಗಿಗಳೊಂದಿಗೆ ನಿರಂತರ ಸಂಪರ್ಕವಿಟ್ಟುಕೊಂಡಿರಬೇಕು. ವಿಸ್ತಾರಗೊಂಡಿರುವ, ವಿಸ್ತಾರಗೊಳಿಸುತ್ತಿರುವ ಹೊಸ ಯೋಜನೆಗಳಿಗೆ ಹೊಸ ಆಯಾಮ ನೀಡಬೇಕು. ಹೀಗೆ... ಒಂದೇ, ಎರಡೇ, ಸಾಲದೆಂಬಂತೆ, ಕ್ಲಬ್‌ಹೌಸ್ ಚರ್ಚೆಯಲ್ಲಿ ಭಾಗವಹಿಸಬೇಕು, ಅತಿಥಿಗಳೊಂದಿಗೆ ಚರ್ಚಿಸಬೇಕು.

ಅಬ್ಬಬ್ಬ... ಒತ್ತಡದ ನಡುವೆ ಕೆಲಸ, ಕೆಲಸ ಮಾಡಲು ಸಮಯ ಹೊಂದಿಸುವ ಬಗೆ, ಕೆಲಸ ಪೂರೈಸಿ ಸಫಲವಾಯಿತೆಂಬ ಸಂತೋಷದ ನಡುವೆ ವಿಘ್ನಗಳು.

ಅರಿವಿದ್ದೋ, ಅರಿವಾಗದೆಯೋ ಮೈಮೇಲೆ ಆಡರುವ ಕಾನೂನು ಪ್ರಕರಣಗಳು! ಕೆಲವೆಡೆ ಖುದ್ದಾಗಿ ಹೋಗಬೇಕು, ಎದುರಿಸಬೇಕು, ರಾಜಿಗೆ ಮುಂದಾಗಬೇಕು, ಕಾನೂನು ಹೋರಾಟ ಮಾಡಬೇಕು.....

ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ, ಕನ್ನಡದ ಅಕ್ಷರ ಪ್ರಸಾರವನ್ನು ಮುನ್ನಡೆಸುವಲ್ಲಿ ಪತ್ರಿಕೆಗಳು ಹಾಗೂ ಮಾಧ್ಯಮಗಳು ಕೇವಲ Watch Dog ಗಳಲ್ಲ, ಸಮಾಜಕ್ಕೆ Body Guard ಕೂಡ. ಗಟ್ಟಿಯಾಗಿ, ಇನ್ನಷ್ಟು ಗಟ್ಟಿಯಾಗಿ ಕನ್ನಡದ ಸೇವೆಗೆ ನಾವಿದ್ದೇವೆ ಜೊತೆಗೆ..!

ಓದುಗರಿಗೆ ಅಚ್ಚುಮೆಚ್ಚಿನ ಪತ್ರಿಕೆ

ಡಿ.ಸುಧಾಕರ್, ಯೋಜನೆ ಮತ್ತು ಸಾಂಖ್ಯಿಕ ಸಚಿವ

ವಿಶ್ವೇಶ್ವರ ಭಟ್ ರ ಸಾರಥ್ಯದಲ್ಲಿ ಮೂಡಿ ಬರುತ್ತಿರುವ ವಿಶ್ವವಾಣಿ ಪತ್ರಿಕೆಯು ನಿತ್ಯವೂ ಸತ್ಯ ಸುದ್ದಿಗಳಿಗೆ ಒತ್ತುನೀಡಿ ರಾಜ್ಯದ ಓದುಗರನ್ನು ಮಾತ್ರವಲ್ಲದೇ ಸಾಗರದಾಚೆಯಲ್ಲಿಯು ಕೂಡ ಓದುಗ ದೊರೆಗಳನ್ನು ಹೊಂದಿರುವುದು ಹೆಮ್ಮೆಯ ಸಂಗತಿ.ಸ್ಥಳೀಯ ಸುದ್ದಿಯಿಂದ ಹಿಡಿದು ಸಂಪಾದಕೀಯ ನುಡಿಯವರೆಗೂ ಓದುಗರ ವಿಶ್ವಾಸ ಗಳಿಸಿ, ರಾಜಕಾರಣದೊಂದಿಗೆ ರಾಜಿ ಮಾಡಿಕೊಳ್ಳದೇ ಪ್ರತಿನಿತ್ಯವೂ ವಿನೂತನ ರಾಜಕೀಯ ವಿಶ್ಲೇಷಣೆಯನ್ನು ಹೊತ್ತುಬರುವ ವಿಶ್ವವಾಣಿ ಪತ್ರಿಕೆಯನ್ನು ಓದುವುದರಲ್ಲಿ ಕಾಣದ ಖುಷಿ ಅಡಕವಾಗಿರುತ್ತದೆ.

ಹತ್ತು ವರ್ಷಗಳ ಪಯಣದಲ್ಲಿ ಅನೇಕ ಏಳು-ಬೀಳುಗಳನ್ನು ಕಂಡು ತನ್ನದೇ ಓದುಗ ದೊರೆಗಳನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಂಡ ಕೀರ್ತಿ ಪತ್ರಿಕೆಯದ್ದು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಅನೇಕ ಸವಾಲುಗಳನ್ನು ಸಾಧನೆಯ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ವಿಶ್ವೇಶ್ವರ ಭಟ್ಟರ ಸಾರಥ್ಯದಲ್ಲಿ ಚೆನ್ನಾಗಿ ಮೂಡಿ ಬರುತ್ತಿದೆ. ಸಿನಿಮಾ, ಕ್ರೀಡೆ, ಆರೋಗ್ಯ, ಶಿಕ್ಷಣ ರಾಜಕೀಯ, ಹಾಗೂ ಧರ್ಮಜಾಗೃತಿ ಅಂಕಣದ ಜತೆಗೆ ರಾಷ್ಟ್ರ ,ರಾಜ್ಯ,ಮತ್ತು ಪ್ರಾದೇಶಿಕ ಸ್ಥಳೀಯ ಸುದ್ದಿ ಸಮಾಚಾರಗಳ ಹೂರಣವನ್ನು ಹೊತ್ತು ಓದುಗರ ಕೈಸೇರುವ ವಿಶ್ವವಾಣಿಯು ಭವಿಷ್ಯದ ಪತ್ರಿಕೋದ್ಯಮದಲ್ಲಿ ವಿನೂತನ ವಾಣಿಯಾಗಿ ಹೊರಹೊಮ್ಮಿ ಶತಮಾನೋತ್ಸವ ಸಂಭ್ರಮ ಆಚರಿಸಿಕೊಳ್ಳುವಂತಾಗಲಿ.

ಪತ್ರಿಕೆಯ ಶ್ರೇಯೋಭಿವೃದ್ಧಿಗಾಗಿ ಸಂಪಾದಕರ ಜತೆ ಸದಾ ಹೆಗಲು ಕೊಟ್ಟು ಹತ್ತರ ಸಂಭ್ರಮಕ್ಕೆ ಸಾಕ್ಷಿಯಾಗಿರುವ ವಿಶ್ವವಾಣಿ ಕುಟುಂಬದ ಸರ್ವ ಸದಸ್ಯರಿಗೆ ಅಭಿನಂದನೆಗಳು.

ಕಡಿಮೆ ಅವಧಿಯಲ್ಲಿ ಜನಮನ ಗೆದ್ದ ವಿಶ್ವವಾಣಿ

ಪ.ಪೂ. ಶಿವಬಸವ ಸ್ವಾಮೀಜಿ, ಸುಕ್ಷೇತ್ರ ಗಚ್ಚಿನಮಠ ಅಥಣಿ.

ಪತ್ರಿಕೋದ್ಯಮದಲ್ಲಿ ಹೊಸತನದ ಜನಕ ಎಂದು ಹೆಸರಾಗಿರುವ ವಿಶ್ವೇಶ್ವರ ಭಟ್ಟರ ಸಾರಥ್ಯದಲ್ಲಿ ಪ್ರಕಟವಾಗುತ್ತಿರುವ ವಿಶ್ವವಾಣಿ ಕನ್ನಡ ದಿನಪತ್ರಿಕೆ ವಸ್ತುನಿಷ್ಠ ವರದಿಗಳ ಜತೆಗೆ ವಿಶೇಷ ಅಂಕಣಗಳನ್ನು ಪ್ರಕಟಿಸುತ್ತಿದೆ. ಅನೇಕ ಹಿರಿಯ ಪತ್ರಕರ್ತರು ಪ್ರಚಲಿತ ವಿದ್ಯಮಾನಗಳ ಬಗ್ಗೆ ಸುದೀರ್ಘ ಅಂಕಣಗಳನ್ನು ಪ್ರಕಟಿಸುತ್ತಿರುವುದು ಈ ಪತ್ರಿಕೆಯ ವೈಶಿಷ್ಟವಾಗಿದೆ. ಅತ್ಯಂತ ಕಡಿಮೆ ಅವಧಿಯಲ್ಲಿ ನಾಡಿನ ಮನೆ ಮನ ಗೆದ್ದಿರುವ ವಿಶ್ವವಾಣಿ ಪತ್ರಿಕೆಯು ಈಗ ದಶಮಾನೋತ್ಸವ ಸಂಭ್ರಮದಲ್ಲಿರುವುದು ಸಂತಸದ ಸಂಗತಿ. ಪತ್ರಿಕೆಯು ಇನ್ನಷ್ಟು ಹೊಸತನವನ್ನು ನೀಡುವ ಮೂಲಕ ರಜತ ಮಹೋತ್ಸವ, ಸುವರ್ಣ ಮಹೋತ್ಸವ ಮತ್ತು ಶತಮಾನೋತ್ಸವ ಆಚರಿಸುವಂತಾಗಲಿ. ಅಥಣಿಯ ಶ್ರೀ ಮುರುಗೇಂದ್ರ ಶಿವಯೋಗಿಗಳು ವಿಶ್ವೇಶ್ವರ ಭಟ್ ಹಾಗೂ ಅವರ ತಂಡದವರಿಗೆ ಆಯುಷ್ಯ, ಆರೋಗ್ಯ ಕರುಣಿಸಲಿ.

ವಿಶ್ವವಾಣಿ ಪತ್ರಿಕೆ ನನ್ನ ಜೀವನದ ಭಾಗವಾಗಿದೆ

ಡಾ. ಕೆ ಎಚ್ ಗೋವಿಂದ
ರಾಜ್ ಐಎಎಸ್

ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಮಹಾರಾಷ್ಟ್ರ, ಮುಂಬೈ

ವಿಶ್ವವಾಣಿಗೆ ದಶಕದ ಸಂಭ್ರಮ. ವಿಶ್ವೇಶ್ವರ ಭಟ್ ಅವರು ವಿಶ್ವವಾಣಿಯ ಸಾರಥ್ಯ ವಹಿಸಿ ಒಂದು ದಶಕವೇ ಕಳೆದಿದೆ. ಅವರ ವಿಜಯ ಕರ್ನಾಟಕ, ಕನ್ನಡ ಪ್ರಭದ ದಿನಗಳಿಂದಲೂ ಆಯಾ ಪತ್ರಿಕೆ ಓದುತ್ತಾ ಬಂದ ನಾನು ಭಟ್ಟರು ಸಂಪಾದಕರಾದಾಗಿನಿಂದ ವಿಶ್ವವಾಣಿಯ ಓದುಗ.

ನಾನು ಇರುವುದು ಮುಂಬೈಯಲ್ಲಿ. ವಿಶ್ವವಾಣಿಯು ನನ್ನ ನೆಚ್ಚಿನ ಬೆಂಗಳೂರು ಹಾಗೂ ಕರ್ನಾಟಕದ ಆಗುಹೋಗುಗಳ ಮಾಹಿತಿ ನೀಡುವುದಷ್ಟೇ ಅಲ್ಲದೆ ಕನ್ನಡ ಭಾಷೆಯ ಬಗ್ಗೆ ಅಭಿಮಾನ ಮೂಡಿಸುವಂತೆ ನಾನಾ ವಿಷಯಗಳ ಬಗ್ಗೆ ಲೇಖನಗಳು, ಅಂಕಣಗಳನ್ನು ಹೊತ್ತು ತರುತ್ತದೆ. ಭಟ್ಟರ ಲೇಖನಗಳಂತೂ ಒಂದೊಂದೂ ಮಾಹಿತಿಯ ಭಂಡಾರ. ಜೋಶಿಯವರ ತಿಳಿರು ತೋರಣ ಭಾನುವಾರದ ಔತಣವೇ ಸರಿ. ದರ್ಡಾ, ಎಂ.ಜೆ ಅಕ್ಬರ್ ಮೊದಲಾದವರ ಅನುವಾದಿತ ಅಂಕಣಗಳೂ ಉಪಯುಕ್ತ. ದಿನವೂ ವಿಶ್ವವಾಣಿ ಇ-ಪೇಪರ್ ಓದದೇ ನನಗೆ ಬೆಳಗಾಗುವುದಿಲ್ಲ. ಅಷ್ಟರಮಟ್ಟಿಗೆ ವಿಶ್ವವಾಣಿ ನನ್ನ ಜೀವನದ ಭಾಗವಾಗಿದೆ. ಈ ಪಯಣ ನಿರಂತರವಾಗಿ ಬೆಳೆಯುತ್ತಾ ಸಾಗಲಿ. ವಿಶ್ವೇಶ್ವರ ಭಟ್ ಅವರಿಗೆ ಅನಂತ ಅಭಿನಂದನೆಗಳು.

ವಿಶ್ವವಾಣಿ ಕ್ಲಬ್ ಹೌಸ್ 29.01.2025 ಕಾರ್ನರ್
ಸಂಜೆ: 06.55 ರಿಂದ 08.05 ರವರೆಗೆ

ಬುಧವಾರದ ಅತಿಥಿ
ಶ್ರೀ ಸತ್ಯೇಶ್ ಬೆಳ್ಳೂರು
ವಿಷಯ
ಮ್ಯಾನೇಜ್ಮೆಂಟ್ ಕಥೆಗಳು
vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಚಿಕ್ಕಬಳ್ಳಾಪುರ**

ಸಮಸ್ಯೆಯೇನು..?

- ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ರಸ್ತೆಯ ಬಳಿ ಇರುವ ಸರ್.ಎಂ.ವಿ ಶಾಲೆಯಲ್ಲಿ ಶೌಚಾಲಯ ಸಮಸ್ಯೆ ಬಗ್ಗೆ.
- **ಪರಿಹಾರ:** ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ರಸ್ತೆಯ ಬಳಿ ಇರುವ ಸರ್.ಎಂ.ವಿ ಶಾಲೆಗೆ ಬಿಇಒ ಅಧಿಕಾರಿ ಭೇಟಿ ನೀಡಿದ್ದು, ಇಲ್ಲಿರುವ ವಿದ್ಯಾರ್ಥಿಗಳು, ಶಿಕ್ಷಕರು ಸುಸಜ್ಜಿತವಾದ ಶೌಚಾಲಯಗಳು ಉಪಯೋಗಿಸುತ್ತಿದ್ದಾರೆ. ದೂರಿನಲ್ಲಿ ಉಲ್ಲೇಖಿಸಿರುವ ಶೌಚಾಲಯಗಳು ವಿದ್ಯಾರ್ಥಿಗಳು ಉಪಯೋಗಿಸುತ್ತಿಲ್ಲ.

ಬಂಡೆ ಸ್ಫೋಟ: ಕಾರ್ಮಿಕ ಸಾವು

ತುಮಕೂರು: ಸೋಲಾರ್ ಪಾರ್ಕ್ ನಿರ್ಮಾಣ ವೇಳೆ ಬಂಡೆ ಸ್ಫೋಟಗೊಂಡು ಓರ್ವ ಕಾರ್ಮಿಕ ಸಾವನ್ನಪ್ಪಿದ್ದು, ಓರ್ವನ ಸ್ಥಿತಿ ಗಂಭೀರವಾಗಿದ್ದು, ಈ ಘಟನೆ ಜಿಲ್ಲೆಯ ಪಾವಗಡ ತಾಲೂಕಿನ ತಿರುಮಣಿ ಬಳಿ ನಡೆದಿದೆ. ಮೃತ ಕಾರ್ಮಿಕನನ್ನು ರಾಯಚೂರು ಮೂಲದ ಬಸವರಾಜ್ (46) ಹಾಗೂ ಗಾಯಳು ಕಾರ್ಮಿಕನನ್ನು ಶಿವಯ್ಯ ಎಂದು ಗುರುತಿಸಲಾಗಿದೆ. ತಿರುಮಣಿ ಬಳಿ ಸೋಲಾರ್ ಪಾರ್ಕ್ ನಿರ್ಮಾಣ ಮಾಡಲು ಸ್ಥಳದಲ್ಲಿದ್ದ ಬಂಡೆ ಸ್ಫೋಟಿಸುವಾಗ ಈ ದುರಂತ ಸಂಭವಿಸಿದೆ. ಓರ್ವ ಕಾರ್ಮಿಕ ಸಾವನ್ನಪ್ಪಿದ್ದು, ಇನ್ನೋರ್ವ ಕಾರ್ಮಿಕ ಗಂಭೀರವಾಗಿ ಗಾಯಗೊಂಡಿದ್ದಾರೆ. ಬಂಡೆಯನ್ನು ಸ್ಫೋಟಿಗೊಳಿಸಲು ಅಕ್ರಮವಾಗಿ ಸ್ಫೋಟಕ ವಸ್ತುಗಳನ್ನು ಬಳಸಿರುವ ಶಂಕೆ ವ್ಯಕ್ತವಾಗಿದ್ದು, ತಿರುಮಣಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಅಟ್ರಾಸಿಟಿ ಪ್ರಕರಣದಲ್ಲಿ ಜಾಮೀನು ಸಿಕ್ಕರೆ ಅಧಿಕಾರಿಗಳ ವೈಫಲ್ಯ | ದಲಿತರ ಮೇಲೆ ದೌರ್ಜನ್ಯ; ಶಿಕ್ಷೆಯ ಪ್ರಮಾಣ ಹೆಚ್ಚಿಸಿ : ಸಿಎಂ

ದಲಿತರ ಮೇಲಿನ ದೌರ್ಜನ್ಯಕ್ಕೆ ಅಧಿಕಾರಿಗಳೇ ಹೊಣೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದಲಿತರ ಮೇಲೆ ಜಾತಿ ದೌರ್ಜನ್ಯ ಪ್ರಕರಣದಲ್ಲಿ ಯಾರಾದರೂ ನಿರ್ಲಕ್ಷ್ಯ ವಹಿಸಿದರೆ ಅವರ ವಿರುದ್ಧ ಕಠಿಣ ಕ್ರಮ ಅನಿವಾರ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ರಾಜ್ಯ ಮಟ್ಟದ ಅನುಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಮೇಲ್ವಿಚಾರಣಾ ಸಮಿತಿ ಸಭೆಯಲ್ಲಿ ಅಧಿಕಾರಿಗಳಿಂದ ಮಾಹಿತಿ ಪಡೆದ ಸಿದ್ದರಾಮಯ್ಯ ಅವರು, ಕೆಲ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ ಎನ್ನುವ ಆರೋಪಕ್ಕೆ ಅಸಮಾಧಾನ ವ್ಯಕ್ತಪಡಿಸಿದರು.

ಜಾತಿ, ದೌರ್ಜನ್ಯ ಪ್ರಕರಣದಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ, ಉಡಾಫೆ ಧೋರಣೆಗಳನ್ನು ಸಹಿಸುವುದಿಲ್ಲ. ದೇವದಾಸಿ ಪದ್ಧತಿ ನಿಷೇಧವಾಗಿದೆ. ಎಲ್ಲಿಯಾದರೂ ದೇವದಾಸಿ ಪದ್ಧತಿಯಿರುವುದು ಗಮನಕ್ಕೆ ಬಂದರೆ, ಸಂಬಂಧಪಟ್ಟ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಜಿಲ್ಲಾಧಿಕಾರಿ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಜಾತಿ, ದೌರ್ಜನ್ಯ ಪ್ರಕರಣಗಳಲ್ಲಿ ಆರೋಪಿಗಳಿಗೆ ಸುಲಭವಾಗಿ ಜಾಮೀನು ಸಿಕ್ಕರೆ ಅದು ನಿಮ್ಮ ದೌರ್ಬಲ್ಯವನ್ನು ತೋರಿಸುತ್ತದೆ. ಜಾತಿ- ದೌರ್ಜನ್ಯ ಪ್ರಕರಣಗಳಲ್ಲಿ ಆರೋಪಿಗಳಿಗೆ ಸುಲಭವಾಗಿ ಜಾಮೀನು ಸಿಕ್ಕರೆ ಜಾತಿ ದೌರ್ಜನ್ಯ ತಡೆಗಟ್ಟುವುದು ಸಾಧ್ಯವಿಲ್ಲ. ಹಾಗಾಗಿ ಈ ಪ್ರಕರಣಗಳಲ್ಲಿ ಆರೋಪಿಗಳಿಗೆ ಜಾಮೀನು ಸಿಕ್ಕರೂ ಮೇಲ್ಮನವಿಗೆ ಹೋಗಿ ಜಾಮೀನು ರದ್ದುಪಡಿಸಿ ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕೆಲವೆಡೆ ಜಾತಿ ದೌರ್ಜನ್ಯ ದೂರು ಬಂದಾಗ ಪೊಲೀಸರೇ ಪ್ರತಿದೂರನ್ನು ಪಡೆದು ಪ್ರಕರಣ ದುರ್ಬಲಗೊಳಿಸಿರುವ ಬಗ್ಗೆ ದೂರುಗಳಿವೆ. ಈ ರೀತಿಯ ನಡೆಯನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಈ ರೀತಿಯ ಪ್ರಕರಣಗಳು ನಮ್ಮ ಗಮನಕ್ಕೆ ಬಂದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ರಾಜ್ಯ ಮಟ್ಟದ ಅನುಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಮೇಲ್ವಿಚಾರಣಾ ಸಮಿತಿ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಮಾತನಾಡಿದರು.

ದೇವದಾಸಿಯರಿಗೆ ಪುನರ್‌ವಸತಿ ಕಲ್ಪಿಸಿ: ದೇವದಾಸಿ ಪದ್ಧತಿ ನಿಷೇಧವಾಗಿದೆ. ಇದು ಎಲ್ಲಿಯಾದರೂ ಕಂಡು ಬಂದರೆ ಸಂಬಂಧಪಟ್ಟ ಎಸ್‌ಪಿ ಮತ್ತು ಡಿಸಿ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ ಅವರು, ದೇವದಾಸಿ ಮಹಿಳೆಯರಿಗೆ ಪುರ್ನ ವಸತಿ ಕಲ್ಪಿಸಬೇಕು.

ವೈಜ್ಞಾನಿಕವಾಗಿ ದೇವದಾಸಿ ಮಹಿಳೆಯರ ಸ್ಥಿತಿಗತಿ ಸಮೀಕ್ಷೆ ನಡೆಸಬೇಕು ಎಂಬ ಬೇಡಿಕೆ ಇತ್ತು. ರಾಯಚೂರಿನಲ್ಲಿ ಮಹಿಳೆಯರ ಅಹೋರಾತ್ರಿ ಧರಣಿಯೂ ನಡೆದಿದೆ. ದೇವದಾಸಿಯರ ಸಮಸ್ಯೆ ಮತ್ತು ಪುನರ್ ವಸತಿ ಬಗ್ಗೆ ಸಮಗ್ರ ವರದಿ ಸಿದ್ಧಪಡಿಸುವಂತೆ ಮುಖ್ಯ ಕಾರ್ಯದರ್ಶಿಗಳಿಗೆ ಸೂಚಿಸಿದರು. ಅರಣ್ಯ ಹಕ್ಕು ಕಾಯ್ದೆಯಡಿ ಹಕ್ಕು ಪತ್ರ ಸಮರ್ಪಕವಾಗಿ ನೀಡಬೇಕು. ಯಾವುದೇ ಕಾರಣಕ್ಕೂ ಅರಣ್ಯ ವಾಸಿಗಳನ್ನು ಕಾಡಿನಿಂದ ಹೊರಗೆ ಹಾಕಬಾರದು ಎಂದು ಸೂಚಿಸಿದರು.

> **ಜಾತಿ ದೌರ್ಜನ್ಯ ಪ್ರಕರಣಗಳ ಶಿಕ್ಷೆಯ ಪ್ರಮಾಣ 2020ರಲ್ಲಿ ಶೇ. 10 ರಷ್ಟಿದ್ದು, ಪ್ರಸ್ತುತ ಶೇ.7ಕ್ಕೆ ಇಳಿದಿದೆ. ಶಿಕ್ಷೆಯ ಪ್ರಮಾಣವನ್ನು ಶೇ. 10ಕ್ಕೂ ಹೆಚ್ಚಿಸುವಂತೆ ಸೂಚಿಸಲಾಗಿದ್ದು, ಈ ಬಗ್ಗೆ ಸರಕಾರಿ ಪ್ರಾಸಿಕ್ಯೂಟರ್‌ಗಳು ಹಾಗೂ ಪೊಲೀಸ್ ಇಲಾಖೆಯವರು ಪರಿಶೀಲನಾ ಸಭೆ ನಡೆಸಬೇಕು. ಜಾತಿ ದೌರ್ಜನ್ಯ ಪ್ರಕರಣಗಳ ಶಿಕ್ಷೆಯ ಪ್ರಮಾಣ ಹೆಚ್ಚಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಮೂರು ತಿಂಗಳಿಗೊಮ್ಮೆ ತಪ್ಪದೇ ಪ್ರಗತಿ ಪರಿಶೀಲನಾ ಸಭೆ ನಡೆಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.**
>
> **– ಸಿದ್ದರಾಮಯ್ಯ,** ಮುಖ್ಯಮಂತ್ರಿ

ಬ್ಯಾಕ್‌ಲಾಗ್, ಬಡ್ತಿಯಲ್ಲಿ ಅನ್ಯಾಯವಾಗದಿರಲಿ

ಇಲಾಖಾವಾರು ಮುಂಬಡ್ತಿಯಲ್ಲಿ ಆಗಿರುವ ಅನ್ಯಾಯಗಳ ಬಗ್ಗೆ ಪರಿಶೀಲಿಸಲು ಪ್ರತ್ಯೇಕ ಪರಾಮರ್ಶೆ ಸಭೆ ಕರೆಯುವಂತೆಯೂ ಸಭೆಯಲ್ಲಿ ಹಾಜರಿದ್ದ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸೂಚಿಸಿದ ಮುಖ್ಯಮಂತ್ರಿಗಳು, ಎಲ್ಲ ಇಲಾಖೆಗಳು ಬಡ್ತಿಯಲ್ಲಿ ಮೀಸಲಾತಿಯನ್ನು ಚಾಚೂ ತಪ್ಪದೆ ಪಾಲಿಸಬೇಕು ಎಂದರು. ಪರಿಶಿಷ್ಟ, ಜಾತಿ ಸಮುದಾಯದವರಿಗೆ ಅವಕಾಶ ತಪ್ಪಿಸಲು ಅಧಿಕಾರಿಗಳು ಕುಟಿಲ ನೀತಿ ಅನುಸರಿಸಿದರೆ ಅದನ್ನು ಸಹಿಸಲ್ಲ ಎಂದರು. ಪ್ರತಿ ಆರು ತಿಂಗಳಿಗೊಮೆ ಉಸ್ತುವಾರಿ ಸಮಿತಿ ಸಭೆಯನ್ನು ಕಡ್ಡಾಯವಾಗಿ ಕರೆಯುತ್ತೇವೆ. ಈ ಸಭೆಗಳಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಪ್ರಕರಣಗಳ ಬಗ್ಗೆ ಚರ್ಚೆ ನಡೆಸಿ ಅವರ ವಿರುದ್ಧ ಸರಕಾರ ಕಠಿಣ ಕ್ರಮ ಕೈಗೊಳ್ಳುತ್ತದೆ ಎಂದು ಎಚ್ಚರಿಸಿದರು. ಪೊಲೀಸ್ ಇಲಾಖೆಯಲ್ಲಿ ಹಿರಿತನದ ಪಟ್ಟಿ ಉಲ್ಲಂಘನೆಯಾಗಿ ಪರಿಶಿಷ್ಟ ಜಾತಿ ಸಮುದಾಯದವರಿಗೆ ಅನ್ಯಾಯವಾಗುತ್ತಿದೆ ಎಂಬ ದೂರು ಬಂದಿದೆ. ನಾವು ಇದನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದರೂ ಸಮಸ್ಯೆ ಬಗೆಹರಿಸುತ್ತಿಲ್ಲ. ಎಡಿಜಿಪಿ ಅವರು ಸರಿಯಾಗಿ ನಡೆದುಕೊಳ್ಳುತ್ತಿಲ್ಲ ಎಂದು ಸಂಸದ ತುಕಾರಾಂ ಮತ್ತು ಶಾಸಕ ನರೇಂದ್ರಸ್ವಾಮಿ ಅವರು ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದರು. ಈ ವಿಚಾರವನ್ನು ಗಂಭಿರವಾಗಿ ತೆಗೆದುಕೊಂಡ ಮುಖ್ಯಮಂತ್ರಿಗಳು, ಈ ರೀತಿ ಪೊಲೀಸ್ ಅಧಿಕಾರಿಗಳು ನಡೆದುಕೊಳ್ಳುವುದು ಸರಿಯಲ್ಲ. ಈ ವಿಷಯವನ್ನು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ ಎಂದು ಮುಖ್ಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಿದರು. ಸಭೆಯಲ್ಲಿ ಹಾಜರಿದ್ದ ವಿಧಾನಪರಿಷತ್ ಸದಸ್ಯ ಸುಧಾಮದಾಸ್ ರವರು, ಬ್ಯಾಕ್‌ಲಾಗ್ ಮತ್ತು ಬಡ್ತಿ ವಿಚಾರದಲ್ಲಿ ಆಗುತ್ತಿರುವ ಅನ್ಯಾಯಗಳನ್ನು ವಿಧಾನಮಂಡಲದ ಉಪಸಮಿತಿ ಪತ್ತೆಹಚ್ಚಿ ಗಮನಕ್ಕೆ ತಂದರೂ ಅಧಿಕಾರಿಗಳು ಸಮಸ್ಯೆ ಬಗೆಹರಿಸದೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ಹಾಗಾದಾರೆ ಉಪಸಮಿತಿ ಕೊಡುವ ವರದಿಗಳಿಗೆ ಬೆಲೆ ಇಲ್ಲವೆ ಎಂದು ಪ್ರಶ್ನಿಸಿ, ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದರು. ಆಗ ಮುಖ್ಯಮಂತ್ರಿಗಳು ಈ ರೀತಿ ಮಾಡುವುದು ಸರಿಯಲ್ಲ. ಯಾವುದೇ ಅಧಿಕಾರಿ ನಿರ್ಲಕ್ಷ್ಯ ವಹಿಸಿದರೆ ಕ್ರಮ ಕೈಗೊಳ್ಳುತ್ತೇವೆ ಎಂದರು.

ಸಭೆಯಲ್ಲಿ ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ, ಸಹಕಾರ ಸಚಿವ ಕೆ. ಎನ್. ರಾಜಣ್ಣ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷ ನರೇಂದ್ರಸ್ವಾಮಿ, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಪೊನ್ನಣ್ಣ, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೇರಿದಂತೆ ವಿವಿಧ ಇಲಾಖೆಯ ಮುಖ್ಯಸ್ಥರು, ಪರಿಶಿಷ್ಟ ಜಾತಿ ವರ್ಗದ ಶಾಸಕರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಹೆಣ್ಣಿನ ವಿಚಾರಕ್ಕೆ ಕಲಹ | ಅರಕೇರಿ ಗ್ರಾಮದ ಮನಾವರ ದೊಡ್ಡಿ ಬಳಿ ಘಟನೆ

ಹಾಡಹಗಲೇ ಗುಂಡಿನ ದಾಳಿ: ಹತ್ಯೆ

ವಿಜಯಪುರ: ಜಿಲ್ಲೆಯಲ್ಲಿ ಹಾಡಹಗಲೇ ಗುಂಡಿನ ದಾಳಿ ನಡೆದಿದೆ. ವಿಜಯಪುರ ಜಿಲ್ಲೆ ತಿಕೋಟಾ ತಾಲೂಕಿನ ಅರಕೇರಿ ಗ್ರಾಮದ ಮನಾವರ ದೊಡ್ಡಿ ಬಳಿ ಘಟನೆ ನಡೆದಿದ್ದು, ಕಾರಿನಲ್ಲಿ ಬರುತ್ತಿದ್ದ ತಿಕೋಟಾ ತಾಲೂಕಿನ ಅರಕೇರಿ ತಾಂಡಾ 1 ನಿವಾಸಿ ಸತೀಶ್ ರಾಠೋಡ್ ಹತ್ಯೆಯಾಗಿದ್ದಾನೆ. ಅದೇ ತಾಂಡಾದ ರಮೇಶ ಚೌವ್ಹಾಣ್ ಹಾಗೂ ಆತನ ಸಹಚರರು ಹತ್ಯೆ ಮಾಡಿದ್ದಾರೆ ಎನ್ನುವ ಆರೋಪ ಕೇಳಿ ಬಂದಿದೆ.

ಹತ್ಯೆ ನಡೆದ ಸ್ಥಳದಲ್ಲಿ ಸತೀಶ್ ಮೃತದೇಹದ ಮೇಲೆ ಬಂದೂಕು ಪತ್ತೆಯಾಗಿದೆ. ಜೊತೆಗೆ ಮೃತದೇಹದ ಸಮೀಪವೇ ಒಬ್ಬನ ಕಿವಿಯ ತುಂಡು ಪತ್ತೆಯಾಗಿದ್ದು, ಗಲಾಟೆ ವೇಳೆ ಕಿವಿ ಕತ್ತರಿಸಿರಬೇಕು ಎನ್ನುವ ಅನುಮಾನ ಮೂಡಿದೆ. ಹೆಣ್ಣಿನ ವಿಚಾರದಲ್ಲಿ ನಡೆಯುತ್ತಿದ್ದ ಕಲಹ ಕೊಲೆಯಲ್ಲಿ ಅಂತ್ಯವಾಗಿದೆ. ಘಟನಾ ಸ್ಥಳದಲ್ಲಿ ಕುಟುಂಬಸ್ಥರ ಆಕಂದ್ರನ ಮುಗಿಲು ಮುಟ್ಟಿದೆ. ಅರಕೇರಿ ದೇವಸ್ಥಾನಕ್ಕೆ ಹೋಗಿ ಕಾರಿನಲ್ಲಿ ವಾಪಸ್ ಬರುವ ವೇಳೆ ಗುಂಡಿನ ದಾಳಿಯಾಗಿದೆ.

> ### ಪೊಲೀಸರಿಂದ ತನಿಖೆ ಚುರುಕು
> **ಕಳೆದ ವರ್ಷ ಜ.28 ರಂದು ರಮೇಶ್ ಚೌವ್ಹಾಣ್ ಪುತ್ರಿ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಳು. ಈ ಘಟನೆಗೆ ಸತೀಶ್ ರಾಠೋಡ್ ಕಾರಣ ಎಂದು ರಮೇಶ್ ಚೌವ್ಹಾಣ್ ಗರಂ ಆಗಿದ್ದ. ಹೀಗಾಗಿ ಮಗಳು ಸತ್ತು ಒಂದು ವರ್ಷವಾದ ದಿನವೇ ಸತೀಶ್‌ನನ್ನು ಗುಂಡಿನ ದಾಳಿ ಮಾಡಿ ಹತ್ಯೆ ಮಾಡಲಾಗಿದೆ ಎನ್ನಲಾಗಿದೆ. ಘಟನಾ ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದು, ತನಿಖೆ ಚುರುಕುಗೊಳಿಸಿದ್ದಾರೆ.**

ಕೊಲೆಯಾಗಿರುವ ಸತೀಶ ರಾಠೋಡ್ ವೃತ್ತಿಯಲ್ಲಿ ಕಾರು ಚಾಲಕನಾಗಿದ್ದ. ಕಳೆದ ಕೆಲ ವರ್ಷಗಳ ಹಿಂದೆ ಅರಕೇರಿ ತಾಂಡಾ 1 ನಿವಾಸಿ ರಮೇಶ ಚೌವ್ಹಾಣ್ ಎಂಬುವರ ಪುತ್ರಿಯನ್ನು ಇಷ್ಟಪಟ್ಟಿದ್ದ. ಆದರೆ ಸತೀಶ್‌ಗೆ ಹೆಣ್ಣು ಕೊಡಲು ರಮೇಶ ಚೌವ್ಹಾಣ್ ನಿರಾಕರಿಸಿದ್ದ ಕಾರಣ ಎರಡು ಕುಟುಂಬಗಳ ನಡುವೆ ಗಲಾಟೆ ನಡೆದಿತ್ತು.

ಸಚಿವ ಸುರೇಶ್,ಸಿದ್ದರಾಮಯ್ಯ ಮತ್ತೊಮ್ಮೆ ಸ್ಪಷ್ಟನೆ | ಇ.ಡಿ. ಪ್ರಕರಣ ರಾಜಕೀಯ ಪ್ರೇರಿತ: ಸಿಎಂ

ಮುಡಾ ಹಗರಣಕ್ಕೂ ನಮಗೂ ಸಂಬಂಧವಿಲ್ಲ

ಬೆಂಗಳೂರು: ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ ಮುಡಾ ಹಗರಣಕ್ಕೂ ನಮಗೂ ಸಂಬಂಧವಿಲ್ಲವೆಂದಿರುವ ಸಚಿವರು, ರಾಜಕೀಯ ಕಾರಣಕ್ಕೆ ಜಾರಿ ನಿರ್ದೇಶನಾಲಯ ನೋಟಿಸ್ ನೀಡಿದೆ ಎನ್ನುವ ಆರೋಪ ಮುಂದುವರಿದಿದೆ.

ವಿಚಾರಣೆಗೆ ಹಾಜರಾಗುವಂತೆ ಇ.ಡಿ. ನೀಡಿರುವ ನೋಟಿಸ್‌ಗೆ ತಡೆಯಾಜ್ಞೆ ಸಿಕ್ಕಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಇಡಿ ಅಧಿಕಾರಿಗಳು ರಾಜಕೀಯ ಕಾರಣಕ್ಕೆ ಈ ರೀತಿ ನೋಟಿಸ್ ನೀಡಿದ್ದಾರೆ. ಈ ರೀತಿಯ ಒತ್ತಡಗಳಿಗೆ ತಲೆಕೆಡಿಸಿಕೊಳ್ಳುವುದಿಲ್ಲ, ನ್ಯಾಯಾಲಯದ ಮೇಲೆ ವಿಶ್ವಾಸವಿದೆ ಎನ್ನುವ ಮಾತುಗಳನ್ನು ಆಡಿದ್ದಾರೆ.

ವಿಧಾನಸೌಧದಲ್ಲಿ ಮಂಗಳವಾರ ಮಾತನಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಇ.ಡಿ ನೋಟಿಸ್ ಜಾರಿ ಮಾಡಿದ್ದು, ನ್ಯಾಯಾಲಯ ತಡೆಯಾಜ್ಞೆ ನೀಡಿದೆ. ತನಿಖೆ ನಡೆಯುತ್ತಿದ್ದು, ಸಿಬಿಐಗೆ ಪ್ರಕರಣವನ್ನು ವಹಿಸುವ ಬಗ್ಗೆ ಚರ್ಚೆ ನಡೆಯುತ್ತಿದ್ದು ವಾದ ನಡೆಯುವ ಹಂತದಲ್ಲಿದೆ. ಈ ಹಂತದಲ್ಲಿ ಆತುರ ಮಾಡುವುದು ಸರಿಯಲ್ಲ ಎಂದು ನ್ಯಾಯಮೂರ್ತಿಗಳು ಹೇಳಿದ್ದಾರೆ. ರಾಜಕೀಯ ಕಾರಣಕ್ಕೆ ಮುಡಾ ನೋಟಿಸ್ ನೀಡಲಾಗಿದೆ ಎಂದು ಆರೋಪಿಸಿದರು.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಮಾತನಾಡಿ, ಮುಡಾ ಹಗರಣದಲ್ಲಿ ನನ್ನ ಹಾಗೂ ಮುಖ್ಯಮಂತ್ರಿಗಳ ಪತ್ನಿ ಪಾತ್ರ ಸೊನ್ನೆ. ಈ ಹಗರಣದಲ್ಲಿ ನಮ್ಮ ಪಾತ್ರ ಇಲ್ಲ ಎಂಬುದನ್ನು ಒಪ್ಪಿಕೊಂಡು ನ್ಯಾಯಾಲಯ ಇಡಿ ನೋಟಿಸ್‌ಗೆ ತಡೆ ನೀಡಿದೆ. ವಿಚಾರಣೆ ಈಗ ಮುಂದಕ್ಕೆ ಹೋಗಿದೆ. ಫೆ. 10ರ ನಂತರ ಏನಾಗುತ್ತದೆ ನೋಡೋಣ ಎಂದರು.

> **ಪ್ರಕರಣವನ್ನು ಸಿಬಿಐಗೆ ವಹಿಸಬಹುದೆಂಬ ಆತಂಕ ನನಗೇಕೆ ಇರಬೇಕು? ನಮಗೆ ನ್ಯಾಯ ಸಿಗುತ್ತದೆ ಎಂಬ ಭರವಸೆ ನಮಗಿದೆ. ನಮ್ಮ ತಪ್ಪಿಲ್ಲದಿರುವುದರಿಂದ ನ್ಯಾಯಾಲಯದಲ್ಲಿ ನ್ಯಾಯ ಸಿಗುವ ವಿಶ್ವಾಸವಿದೆ.**
>
> **-ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಇಡಿಯವರು ನನಗೆ ಇದೇ ಮೊದಲ ಬಾರಿಗೆ ನೋಟಿಸ್ ಕೊಟ್ಟಿದ್ದಾರೆ. ಸಿಎಂ ಪತ್ನಿಗೆ ಎರಡನೇ ನೋಟಿಸ್ ಕೊಟ್ಟ ಬಗ್ಗೆ ನನಗೆ ಮಾಹಿತಿಯಿಲ್ಲ. ಇನ್ನು ನನಗೇಕೆ ನೋಟಿಸ್ ನೀಡಲಾಗಿದೆ ಎನ್ನುವುದನ್ನು ಇಡಿ ಅಧಿಕಾರಿಗಳನ್ನೇ ಕೇಳಿ.**
>
> **– ಬೈರತಿ ಸುರೇಶ್,** ನಗರಾಭಿವೃದ್ಧಿ ಸಚಿವ

ವಿಶ್ವವಾಣಿ

ಸಂಪಾದಕೀಯ

ನಾಲಿಗೆ ತೊದಲಿದರೂ ಎಡವಬಾರದು!

ಪ್ರತಿಯೊಬ್ಬರಿಗೂ 'ವೈಯಕ್ತಿಕ' ಮತ್ತು 'ಸಾರ್ವತ್ರಿಕ' ನೆಲೆಯ ಎರಡು ಧರ್ಮಗಳು ಇರುತ್ತವೆ. ವೈಯಕ್ತಿಕ ನೆಲೆಯಲ್ಲಿ ಅಥವಾ ಮನೆಯೊಳಗೆ ಇರುವಾಗಿನ ನಮ್ಮ ಭಾಷೆ, ಭಾವ, ಶ್ರದ್ಧಾಭಕ್ತಿ ಮತ್ತು ನಂಬಿಕೆಗಳೇನಿವೆ ಅವು ನಮ್ಮವು; ಅವನ್ನು ಹೊರಗಿನವರ ಮೇಲೂ ಹೇರಬೇಕು ಅಂತೇನಿಲ್ಲ. ಅದೇ ರೀತಿಯಲ್ಲಿ, ಸಾರ್ವತ್ರಿಕ ನೆಲೆಯಲ್ಲಿ ಮಾತಿಗೆ ನಿಂತಾಗ, 'ವೈಯಕ್ತಿಕ'ವಾದುದನ್ನೆಲ್ಲ ಗಂಟುಮೂಟೆ ಕಟ್ಟಿ, 'ಸಮಷ್ಟಿಪ್ರಜ್ಞೆ' ಇಟ್ಟುಕೊಂಡೇ ಮಾತನಾಡಬೇಕಾಗುತ್ತದೆ. ಅದು ಅಂಥ ಮಾತನಾಡುವವರಿಗೂ ಕ್ಷೇಮದಾಯಕ, ಅದನ್ನು ಕೇಳುವವರಿಗೂ ಸುಖದಾಯಕ. ಆದರೆ, ಇಂಥ ವೇಳೆ ತುಟಿಮೀರಿದಾಗ ಅಥವಾ ಸಮಷ್ಟಿಪ್ರಜ್ಞೆಗೆ ಧಕ್ಕೆಯುಂಟು ಮಾಡಿದಾಗ ಅದು ಸಮಾಜದಲ್ಲಿ ಅಸಮಾಧಾನದ ಅಲೆಗಳನ್ನು ಎಬ್ಬಿಸುತ್ತದೆ. 'ಮುಕ್ಕೋಟಿ ದೇವತೆಗಳು' ಎಂಬ ಪರಿಕಲ್ಪನೆಗೆ ಒಡ್ಡಿಕೊಂಡಿರುವ ಮತ್ತು ಒಗ್ಗಿಕೊಂಡಿರುವ ಸಂಸ್ಕೃತಿ-ಪರಂಪರೆ ನಮ್ಮದು. ತಂತಮ್ಮ 'ಇಷ್ಟದೇವತೆ'ಯನ್ನು ಆಯ್ಕೆಮಾಡಿಕೊಳ್ಳುವ ಸ್ವಾತಂತ್ರ್ಯ ನೀಡಿರುವ ಸನಾತನಧರ್ಮವು ಈ ನೆಲೆಯಲ್ಲಿ ಯಾರ ಕಾಲಿಗೂ ಸರಪಳಿಯನ್ನು ತೊಡಿಸಿಲ್ಲ. ಮಾತ್ರವಲ್ಲದೆ, ಕಲ್ಲು, ಗಿಡ, ಮರಗಳಲ್ಲೂ, ಹಸು, ಹಾವು, ಬಸವನಂಥ ಪ್ರಾಣಿಗಳಲ್ಲೂ ಪರಮಾತ್ಮನನ್ನು ಕಾಣುವ ಪರಂಪರೆ ನಮ್ಮದು. ನಿರ್ದಿಷ್ಟ ದಿನ ಮತ್ತು ಕ್ಷಣದಲ್ಲಿ ಕೈಗೊಳ್ಳುವ ತೀರ್ಥಯಾತ್ರೆಯೋ ಪುಣ್ಯಸ್ನಾನವೋ ನಮ್ಮ ಬದುಕಿನ ಔನ್ನತ್ಯಕ್ಕೆ ಕಾರಣವಾಗುತ್ತವೆ ಎಂಬ ನಂಬಿಕೆಯೂ ಈ ಪರಂಪರೆಯ ಭಾಗವೇ. ಇಂಥ ಸಮಷ್ಟಿಭಾವಕ್ಕೆ ಯಾರೇ ಧಕ್ಕೆಯುಂಟು ಮಾಡಿದರೂ ನಮ್ಮ ಜನ ಅದನ್ನು ಸಹಿಸುವುದಿಲ್ಲ. ಅದರಲ್ಲೂ ನಿರ್ದಿಷ್ಟವಾಗಿ, ಈ ಬಾರಿಯ ಮಹಾ ಕುಂಭಮೇಳದಲ್ಲಿ ಭಾಗವಹಿಸಿ ಪುಣ್ಯಸ್ನಾನ ಕೈಗೊಂಡು ಪುನೀತರಾಗಲು ಹಾತೊರೆದು ಭಾರತೀಯರು ಮಾತ್ರವಲ್ಲದೆ ವಿದೇಶಿ ಮೂಲದ, ಹಿಂದೂಗಳಲ್ಲದ ಗಣನೀಯ ಸಂಖ್ಯೆಯ ಜನರು ಪ್ರಯಾಗರಾಜ್‌ಗೆ ತೆರಳಿದ್ದನ್ನು ಕಂಡಿದ್ದೇವೆ, ಕೇಳಿದ್ದೇವೆ. ಹಾಗಂತ, ಇವರೆಲ್ಲರಲ್ಲಿ ಕೆನೆಗಟ್ಟಿರುವುದು 'ಕುರುಡುನಂಬಿಕೆ' ಎನ್ನಲಾದೀತೇ? ಅಥವಾ ಹೀಗೆ ಪುಣ್ಯಸ್ನಾನಕ್ಕೆಂದು ಬಂದವರಲ್ಲಿ 'ಬಡತನವನ್ನು ತೊಡೆದು ಕೊಳ್ಳುವ' ಬಯಕೆಯಷ್ಟೇ ಮನೆಮಾಡಿರುತ್ತದೆ ಎಂಬ 'ಭಾವ-ಬೇಲಿ' ಯನ್ನು ಹಾಕಲಾದೀತೇ? ಅಯ್ಯಗಳಿರಾ... ನಿಮ್ಮ ನಂಬಿಕೆಗಳನ್ನು ಪಟ್ಟು ಹಿಡಿದು ಪಾಲಿಸಿ, ಅದಕ್ಕೆ ಯಾರದ್ದೇ ತಕರಾರಿಲ್ಲ. ಹಾಗಂತ, ಇನ್ನೊಬ್ಬರ ನಂಬಿಕೆಯ ಸೌಧದ ಇಟ್ಟಿಗೆಯನ್ನು ಅಲುಗಾಡಿಸಲು ಯತ್ನಿಸದಿರಿ. ಬಲ್ಲವರು ಎನಿಸಿಕೊಂಡವರಿಗೆ ಇಷ್ಟನ್ನು ಮಾತ್ರ ಹೇಳಲು ಸಾಧ್ಯ!

ಸೊಂಪಾದಕೀಯ

ವಿಮಾನ ಟಿಕೆಟ್ ಗಗನಕ್ಕೆ

ನಮ್ಮ ದೇಶದಲ್ಲಿ ಅವಶ್ಯಕತೆಗೆ ತಕ್ಕಂತೆ ಪೂರೈಕೆ ಅಂದರೆ 'ಸಪ್ಲೈ ಆ್ಯಂಡ್ ಡಿಮ್ಯಾಂಡ್' ಸಿಸ್ಟಮ್ ಸರಿಯಾಗಿ ಕೆಲಸ ಮಾಡುತ್ತೋ ಇಲ್ಲವೋ, ಆದರೆ ಅನಿವಾರ್ಯತೆ ಇದ್ದಾಗ ಅದನ್ನು ಶೋಷಣೆ ಮಾಡುವ ಕೆಲಸ ಮಾತ್ರ ಸರಿಯಾಗಿ ಆಗುತ್ತದೆ. ಹತ್ತಿರ ಯಾವುದೂ ಹೋಟೆಲ್ ಇಲ್ಲ ಅಂದಾಗ, ಏಕಾಂಗಿ ಜಾಗದಲ್ಲಿರೋ ಹೋಟೆಲ್‌ನಲ್ಲಿ ತಿಂಡಿಯ ಬೆಲೆ ತಾನಾಗೇ ಏರುತ್ತದೆ. ಇದು ಆಹಾರಕ್ಕೆ ಮಾತ್ರ ಸೀಮಿತವಾಗಿಲ್ಲ. ಹೆಂಗಿದ್ರೂ ತಗೊಂತಾರೆ ಜನ ಅನ್ನೋ ಪರಿಸ್ಥಿತಿ ಇದ್ದಾಗ ಎಂಆರ್‌ಪಿಗಳು ಲೆಕ್ಕಕ್ಕೇ ಬರೋದಿಲ್ಲ. ಅದೇ ದಾರಿಯಲ್ಲಿ ಈಗ ವಿಮಾನದ ಟಿಕೆಟ್ ದರಗಳೂ ಸಾಗಿವೆ. ನಮ್ಮಲ್ಲಿ ರಸ್ತೆಯಲ್ಲಿ ಪ್ರಯಾಣಿಸೋ ಬಸ್ಸು, ಕಂಬಿ ಮೇಲೆ ಬಿಡೋ ರೈಲುಗಳಿಗೆ ಸರಕಾರದ ನಿಯಂತ್ರಣ ಇದೆ. ಆದರೆ ಆಕಾಶದಲ್ಲಿ ಹಾರಾಡೋ ವಿಮಾನಗಳನ್ನು ಖಾಸಗಿ ಸಂಸ್ಥೆಗಳು ನಿರ್ವಹಣೆ ಮಾಡೋದ್ರಿಂದ ಇವುಗಳ ಟಿಕೆಟ್‌ಗೆ ಕೊಡೋ ಕಾಸಿಗೆ ಮಾತ್ರ ಕಂಟ್ರೋಲ್ ಇಲ್ಲ. ಅವರಿಗೆ ಇಷ್ಟ ಬಂದಂತೆ, ಹಬ್ಬದ ಸಮಯದಲ್ಲಿ, ಇಲ್ಲ ಜನ ಪ್ರಯಾಣ ಮಾಡೇ ಮಾಡ್ತಾರೆ ಅನ್ನೋ ಗ್ಯಾರಂಟಿ ಇರೋ ಸಮಯದಲ್ಲಿ ವಿಮಾನ ಟಿಕೆಟ್‌ಗಳ ಬೆಲೆಗಳನ್ನು ಯದ್ವಾತದ್ವಾ ಏರಿಸಲಾಗುತ್ತದೆ. ಈಗ ಕುಂಭಮೇಳಕ್ಕೆ ತೆರಳುತ್ತಿರೋ ದೇಶದ ಜನರಿಗೂ ಇದರ ಬಿಸಿ ತಟ್ಟಿದೆ. ಕುಂಭಮೇಳದ ನೀರಿನಲ್ಲಿ ಮುಳುಗು ಹಾಕಲು ಹೋಗುವ ಮುನ್ನ ಆಕಾಶದಲ್ಲಿ ವಿಮಾನದಲ್ಲಿ ತೇಲಲು ಪ್ರಯಾಣಿಕರು ಭಾರಿ ಬೆಲೆ ತೆರಬೇಕಾಗಿದೆ. ಸಾಮಾನ್ಯ ಟಿಕೆಟ್ ದರಕ್ಕಿಂತ 5ರಿಂದ 6ರಷ್ಟು ಬೆಲೆ ಹೆಚ್ಚಿಸಿ ವಿಮಾನಯಾನ ಸಂಸ್ಥೆಗಳು ಜನರನ್ನು ಲೂಟಿ ಮಾಡುತ್ತಿವೆ. ಪ್ರಯಾಗ್‌ರಾಜ್‌ಗೆ ಪ್ರತಿದಿನ 132 ವಿಮಾನಗಳು ಹಾರಾಡುತ್ತಿದ್ದು, ಅವುಗಳ ಮಾಲೀಕರು ಲೂಟಿ ಮಾಡಿದ ಲಾಭದ ಅಲೆಯಲ್ಲಿ ತೇಲಾಡುತ್ತಿದ್ದಾರೆ. ಇದುವರೆಗೆ 12 ಕೋಟಿ ಜನ ಪ್ರಯಾಗ್‌ರಾಜ್‌ಗೆ ಭೇಟಿ ನೀಡಿದ್ದಾರೆ. ಹಾಗಾಗಿ ಜನರ ಧಾರ್ಮಿಕ ಭಾವನೆಯನ್ನು ಎನ್‌ಕ್ಯಾಷ್ ಮಾಡಿಕೊಂಡು ಅವರಿಂದ ಹೆಚ್ಚಿನ ಕಾಸನ್ನು ವಸೂಲಿ ಮಾಡಲಾಗುತ್ತಿದೆ. ಇದಲ್ಲದೆ ಹೋಗುವಾಗ ಕಡಿಮೆ ದರ ಇಟ್ಟು, ಹೆಂಗಿದ್ರೂ ಹೋದವರು ವಾಪಸ್ ಬರಲೇಬೇಕಲ್ಲವೇ ಅಂತ ರಿಟರ್ನ್ ಟಿಕೆಟ್ ಬೆಲೆಯನ್ನು ಗಗನಕ್ಕೇರಿಸಿರುವ ಕುತಂತ್ರ ಬುದ್ಧಿ ತೋರಿಸುತ್ತಿರುವ ಈ ಖಾಸಗಿ ಕಂಪನಿಗಳನ್ನ ಕಂಟ್ರೋಲ್ ಮಾಡೋ ಅವಶ್ಯಕತೆ ಇದೆ ಅಲ್ಲವೇ?

ಸಂಪಾದಕರ ಸದ್ಯಶೋಧನೆ

ಜಪಾನಿನಲ್ಲಿ ಅಕ್ಕಿ-ಮೀನು

'ಜಪಾನಿಗೆ ಬರ್ತೀರಾ?' ಎಂದು ಸ್ನೇಹಿತರೊಬ್ಬರನ್ನು ಕೇಳಿದಾಗ, ಅವರು ಕೇಳಿದ ಮೊದಲ ಪ್ರಶ್ನೆ 'ಅಲ್ಲಿ ಅನ್ನ-ಸಾಂಬಾರು ಸಿಗುತ್ತದಾ?' ಅಂತ. ಆ ಕ್ಷಣ ಹೇಗೆ ಉತ್ತರಿಸುವುದು ಎಂದು ಗೊತ್ತಾಗಿರಲಿಲ್ಲ. ಆದರೆ ಜಪಾನಿನಲ್ಲಿ ಇದ್ದ ಎಂಟು ದಿನ ನಮಗೆ ಅನ್ನ-ಸಾಂಬಾರಿಗೆ ಸ್ವಲ್ಪವೂ ತೊಂದರೆಯಾಗಲಿಲ್ಲ. ನಂತರ ನನಗೆ ಗೊತ್ತಾಗಿದ್ದೇನೆಂದರೆ, ಜಪಾನಿನಲ್ಲಿ ಅಕ್ಕಿ ಆಹಾರವಷ್ಟೇ ಅಲ್ಲ, ನಮ್ಮಲ್ಲಿರುವಂತೆ ಅದು ಸಂಸ್ಕೃತಿ, ಜನಜೀವನ ಮತ್ತು ಆರ್ಥಿಕತೆಯ ಅವಿಭಾಜ್ಯ ಭಾಗ. ಅಕ್ಕಿಯ ಜತೆ ಮೀನಿಗೂ ಅಷ್ಟೇ ಮಹತ್ವ. ಜಪಾನಿನಲ್ಲಿ ಅಕ್ಕಿ ಕೃಷಿಗೆ ಸುಮಾರು 2000 ವರ್ಷಗಳ ಇತಿಹಾಸವಿದೆ. ಇದು ಕೇವಲ ಆಹಾರವಷ್ಟೇ ಅಲ್ಲ, ಬದಲಿಗೆ ಧಾರ್ಮಿಕ ಆಚರಣೆಗಳಲ್ಲಿ ಮತ್ತು ಸಮಾಜದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಜಪಾನಿನ ಹವಾಮಾನ ಮತ್ತು ನೀರಿನ ಪರಿಸ್ಥಿತಿ ಅಕ್ಕಿ ಬೆಳೆಗಾರಿಕೆಗೆ ಅನುಕೂಲಕರವಾಗಿದೆ. ಶಿಂಟೋ ಧರ್ಮದ ಆಚರಣೆಗಳಲ್ಲಿ ಅಕ್ಕಿಯನ್ನು ದೇವತೆಗಳಿಗೆ ಸಮರ್ಪಿಸಲಾಗುತ್ತದೆ. ಅಕ್ಕಿಯನ್ನು ಶುಭಕಾರ್ಯಗಳಲ್ಲಿ ಬಳಸುವುದು ಸಾಮಾನ್ಯ. ಜಪಾನಿನ ಪಾಕಶೀಲತೆ ಅಕ್ಕಿಯನ್ನು ಸುತ್ತುವರಿದಿದೆ. ವೈಟ್ ರೈಸ್‌ಗೆ ಹಕುಮೈ ಎಂದು ಕರೆಯಲಾಗುತ್ತದೆ. ಇದು ಪ್ರತಿದಿನದ ಆಹಾರದ ಭಾಗ. ಸಶಿ (Sticky Rice)ಯನ್ನು ಸಂಪ್ರದಾಯಬದ್ಧ ರುಚಿಕರ ತಿನಿಸುಗಳಲ್ಲಿ ಬಳಸಲಾಗುತ್ತದೆ. ಮೊಚಿ ಒಂದು ಸಿಹಿತಿಂಡಿ, ಅಕ್ಕಿಯನ್ನು ಪುಡಿ ಮಾಡಿ ತಯಾರಿಸಲಾಗುತ್ತದೆ. ವಿಶೇಷವಾಗಿ ಹೊಸ ವರ್ಷಾಚರಣೆಗಳಲ್ಲಿ ಮೊಚಿ ಮುಖ್ಯವಾಗಿದೆ. ಸುಶಿ ಜಪಾನಿನ ಪ್ರಸಿದ್ಧ ತಿನಿಸುಗಳಲ್ಲಿ ಒಂದಾಗಿದ್ದು, ಅಕ್ಕಿಯೊಂದಿಗೆ ಮೀನನ್ನು ಬಳಸಿ ತಯಾರಿಸಲಾಗುತ್ತದೆ. ಅಕ್ಕಿ ಉತ್ಪಾದನೆ ಮತ್ತು ವಹಿವಾಟು ಜಪಾನಿನ ಗ್ರಾಮೀಣ ಆರ್ಥಿಕತೆಯಲ್ಲಿ ಪ್ರಮುಖವಾಗಿದೆ. ಪ್ರತಿ ಕುಟುಂಬವೂ ಅಕ್ಕಿಯನ್ನು ಪ್ರತಿದಿನದ ಆಹಾರದಲ್ಲಿ ಬಳಸುವುದು ಸಾಮಾನ್ಯ. ಇದು ದೇಶದ ಸಾಂಸ್ಕೃತಿಕ ಆಯಕಟ್ಟಿನ ಪ್ರತೀಕ. ಹಾಗೆಯೇ, ಜಪಾನಿನ ಸಾಂಪ್ರದಾಯಿಕ ಆಹಾರವಾಗಿರುವ ಮೀನು ಅಲ್ಲಿನ ಅದ್ಭುತ ಪರಂಪರೆಯ ಪ್ರತೀಕ. ಜಪಾನ್ ಒಂದು ದ್ವೀಪರಾಷ್ಟ್ರವಾಗಿರುವುದರಿಂದ ಅಲ್ಲಿ ಮೀನುಗಾರಿಕೆ ಪ್ರಾಚೀನ ಕಾಲದಿಂದಲೇ ಮುಖ್ಯ ವೃತ್ತಿಯಾಗಿದೆ. ಆ ದೇಶವನ್ನು ಸುತ್ತುವರಿದ ಸಮುದ್ರಗಳು ವಿವಿಧ ಮೀನು ಪ್ರಕಾರಗಳಿಗೆ ಪ್ರಸಿದ್ಧ. ಜಪಾನಿನ ಟೊಯೋಮಾ, ಶಿಮೋನೋಸೆಕಿ, ಮತ್ತು ಹೋಕ್ಕೈಡೋ ಪ್ರದೇಶಗಳು ವಿಶ್ವದ ಪ್ರಮುಖ ಮೀನುಗಾರಿಕೆ ಕೇಂದ್ರಗಳಲ್ಲಿ ಸೇರಿವೆ. ಜಪಾನಿನಲ್ಲಿ ಮೀನು ತಾಜಾ ಸ್ಥಿತಿಯಲ್ಲಿಯೇ ಬಳಕೆಯಾಗುವುದು. ಇತರ ದೇಶಗಳಿಗಿಂತ ಭಿನ್ನವಾಗಿ, ಅಲ್ಲಿ ಕಚ್ಚಾ ಮೀನು ತಿನ್ನುವುದು ಒಂದು ಕಲೆಯಾಗಿ ಪರಿಗಣಿಸಲಾಗುತ್ತದೆ. ಸಶಿಮಿ ಎಂಬುದು ತಾಜಾ, ಕಚ್ಚಾ ಮೀನಿನಿಂದ ತಯಾರಿಸಿದ ತಿನಿಸು. ವಿವಿಧ ರೀತಿಯ ಸಾಸ್‌ಗಳನ್ನು ಜತೆಯಾಗಿ ತಿನ್ನಲಾಗುತ್ತದೆ. ಟೆಂಪುರಾ, ಉನಗಿ ಕೂಡ ಪ್ರಸಿದ್ಧ ತಿನಿಸು. ಜಪಾನ್ ವಿಶ್ವದ ಪ್ರಮುಖ ಮೀನು ರಫ್ತುಗಾರಗಳಲ್ಲಿ ಒಂದಾಗಿದೆ. ಟ್ಯೂನಾ ಮತ್ತು ಸ್ಯಾಲ್ಮನ್ ಬೇಟೆ ಜಾಗತಿಕ ಮಾರುಕಟ್ಟೆಯಲ್ಲಿ ಪ್ರಮುಖವಾಗಿದೆ. ಟೋಕಿಯೋದ ಟೊಯೋಸು ಮಾರುಕಟ್ಟೆ ಜಗತ್ತಿನ ಅತ್ಯಂತ ದೊಡ್ಡ ಮೀನು ಮಾರುಕಟ್ಟೆಗಳಲ್ಲಿ ಒಂದಾಗಿದೆ. ಸೂಶಿ ಜಪಾನಿನ ಆಹಾರಪದ್ಧತಿಯ ಐಕಾನ್ ಆಗಿದ್ದು, ಅಕ್ಕಿ ಮತ್ತು ಮೀನಿನ ಸಮರ್ಪಕ ಸಂಯೋಜನೆಯಾಗಿದೆ. ಅಕ್ಕಿ ಮತ್ತು ಮೀನಿನ ಜತೆಗೆ ಪೂರಕ ಆಹಾರವಾಗಿ ಮಿಸೋ ಸೂಪ್ ತುಂಬಾ ಸಾಮಾನ್ಯ. ಶಿಂಟೋ ದೇವಾಲಯಗಳಲ್ಲಿ ಅಕ್ಕಿಯನ್ನು ಪೂಜೆಗಾಗಿ ಬಳಸಲಾಗುತ್ತದೆ. ಮೀನನ್ನು ಹಬ್ಬಗಳು ಮತ್ತು ಶ್ರಾದ್ಧದಲ್ಲಿ ಸಮರ್ಪಣೆ ಮಾಡಲಾಗುತ್ತದೆ. ಪ್ರತಿ ವರ್ಷ ಜಪಾನಿನಲ್ಲಿ 'ರೈಸ್ ಪ್ಲಾಂಟಿಂಗ್ ಫೆಸ್ಟಿವಲ್' (Rice Planting Festival)ಅನ್ನು ಏರ್ಪಡಿಸಲಾಗುತ್ತದೆ. ಈ ಹಬ್ಬದಲ್ಲಿ ಭತ್ತ ಕೃಷಿ ಕಾರ್ಯಗಳ ಆರಂಭವನ್ನು ಪ್ರತಿಪಾದಿಸಲಾಗುತ್ತದೆ ಮತ್ತು ಇದು ಸಮೃದ್ಧ ಭೂಮಿಯನ್ನು ಮತ್ತು ಉತ್ತಮ ಬೆಳೆಗಳನ್ನು ಕೋರಲು ದೇವರಿಗೆ ಕೃತಜ್ಞತೆ ಸಲ್ಲಿಸುವ ಮಾರ್ಗವಾಗಿದೆ. ಆಧುನಿಕ ಜಗತ್ತಿನಲ್ಲಿ ಕೂಡಾ, ಅಕ್ಕಿಯು ಜಪಾನಿನಲ್ಲಿ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿಲ್ಲ. ಅಲ್ಲಿನ ಬಹುತೇಕ ಕುಟುಂಬಗಳಲ್ಲಿ ಊಟದಲ್ಲಿ ಅಕ್ಕಿ ಇರುವುದನ್ನು ನಾವು ನೋಡಬಹುದು. 'ಭತ್ತ ಬೆಳೆದರೆ ಬಡತನವಿಲ್ಲ' ಎಂಬ ನುಡಿಗಟ್ಟು ಅಲ್ಲಿ ಪ್ರಚಲಿತದಲ್ಲಿದೆ.

ಪ್ರಾಚೀನ ರೋಮ್‌ನ ಮಿಲಿಟರಿ ಆಸ್ಪತ್ರೆಗಳು

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
vveditoped@gmail.com

ಜಗತ್ತಿನ ಮಹಾಸಾಮ್ರಾಜ್ಯಗಳಲ್ಲಿ ರೋಮನ್ ಸಾಮ್ರಾಜ್ಯವೂ ಒಂದು. ಇದು ಕ್ರಿ.ಪೂ.27ರಲ್ಲಿ ಆರಂಭವಾಗಿ ಕ್ರಿ.ಶ.395ರವರೆಗೆ ಮುಂದುವರಿಯಿತು. ರೋಮನ್ ಸಾಮ್ರಾಜ್ಯವು ತನ್ನ ವಾಸ್ತು ರಚನೆಗಳಿಂದ, ಅದ್ಭುತ ಎಂಜಿನಿಯರಿಂಗ್ ತಂತ್ರಜ್ಞಾನದಿಂದ ಹಾಗೂ ಆಡಳಿತದಿಂದ ವಿಶ್ವವಿಖ್ಯಾತವಾಗಿದೆ. ರೋಮನ್ನರ ವ್ಯವಸ್ಥಿತ ಆಡಳಿತಕ್ಕೆ ಅತ್ಯುತ್ತಮ ಉದಾಹರಣೆ 'ವ್ಯಾಲೆಟುಡಿನೇರಿಯ'ಗಳ ರಚನೆ. ವ್ಯಾಲೆಟುಡಿನೇರಿಯ, ಪ್ರಾಚೀನ ಜಗತ್ತಿನ ಅಧಿಕೃತವಾಗಿ ದಾಖಲಾಗಿರುವ ಪ್ರಪ್ರಥಮ ಮಿಲಿಟರಿ ಆಸ್ಪತ್ರೆಯಾಗಿದೆ. ರೋಮನ್ನರ ಮಿಲಿಟರಿ ಆಸ್ಪತ್ರೆಗಳ ಪರಿಕಲ್ಪನೆಯು ಅದ್ಭುತವಾಗಿದೆ.

ಒಂದು ಸಾಮ್ರಾಜ್ಯವು ಸರ್ವತೋಮುಖ ಅಭಿವೃದ್ಧಿಯನ್ನು ಕಾಣಬೇಕಾದರೆ ಆ ಸಾಮ್ರಾಜ್ಯದ ಸೈನ್ಯವು ಸರ್ವಸನ್ನದ್ಧವಾಗಿರಬೇಕು. ಸೈನಿಕರಲ್ಲಿ ತೃಪ್ತಿಯಿರಬೇಕು. ಅರಸನಲ್ಲಿ ನಂಬಿಕೆಯಿರಬೇಕು. ದೇಶಕ್ಕಾಗಿ ಆತ್ಮಾರ್ಪಣೆಯನ್ನು ಮಾಡಿಕೊಳ್ಳಲು ಹಿಂದೆಗೆಯದ ಕೆಚ್ಚೆದೆಯಿರಬೇಕು. ಅರಸನಾದವನು ತಾನು ಸೈನಿಕರ ಬಗ್ಗೆ ಅತೀವ ಕಾಳಜಿಯನ್ನು ಹೊಂದಿರುವುದಕ್ಕೆ ಪ್ರತ್ಯಕ್ಷ ಪುರಾವೆಗಳನ್ನು ಒದಗಿಸುತ್ತಿರಬೇಕು. ರೋಮನ್ ಅರಸರು ಇಂಥ ಸೈನ್ಯವನ್ನು ಕಟ್ಟಿದರು. ಹಾಗಾಗಿ 'ಸೈನಿಕರ ಯೋಗಕ್ಷೇಮಕ್ಕಿಂತ ಹೆಚ್ಚಿನದು ಮತ್ತೊಂದಿಲ್ಲ' ಎನ್ನುವುದಕ್ಕೆ ಪ್ರತ್ಯಕ್ಷ ಸಾಕ್ಷಿ ಎಂಬಂತೆ 'ವ್ಯಾಲೆಟುಡಿನೇರಿಯ' ಎಂಬ ಮಿಲಿಟರಿ ಆಸ್ಪತ್ರೆಗಳನ್ನು ಕಟ್ಟಿಸಿದರು. ಇದು ರೋಮನ್ ಅರಸರ ಬುದ್ಧಿವಂತಿಕೆಗೆ, ಮುತ್ಸದ್ದಿತನಕ್ಕೆ ಹಾಗೂ ಸೈನಿಕರ ಸ್ವಾಸ್ಥ್ಯಕ್ಕೆ ಸಂಬಂಧಿಸಿದಂತೆ ಅವರಿಗಿದ್ದ ಪ್ರಾಮಾಣಿಕತೆಗೆ ಸಾಕ್ಷಿಯಾಯಿತು. ವ್ಯಾಲೆಟುಡಿನೇರಿಯಗಳು ರೋಮನ್ ಸೈನಿಕರಿಗೆ ಅಗತ್ಯವಿದ್ದ ಎಲ್ಲ ರೀತಿಯ ವೈದ್ಯಕೀಯ ಅನುಕೂಲತೆಗಳನ್ನು ಮಾಡಿಕೊಡುವುದರ ಜತೆಯಲ್ಲಿ ಆಧುನಿಕ ಆಸ್ಪತ್ರೆಗಳು ಅಸ್ತಿತ್ವಕ್ಕೆ ಬರಲು ಭದ್ರವಾದ ಬುನಾದಿಯನ್ನು ಹಾಕಿದವು.

- **ಆರಂಭ:** ಪ್ರಾಚೀನ ಜಗತ್ತಿನಲ್ಲಿ ನಡೆಯುತ್ತಿದ್ದ ಯುದ್ಧಗಳಲ್ಲಿ ಗಾಯಗೊಳ್ಳುವ ಸೈನಿಕರಿಗಾಗಿ ಸುಸಜ್ಜಿತ ಆಸ್ಪತ್ರೆಗಳು ಇರುತ್ತಿರಲಿಲ್ಲ. ರಣರಂಗದಿಂದ ಸಾಕಷ್ಟು ದೂರದಲ್ಲಿ ಬಿಡಾರಗಳಲ್ಲಿ ತಾತ್ಕಾಲಿಕ ಆಸ್ಪತ್ರೆಗಳು ನಿರ್ಮಾಣವಾಗುತ್ತಿದ್ದವು. ಇಲ್ಲಿ ಪ್ರಾಥಮಿಕ ಚಿಕಿತ್ಸೆಯ ಅನುಕೂಲತೆಗಳಿರುತ್ತಿದ್ದವು, ಅಷ್ಟೇ. ಗಂಭೀರ ಸ್ವರೂಪದ ಶಸ್ತ್ರಚಿಕಿತ್ಸೆಗಳಾಗಲಿ ಅಥವಾ ಪುನರ್ವಸತಿಯ ಅನುಕೂಲತೆಗಳಾಗಲಿ ಇರುತ್ತಿರಲಿಲ್ಲ. ಗಾಯಗೊಂಡ ರೋಗಿಗಳಿಗೆ ಸಾವು ಬೇಗ ಬರುತ್ತಿರಲಿಲ್ಲ. ಅವರು ನರಳಿ ನರಳಿ ಸಾಯುವುದು ಅನಿವಾರ್ಯವಾಗುತ್ತಿತ್ತು.

  ಕ್ರಿ.ಪೂ.1ನೆಯ ಶತಮಾನದ ವೇಳೆಗೆ ರೋಮನ್ನರ ಮಹತ್ವಾಕಾಂಕ್ಷೆಯು ತೀವ್ರವಾಗಿ ಬೆಳೆಯಿತು. ಚಕ್ರವರ್ತಿ ಗೈಸ್ ಜೂಲಿಯಸ್ ಸೀಸರ್ ಅಗಸ್ಟಸ್ ಸೈನ್ಯದ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿದ. ಅತ್ಯಂತ ಸಮರ್ಥವಾದ, ಶಿಸ್ತುಬದ್ಧವಾದ ಹಾಗೂ ಯಾವ ಕ್ಷಣದಲ್ಲಾದರೂ ಯುದ್ಧ ಸನ್ನದ್ಧವಾದ ಸೈನ್ಯವನ್ನು ಕಟ್ಟಲು ತೀರ್ಮಾನವನ್ನು ತೆಗೆದುಕೊಂಡ. ಆ ದಿಶೆಯಲ್ಲಿ ಸೈನಿಕರ ನಂಬಿಕೆ ಹಾಗೂ ವಿಶ್ವಾಸವನ್ನು ಪಡೆಯಲು, ತಾತ್ಕಾಲಿಕ ಹಾಗೂ ಸಂಚಾರಿ ಆಸ್ಪತ್ರೆಗಳ ಬದಲು 'ವ್ಯಾಲೆಟುಡಿನೇರಿಯ' ಎಂಬ ಸ್ಥಿರ ಆಸ್ಪತ್ರೆಗಳನ್ನು ಕಟ್ಟಿಸಿದ. ಗಾಯಾಳುಗಳು ಹಾಗೂ ಅಸ್ವಸ್ಥರು ಇಲ್ಲಿ ಅತ್ಯುತ್ತಮ ಆರೈಕೆಯನ್ನು ಪಡೆದು, ಸಾಕಷ್ಟು ವಿಶ್ರಾಂತಿಯನ್ನು ತೆಗೆದುಕೊಂಡು, ಯುದ್ಧ ಸನ್ನದ್ಧರಾಗಿ ಸೈನ್ಯದ ಕರೆಗಾಗಿ ಕಾಯುವ ಪುನಶ್ಚೇತನಾ ಕೇಂದ್ರಗಳಾಗಿ ಇವು ಅತ್ಯಲ್ಪ ಕಾಲದಲ್ಲಿ ಪ್ರಸಿದ್ಧವಾದವು.

  ವ್ಯಾಲೆಟುಡಿನೇರಿಯ ಎಂಬುದು ಲ್ಯಾಟಿನ್ ಮೂಲದ ಶಬ್ದ. 'ವೀಲೆಟುಡು' ಎಂಬುದು ಕಾಂಡ ಶಬ್ದ. 'ಆರೋಗ್ಯ' ಅಥವಾ 'ಸ್ವಾಸ್ಥ್ಯ' ಎನ್ನುವುದು ಇದರ ಮೂಲ ಅರ್ಥ. ಆರಂಭದ ದಿನಗಳಲ್ಲಿ ಈ ಆಸ್ಪತ್ರೆಗಳು ರೋಮ್ ಸಾಮ್ರಾಜ್ಯದ ಕೋಟೆಗಳ ಒಳಗೆ ಇರುತ್ತಿದ್ದವು. ಹಾಗಾಗಿ ಯಾವುದೇ ಯುದ್ಧದ ಸಂದರ್ಭದಲ್ಲಿ ಗಾಯಾಳುಗಳನ್ನು ಎಲ್ಲಿ ಸಾಗಿಸಬೇಕು ಹಾಗೂ ಹೇಗೆ ಸಾಗಿಸಬೇಕು ಎಂಬುದರ ಬಗ್ಗೆ ಸ್ಪಷ್ಟ ಮಾರ್ಗದರ್ಶನವು ಇರುತ್ತಿತ್ತು. ರೋಮನ್ನರ ಯೋಜನೆ, ಪ್ರಮಾಣಬದ್ಧ ಸೇವೆ ಹಾಗೂ ಶಿಸ್ತಿಗೆ ವ್ಯಾಲೆಟುಡಿನೇರಿಯ ಮಾದರಿಯಾಗಿತ್ತು. ಹಾಗಾಗಿ ರೋಮ್ ಸಾಮ್ರಾಜ್ಯದಲ್ಲಿರುವ ಎಲ್ಲ ವ್ಯಾಲೆಟುಡಿನೇರಿಯಗಳು ಪೂರ್ವ ನಿರ್ಣೀತ ಕಟ್ಟುಪಾಡುಗಳಿಗೆ ಅನುಗುಣವಾಗಿ ನಿರ್ಮಾಣವಾಗಿದ್ದವು.
- **ವಾಸ್ತು ಮತ್ತು ವಿನ್ಯಾಸ:** ವ್ಯಾಲೆಟುಡಿನೇರಿಯ ಸಾಮಾನ್ಯವಾಗಿ ದೀರ್ಘ ಚತುರಸ್ರ ಆಯತಾಕಾರ/ರೆಕ್ಟ್ಯಾಂಗಲ್ ಆಕಾರದಲ್ಲಿ ಇರುತ್ತಿದ್ದವು. ಕಟ್ಟಡದ



  ಮಧ್ಯದಲ್ಲಿ ಒಂದು ದೊಡ್ಡ ಅಂಗಳವಿರುತ್ತಿತ್ತು. ಉಳಿದ ಸಾಮಾನ್ಯ ರಚನೆಯನ್ನು ಈ ಕೆಳಕಂಡಂತೆ ಸಂಗ್ರಹಿಸಬಹುದು.
- **ವಾರ್ಡುಗಳು:** ಅತ್ಯಂತ ಹೊರಗೆ, ಆಸ್ಪತ್ರೆಯ ಗೋಡೆಗಳಿಗೆ ಅಂಟಿಕೊಂಡಂತೆ ರೋಗಿಗಳ ವಾರ್ಡುಗಳು ಇರುತ್ತಿದ್ದವು. ಒಂದು ವಾರ್ಡಿನಲ್ಲಿ 4-6 ರೋಗಿಗಳು ಮಾತ್ರ ಇರಲು ಅವಕಾಶವಿತ್ತು. ಏಕೆಂದರೆ ರೋಗಿಗಳ ಸಂಖ್ಯೆ ಕಡಿಮೆ ಇದ್ದಷ್ಟು, ಸೋಂಕು ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ಸಾಧ್ಯತೆಯು ಕಡಿಮೆ ಇರುತ್ತಿತ್ತು.
- **ಶಸ್ತ್ರಚಿಕಿತ್ಸಾಲಯ:** ಆಪರೇಷನ್ ಥಿಯೇಟರ್ ಪ್ರತ್ಯೇಕವಾಗಿ ಇರುತ್ತಿತ್ತು. ಶಸ್ತ್ರಚಿಕಿತ್ಸೆಗೆ ಬೇಕಾದ ಎಲ್ಲ ರೀತಿಯ ಉಪಕರಣಗಳು ಅಲ್ಲಿ ಇರುತ್ತಿದ್ದವು.
- **ಉಗ್ರಾಣಗಳು:** ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ನೀಡಲು ಬೇಕಾದ ಎಲ್ಲ ವಸ್ತುಗಳ ಮೂಲಿಕೆ, ಬ್ಯಾಂಡೇಜು, ಶಸ್ತ್ರಚಿಕಿತ್ಸಾ ಉಪಕರಣ ಇತ್ಯಾದಿಗಳ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿ ಇರುತ್ತಿದ್ದವು.
- **ಅಡುಗೆ ಮನೆ ಮತ್ತು ಶೌಚಾಲಯ:** ಆಸ್ಪತ್ರೆಗೆ ಇವೆರಡೂ ಮುಖ್ಯ. ರೋಗಿಗಳಿಗೆ ಅಗತ್ಯವಾದ ಪೌಷ್ಟಿಕ ಆಹಾರವನ್ನು ನೀಡಲು ಪ್ರತ್ಯೇಕ ಅಡುಗೆ ಮನೆ ಇರುತ್ತಿತ್ತು. ರೋಗಿಗಳು ಹಾಗೂ ಆಸ್ಪತ್ರೆಯ ಸಿಬ್ಬಂದಿಗೆ ಪ್ರತ್ಯೇಕವಾದ ಶೌಚಾಲಯಗಳು ಇರುತ್ತಿದ್ದವು. ಒಬ್ಬ ರೋಗಿಯು ಶೀಘ್ರವಾಗಿ ಗುಣಮುಖನಾಗಬೇಕಾದರೆ ಅವನಿಗೆ ಪೌಷ್ಟಿಕ ಆಹಾರವು ಬೇಕು ಹಾಗೂ ಸ್ವಚ್ಛ ಪರಿಸರವಿರಬೇಕು ಎನ್ನುವ ತತ್ತ್ವವನ್ನು ಅವರು ತಿಳಿದಿದ್ದರು ಎನ್ನಬಹುದು.
- **ನೀರಿನ ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆ:** ನೀರಿನ ಪೂರೈಕೆ ಹಾಗೂ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಸಂಬಂಧಪಟ್ಟ ಹಾಗೆ ಅತ್ಯುತ್ತಮ ಎಂಜಿನಿಯರಿಂಗ್ ವ್ಯವಸ್ಥೆಯನ್ನು ರೂಪಿಸಿದ್ದರು. ಅಡುಗೆ ಮನೆಯಲ್ಲಿ ಉತ್ಪಾದನೆಯಾಗುವ ತ್ಯಾಜ್ಯ ಪದಾರ್ಥಗಳಿಂದ ಹಿಡಿದು, ಇಡೀ ಆಸ್ಪತ್ರೆಯಲ್ಲಿ ಉತ್ಪಾದನೆಯಾಗುತ್ತಿದ್ದ ಎಲ್ಲ ತ್ಯಾಜ್ಯ ಪದಾರ್ಥಗಳ ಸುರಕ್ಷಿತ ವಿಲೇವಾರಿಗಾಗಿ ಒಳಚರಂಡಿ ವ್ಯವಸ್ಥೆಯು ಇರುತ್ತಿತ್ತು. ಇದರಿಂದ ಸೋಂಕು ಹರಡುವ ಸಾಧ್ಯತೆಯು ಕನಿಷ್ಠ ಪ್ರಮಾಣಕ್ಕೆ ಇಳಿದಿತ್ತು.

  ರೋಮನ್ ಅರಸರು ಸೈನಿಕರ ಆರೋಗ್ಯಕ್ಕೆ ಕಟ್ಟಿಸಿದ ವ್ಯಾಲೆಟುಡಿನೇರಿಯ ಎಷ್ಟು ಕ್ರಮಬದ್ಧವಾದ ವಿನ್ಯಾಸವನ್ನು ಒಳಗೊಂಡಿತ್ತು ಹಾಗೂ ಸೋಂಕು ಒಬ್ಬರಿಂದ ಒಬ್ಬರಿಗೆ ಹರಡುವ ಸಾಧ್ಯತೆಯು ಎಷ್ಟು ಕನಿಷ್ಠ ಪ್ರಮಾಣಕ್ಕೆ ಇಳಿದಿತ್ತು ಎನ್ನುವ ವಿಚಾರವು, ಸೈನ್ಯದ ಬಗ್ಗೆ ರೋಮನ್ ಆಳರಸರ ಕಾಳಜಿ ಎಷ್ಟು ಉನ್ನತವಾಗಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ.
- **ವೈದ್ಯ ಮತ್ತು ವೈದ್ಯಕೀಯ:** ವ್ಯಾಲೆಟುಡಿನೇರಿಯದಲ್ಲಿದ್ದ ವೈದ್ಯರು ನಡೆಸುತ್ತಿದ್ದ ಚಿಕಿತ್ಸಾ ಪರಿಕಲ್ಪನೆಯನ್ನು ಮೂರು ರೀತಿಯಲ್ಲಿ ವರ್ಗೀಕರಿಸಬಹುದಾಗಿತ್ತು. ಮೊದಲನೆಯದಾಗಿ ಸಾಂಪ್ರದಾಯಿಕ ಗ್ರೀಕ್ ಚಿಕಿತ್ಸಾ ವ್ಯವಸ್ಥೆಯ ಅನುಕರಣೆ. ಹಿಪ್ಪೋಕ್ರೇಟ್ಸ್ ಮತ್ತು ಗ್ಯಾಲನ್ ಅವರ ಬೋಧನೆ ಹಾಗೂ ಚಿಕಿತ್ಸಾ ಸ್ವರೂಪವನ್ನು ಯಥಾವತ್ ಬಳಸುತ್ತಿದ್ದರು (ಬಹುಶಃ ಇದು ಯುರೋಪಿನ ಮಧ್ಯ ಯುಗದವರೆಗೆ ಅಬಾಧಿತವಾಗಿ ಮುಂದುವರಿಯಿತು). ಎರಡನೆಯದಾಗಿ, ಅನುಭವಜನ್ಯ (ಎಂಪೆರಿಕಲ್) ಕಾದುನೋಡುವ ತಂತ್ರವನ್ನು ಅನುಸರಿಸುತ್ತಿದ್ದರು. ಕೆಲವು ಪ್ರಕರಣಗಳಲ್ಲಿ ರೋಗಪ್ರಗತಿಯು ಯಾವ ಪ್ರಮಾಣದಲ್ಲಿ ಮುಂದುವರಿಯುತ್ತಿದೆ ಎನ್ನುವುದನ್ನು ಗಮನಿಸಿ ಚಿಕಿತ್ಸಾ ಸ್ವರೂಪವನ್ನು ನಿರ್ಣಯಿಸುತ್ತಿದ್ದರು. ಮೂರನೆಯದು ಪ್ರಾಯೋಗಿಕ ಅಥವಾ ಕಾರ್ಯೋಪಯೋಗಿ ವಿಧಾನ (ಪ್ರಾಕ್ಟಿಕಲ್). ಇಲ್ಲಿ ಆರೋಗ್ಯದ ಬಗ್ಗೆ ಇರುವ ಸಿದ್ಧಾಂತಗಳ ಬಗ್ಗೆ ಹೆಚ್ಚು ತಲೆಯನ್ನು ಕೆಡಿಸಿಕೊಳ್ಳದೇ, ಕಾರ್ಯೋಪಯೋಗಿ ವಿಧಾನಗಳ ಮೂಲಕ ತಾರ್ಕಿಕ ಚಿಕಿತ್ಸೆಯನ್ನು ನೀಡಲಾಗುತ್ತಿತ್ತು. ಇನ್ನು, ಅಂದಿನ ಚಿಕಿತ್ಸಾ ಪದ್ಧತಿಯಲ್ಲಿ ಲಭ್ಯವಿದ್ದ ಮುಖ್ಯ ಅಂಗಗಳು ಹೀಗಿವೆ:
- **ವೈದ್ಯರು ಮತ್ತು ಸಿಬ್ಬಂದಿ:** ವ್ಯಾಲೆಟುಡಿನೇರಿಯದಲ್ಲಿ 'ಮೆಡಿಸಿ' ಎಂಬ ಹೆಸರಿನ ವೈದ್ಯರು ಇರುತ್ತಿದ್ದರು. ಇವರಿಗೆ ನೆರವನ್ನು ನೀಡಲು 'ಕಪ್ಸಾರಿ'ಗಳಿದ್ದರು. ಗಾಯವನ್ನು ಸ್ವಚ್ಛಗೊಳಿಸಿ ಪಟ್ಟಿಯನ್ನು ಕಟ್ಟುವುದು ಇವರ ಮುಖ್ಯ ಕೆಲಸವಾಗಿತ್ತು. 'ಇಮ್ಯೂನ್ಸ್' ಎಂಬ ಯೋಧರು ಇರುತ್ತಿದ್ದರು. ಇವರು ಯುದ್ಧರಂಗಕ್ಕೆ ಹೋಗುತ್ತಿರಲಿಲ್ಲ. ಬದಲಿಗೆ ವೈದ್ಯಕೀಯದ ಮೂಲಭೂತ ತತ್ತ್ವಗಳನ್ನು ಕಲಿತುಕೊಂಡು ಚಿಕಿತ್ಸೆಯಲ್ಲಿ ನೆರವಾಗುತ್ತಿದ್ದರು.

ವೈದ್ಯಕೀಯ ಸೇವೆಗಳು

- **ಗಾಯಗಳ ಆರೈಕೆ:** ಯುದ್ಧವೆಂದರೆ ಗಾಯಗಳಾಗುವುದು ಸಾಮಾನ್ಯ. ಗಾಯಗಳಲ್ಲಿ ಹಲವು ವಿಧಗಳಿವೆ. ತರಚುಗಾಯ, ಸೀಳುಗಾಯ, ಚುಚ್ಚುಗಾಯ, ಮೂಳೆ ಮುರಿಯುವುದು, ಕೀಲು ತಪ್ಪುವುದು ಇತ್ಯಾದಿ. ವೈದ್ಯರು ಇವುಗಳಿಗೆ ಸೂಕ್ತ ಚಿಕಿತ್ಸೆಯನ್ನು ನೀಡುತ್ತಿದ್ದರು. ವಿನಿಗರ್ ಮತ್ತು ಶುದ್ಧ ಜೇನುತುಪ್ಪವನ್ನು ಕ್ರಿಮಿನಾಶಕ ದ್ರಾವಣವನ್ನಾಗಿ ಉಪಯೋಗಿಸುತ್ತಿದ್ದರು.
- **ಶಸ್ತ್ರವೈದ್ಯ:** ಪ್ರಧಾನವಾಗಿ ಮೂರು ರೀತಿಯ ಶಸ್ತ್ರಚಿಕಿತ್ಸೆಗಳು ನಡೆಯುತ್ತಿದ್ದವು. ಮೊದಲನೆಯದು ಅಂಗಛೇದನ. ಗುಣಪಡಿಸಲು ಸಾಧ್ಯವಿಲ್ಲದ ಅಂಗವನ್ನು ಛೇದಿಸುವುದರಿಂದ ಸೈನಿಕ ಜೀವವನ್ನು ಉಳಿಸಬಹುದು ಎನ್ನುವುದು ಅವರಿಗೆ ತಿಳಿದಿತ್ತು. ದೇಹದ ವಿವಿಧ ಅಂಗಗಳಲ್ಲಿ ಚುಚ್ಚಿಕೊಂಡಿರಬಹುದಾದ ಬಾಣದ ತುದಿಯಂಥ ಲೋಹಚೂರುಗಳನ್ನು ಸುರಕ್ಷಿತವಾಗಿ ಹೊರತೆಗೆದು ರಕ್ತಸ್ರಾವವನ್ನು ನಿಲ್ಲಿಸುತ್ತಿದ್ದರು. ಮೂರನೆಯದು ಕಪಾಲ ರಂಧ್ರನ (ಟ್ರಿಪನೇಶನ್). ತಲೆಗೆ ಪೆಟ್ಟು ಬಿದ್ದು, ಒಳಗಡೆ ರಕ್ತವು ಹೆಪ್ಪುಗಟ್ಟಿಕೊಂಡಿದ್ದಾಗ, ಕಪಾಲ ರಂಧ್ರವನ್ನು ಕೊರೆದು, ಒಳಗೆ ಒತ್ತಡದಲ್ಲಿರುವ ರಕ್ತವನ್ನು ಹೊರಹರಿಯಬಿಡುತ್ತಿದ್ದರು.
- **ನಾರುಬೇರಿನ ಚಿಕಿತ್ಸೆ:** ರೋಮನ್ನರು ನಾನಾ ಮೂಲಿಕೆಗಳನ್ನು ಹಾಗೂ ಬೇರುಗಳನ್ನು ತಮ್ಮ ಚಿಕಿತ್ಸೆಯಲ್ಲಿ ಬಳಸುತ್ತಿದ್ದರು. ಅವುಗಳಲ್ಲಿ ಬೆಳ್ಳುಳ್ಳಿ, ವಿಲ್ಲೋ ಬಾರ್ಕ್ ಮತ್ತು ಅಫೀಮು ಮುಖ್ಯವಾಗಿದ್ದವು. ನಮಗೆಲ್ಲ ತಿಳಿದಿರುವ ಹಾಗೆ ವಿಲ್ಲೋಬಾರ್ಕ್ ಜ್ವರವನ್ನು ಇಳಿಸುವ ಆಸ್ಪಿರಿನ್ ಅನ್ನು ಒಳಗೊಂಡ ತೊಗಟೆ. ಮುಂದೆ ಈ ತೊಗಟೆಯಿಂದಲೆ ಆಸ್ಪಿರಿನ್ ಔಷಧವನ್ನು ರೂಪಿಸಿದೆವು. ಆ ಆಸ್ಪಿರಿನ್ ಅನ್ನು ಇಂದಿಗೂ ಚಿಕಿತ್ಸೆಯಲ್ಲಿ ಬಳಸುತ್ತಿದ್ದೇವೆ. ಅಫೀಮನ್ನು ಪ್ರಧಾನವಾಗಿ ನೋವು ನಿವಾರಕ ಔಷಧವಾಗಿ ಬಳಸುತ್ತಿದ್ದರು.
- **ಪುನರ್ವಸತಿ (ರಿಹ್ಯಾಬಿಲಿಟೇಶನ್):** ಒಂದು ರೋಗದಿಂದ ಗುಣಮುಖನಾದ ಸೈನಿಕನು ತಕ್ಷಣ ಯುದ್ಧರಂಗಕ್ಕೆ ಮರಳಬೇಕಾಗಿರಲಿಲ್ಲ. ಅವನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಪೂರ್ಣ ಚೇತರಿಸಿಕೊಂಡ ಮೇಲೆಯೇ ಮರಳಿ ಯುದ್ಧಕ್ಕೆ ತೆರಳಬೇಕಾಗಿತ್ತು.
- **ಸ್ವಚ್ಛತೆ:** ರೋಮನ್ ವ್ಯಾಲೆಟುಡಿನೇರಿಯದಲ್ಲಿ ಸ್ವಚ್ಛತೆಗೆ ಆದ್ಯತೆಯಿತ್ತು. ಶುದ್ಧ ಕುಡಿಯುವ ನೀರು, ಉತ್ತಮ ಒಳಚರಂಡಿಯ ವ್ಯವಸ್ಥೆಯ ಜತೆಯಲ್ಲಿ ರೋಗಿಗಳಿಗೆ ನಿತ್ಯ ಸ್ನಾನ ಮಾಡಲು ಅನುಕೂಲತೆಗಳಿದ್ದವು. ವೈಯುಕ್ತಿಕ ಸ್ವಚ್ಛತೆಯನ್ನು ನಿತ್ಯ ಪಾರಿಪಾಲಿಸುತ್ತಿದ್ದ ರೋಗಿಗಳು ಬೇಗ ಗುಣಮುಖರಾಗುತ್ತಿದ್ದರು ಹಾಗೂ ಸೋಂಕು ಒಬ್ಬರಿಂದ ಒಬ್ಬರಿಗೆ ಹರಡುವ ಸಾಧ್ಯತೆಯು ತುಂಬಾ ಕಡಿಮೆಯಾಗುತ್ತಿತ್ತು.
- **ಪರಿಸರ:** ರೋಮ್‌ನಲ್ಲಿ ಮಾರ್ಕಸ್ ಟೆರೆನ್ಶಿಯಸ್ ವಾರೊ ಎಂಬ ವಿದ್ವಾಂಸನು ಚಕ್ರವರ್ತಿ ಅಗಸ್ಟಸ್‌ನ ಆಸ್ಥಾನದಲ್ಲಿದ್ದ. ಈತನು ನಮ್ಮ ಬರಿಗಣ್ಣಿಗೆ ಕಾಣದ ರೋಗಜನಕಗಳು ಇರುತ್ತವೆ ಎಂದು ನಂಬಿದ್ದ. ಸೂಕ್ಷ್ಮಜೀವಿಗಳ ಅಸ್ತಿತ್ವದ ಬಗ್ಗೆ ಬಲವಾಗಿ ಪ್ರತಿಪಾದಿಸುತ್ತಿದ್ದ ಇವನು, ಜೌಗುಪ್ರದೇಶದ ಗಾಳಿಯಲ್ಲಿ ಇವು ವ್ಯಾಪಕವಾಗಿರುತ್ತವೆ ಎಂದ. ಇಂಥ ಪ್ರದೇಶಗಳಲ್ಲಿ ಜನವಸತಿ ಇರಬಾರದು ಎಂದು ಕಟ್ಟಪ್ಪಣೆ ಹೊರಡಿಸಿದ. ಏಕೆಂದರೆ ಇವು ಜೌಗುಪ್ರದೇಶದ ಗಾಳಿಯಲ್ಲಿ ಬೆರೆತು, ಆ ಪ್ರದೇಶದಲ್ಲಿ ವಾಸ ಮಾಡುವ ಜನರಲ್ಲಿ ನಾನಾ ಕಾಯಿಲೆಗಳನ್ನು ಉಂಟುಮಾಡುತ್ತವೆ ಎಂದ. ಜತೆಯಲ್ಲಿ ನೀರಿನಲ್ಲಿ ಸೊಳ್ಳೆಗಳು ವರ್ಧಿಸುತ್ತವೆ ಎನ್ನುವುದು ಅವನಿಗೆ ತಿಳಿದಿತ್ತು. ಅವುಗಳ ಕಡಿತದಿಂದ ಪಾರಾಗಲು ವ್ಯಾಲೆಟುಡಿನೇರಿಯಗಳನ್ನು ನೀರಿನ ತಾಣಗಳಿಂದ ದೂರ ನಿರ್ಮಿಸಲು ಹೇಳುತ್ತಿದ್ದ. ಸಾಮಾನ್ಯವಾಗಿ ಅರಣ್ಯದಿಂದ ಆವೃತವಾಗಿದ್ದ ಬೆಟ್ಟ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡು ಅಲ್ಲಿ ವ್ಯಾಲೆಟುಡಿನೇರಿಯಗಳನ್ನು ಕಟ್ಟುತ್ತಿದ್ದರು.
- **ಪರಿಣಾಮ:** ರೋಮನ್ನರ ವ್ಯಾಲೆಟುಡಿನೇರಿಯಗಳು ರೋಮನ್ ಸೈನ್ಯದ ಮೇಲೆ ಅಪಾರ ಪರಿಣಾಮವನ್ನು ಬೀರಿದವು. ಸೈನಿಕರು ಉತ್ಸಾಹದಿಂದ ಯುದ್ಧಗಳಲ್ಲಿ ಪಾಲುಗೊಳ್ಳುತ್ತಿದ್ದರು. ಯುವಕರು ಸೈನ್ಯವನ್ನು ಸೇರಲು ಮುಂದೆ ಬರುತ್ತಿದ್ದರು. ರೋಮ್ ಅರಸರು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದರು. ಸೈನ್ಯದಲ್ಲಿ ಅಸ್ತಿತ್ವದಲ್ಲಿದ್ದ ಆಸ್ಪತ್ರೆಗಳು ಸಾರ್ವಜನಿಕ ಕ್ಷೇತ್ರವನ್ನೂ ಪ್ರವೇಶಿಸಿದವು. 'ಸಾರ್ವಜನಿಕ ನೈರ್ಮಲ್ಯ' ಎನ್ನುವ ಪರಿಕಲ್ಪನೆಯನ್ನು ಜನರು ಸ್ವಾಗತಿಸಿದರು. ರೋಮ್ ಸಾಮ್ರಾಜ್ಯದ ಅವನತಿಯ ಜತೆಯಲ್ಲಿ ವ್ಯಾಲೆಟುಡಿನೇರಿಯಗಳ ನಿರ್ಮಾಣವೂ ಕಡಿಮೆಯಾದವು. ಆದರೆ ವ್ಯಾಲೆಟುಡಿನೇರಿಯಗಳ ಪರಿಕಲ್ಪನೆಯು ಕ್ರೈಸ್ತ ಮತ್ತು ಇಸ್ಲಾಮ್ ದೇಶಗಳಲ್ಲಿ ಆಧುನಿಕ ಆಸ್ಪತ್ರೆಗಳ ನಿರ್ಮಾಣಕ್ಕೆ ಸ್ಫೂರ್ತಿಯನ್ನು ನೀಡಿದವು.

ಕುಂಭಮೇಳ ಸಮೂಹಸನ್ನಿ ಆಗದಿರಲಿ

ಧರ್ಮಸೂಕ್ಷ್ಮ

ಟಿ.ಎನ್.ವಾಸುದೇವಮೂರ್ತಿ
vveditoped@gmail.com

ಹಿಂದೆ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿಯವರು ದಲಿತರ ಕೇರಿಗೆ ಭೇಟಿ ನೀಡಿ ಅವರಿಂದ ಪಾದಪೂಜೆಯನ್ನು ಸ್ವೀಕರಿಸಿದಾಗ ಸಾಕಷ್ಟು ವಿವಾದಗಳಾಗಿದ್ದವು. ನಮ್ಮ ಪ್ರಗತಿಪರರು ಶ್ರೀಗಳ ಇಂಥ ಸಾಮಾಜಿಕ ಉಪಕ್ರಮವನ್ನು ಖಂಡಿಸಿ ''ದಲಿತರಿಂದ ಪಾದಪೂಜೆ ಮಾಡಿಸಿಕೊಂಡರೆ ಸಾಲದು, ಒಬ್ಬ ದಲಿತ ವ್ಯಕ್ತಿಯನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಘೋಷಿಸಬೇಕು'' ಎಂದು ಆಗ್ರಹಿಸಿದ್ದರು. ಆಗ ಯು.ಆರ್.ಅನಂತಮೂರ್ತಿಯವರು ನುಡಿದಿದ್ದ ಮಾತುಗಳು ಇಂದಿಗೂ ಮನನೀಯವಾಗಿದೆ. ''ಪೇಜಾವರ ಶ್ರೀ ಗಳು ಸಾಮಾಜಿಕ ನ್ಯಾಯದ ನಿಟ್ಟಿನಲ್ಲಿ ಒಂದು ಹೆಜ್ಜೆ ಇರಿಸಿದರೂ ಸಾಕು, ಅದು ನಮ್ಮಂಥ ಪ್ರಗತಿಪರರು ನೂರು ಹೆಜ್ಜೆಗಳನ್ನು ಮುಂದಿರಿಸಿದುದಕ್ಕೆ ಸಮನಾಗುತ್ತದೆ'' ಎಂದಿದ್ದರು ಅನಂತಮೂರ್ತಿಯವರು.

ಪ್ರಗತಿಪರರ ಪ್ರಶ್ನೆ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಸರಿಯಿರಬಹುದು. ಆದರೆ ಯಾವುದೇ ಕ್ರಾಂತಿಯು ರಾತ್ರಿ ಕಳೆದು ಬೆಳಗಾಗುವುದರೊಳಗೆ ಸಂಭವಿಸುವುದಿಲ್ಲ. ಆದರಲ್ಲೂ ಸಾವಿರಾರು ವರ್ಷಗಳಿಂದಲೂ ಬೇರೂರಿಕೊಂಡಿರುವ ಪಿಡುಗುಗಳನ್ನು ಒಂದೇ ಏಟಿಗೆ ಬುಡಮೇಲು ಮಾಡುವೆವೆಂದರೆ ಅದು ಹುಂಬತನವಾಗುತ್ತದೆ. ಒಂದು ನಾಗರಿಕ ಸಮಾಜದಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದರೆ ಅರ್ಥಪೂರ್ಣವಾದ ಯಾವ ಸುಧಾರಣೆಯನ್ನೂ ತರಲು ಸಾಧ್ಯವಿಲ್ಲ. ಇಷ್ಟು ಸಾಮಾನ್ಯವಾದ ತಿಳಿವಳಿಕೆಯನ್ನು ನಿರ್ಲಕ್ಷಿಸಿ ಕೆಲವು ಹಿಂದೂ ಮಠಾಧ್ಯಕ್ಷರು ಶಾಂಭವೀ ಪೀಠಾಧ್ಯಕ್ಷ ಸ್ವಾಮಿ ಆನಂದ ಸ್ವರೂಪ್ ನೇತೃತ್ವದಲ್ಲಿ ಮಹಾ ಕುಂಭಮೇಳದಲ್ಲಿ ವಸಂತ ಪಂಚಮಿಯಂದು (ಫೆ.3) 'ಅಖಂಡ ಹಿಂದೂ ರಾಷ್ಟ್ರ'ದ ಸಂವಿಧಾನವನ್ನು ಬಿಡುಗಡೆ ಮಾಡುವುದಾಗಿ ಘೋಷಿಸಿದ್ದಾರೆ.

ಒಂದು ಸಮುದಾಯ ಸಂವಿಧಾನವನ್ನು ರಚಿಸಿಕೊಳ್ಳಬೇಕೆಂದರೆ ಅದು ಕೆಲವು ಪ್ರಕ್ರಿಯೆಗಳನ್ನು ಅನುಸರಿಸಬೇಕಾಗುತ್ತದೆ. ಮೊದಲಿಗೆ ಹಾಲಿ ಇರುವ ಪ್ರಭುತ್ವವು ಸಂವಿಧಾನ ಕರಡು ಸಮಿತಿಯನ್ನು ಸ್ಥಾಪಿಸಬೇಕಾಗುತ್ತದೆ. ಆ ಪ್ರಭುತ್ವ ಅಥವಾ ಪ್ರಜೆಗಳು ಮತದಾನದ ಮೂಲಕ ಸಮಿತಿಯ ಸದಸ್ಯರನ್ನು ಅವರ ಪರಿಣತಿ, ಪ್ರಾತಿನಿಧ್ಯ ಮತ್ತು ಸಮ್ಮತಿಯ ಮೇರೆಗೆ ನೇಮಕ ಮಾಡುತ್ತಾರೆ. ಅಂಥ ಸಮಿತಿಯು ಮತದಾನದ ಮೂಲಕ ಆಯ್ಕೆಯಾದ ಸದಸ್ಯರನ್ನಲ್ಲದೇ ಕಾನೂನು ತಜ್ಞರನ್ನು, ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು, ಕೆಲವು ಸಂದರ್ಭಗಳಲ್ಲಿ ಒಬ್ಬಿಬ್ಬರು ವಿದೇಶಿ ಪ್ರತಿನಿಧಿಗಳನ್ನು ಸಹ ಒಳಗೊಂಡಿರುತ್ತದೆ. ಅಂತಿಮ ಕರಡು ಸಿದ್ಧವಾದ ಮೇಲೆ ಸಾರ್ವಜನಿಕ ಚರ್ಚೆಗೆ ಒಂದಷ್ಟು ಕಾಲಾವಕಾಶ ಮಾಡಿಕೊಡಬೇಕಾಗುತ್ತದೆ.

ಇವರ ಹಿಂದೂ ಸಂವಿಧಾನ ರಚನೆಗೆ ಯಾರು ಯಾರನ್ನು ನಿಯೋಜಿಸಿದ್ದಾರೆ, ಯಾರೆಲ್ಲ ಈ ಸಂವಿಧಾನ ರಚನಾ ಸಮಿತಿಯನ್ನು ಪ್ರತಿನಿಧಿಸುತ್ತಿದ್ದಾರೆ, ಯಾವೆಲ್ಲ ಕಾನೂನು ಪಂಡಿತರೊಂದಿಗೆ, ಅಂತಾರಾಷ್ಟ್ರೀಯ ರಾಜತಾಂತ್ರಿಕರುಗಳೊಂದಿಗೆ ಇವರು ಸಮಾಲೋಚನೆ ನಡೆಸಿದ್ದಾರೆ? ಸದರಿ ಹಿಂದೂ ಸಂವಿಧಾನದ ಕರಡು ಸಾರ್ವಜನಿಕ ಚರ್ಚೆಗೆ ಮುಕ್ತವಾಗಿದೆಯೇ ಎಂಬ ಪ್ರಶ್ನೆಗೂ ಈ ಪೀಠಾಧ್ಯಕ್ಷರುಗಳ ಬಳಿ ಸ್ಪಷ್ಟ ಉತ್ತರವಿಲ್ಲ. ರಾಮರಾಜ್ಯ, ಮನುಸ್ಮೃತಿ, ಚಾಣಕ್ಯನ ಅರ್ಥಶಾಸ್ತ್ರಗಳನ್ನು ಉಲ್ಲೇಖಿಸುತ್ತಾರೆ; ಶೃಂಗೇರಿ ಶ್ರೀಗಳ ಅನುಮೋದನೆಯ ಮೇರೆಗೆ ಇವರು ಹಿಂದೂ ಸಂವಿಧಾನವನ್ನು ಅನುಷ್ಠಾನಗೊಳಿಸುವರಂತೆ. ಜನಪ್ರತಿನಿಧಿಗಳ ಅನುಮೋದನೆಯ ಬಳಿಕ ರಾಷ್ಟ್ರಪತಿಗಳ ಅಧಿಕೃತ ಸಹಿಯೊಂದಿಗೆ ಸಂವಿಧಾನವು ಜಾರಿಗೊಳ್ಳುತ್ತದೆ. ಆದರೆ ಓರ್ವ ಮಠಾಧ್ಯಕ್ಷರ ಅನುಮೋದನೆಯ ಮೇರೆಗೆ ಜಾರಿಗೆ ತರಲು ಹೊರಟಿರುವರೆಂದರೆ ಇವರ ಸಂವಿಧಾನವು ಭಾರತೀಯ ಸಂವಿಧಾನಕ್ಕೆ ಪರ್ಯಾಯವಾದ, ಭಾರತೀಯ ಸಂವಿಧಾನದೊಂದಿಗೆ ಪೈಪೋಟಿಗೆ ನಿಂತ ಸಂವಿಧಾನವೆಂದೇ ತೀರ್ಮಾನಿಸಬೇಕಾಗುತ್ತದೆ.

ಒಂದು ಉದಾತ್ತ ಉದ್ದೇಶಕ್ಕಾಗಿ ರಚನೆಗೊಂಡ ಸಂವಿಧಾನವಷ್ಟೇ ಸಮಸ್ತ ಸಮುದಾಯವನ್ನೂ ಸಲಹಬಲ್ಲದು. ಬ್ರಿಟಿಷರ ಶತಶತಮಾನಗಳ ಶೋಷಣೆ, ದಬ್ಬಾಳಿಕೆಗೆ ನಲುಗಿದ್ದ ನಮ್ಮ ಪ್ರಜೆಗಳ ಹಿತರಕ್ಷಣೆಯ ಉದ್ದೇಶಕ್ಕಾಗಿ ಬಾಬಾ ಸಾಹೇಬ್ ಅಂಬೇಡ್ಕರರ ನೇತೃತ್ವದಲ್ಲಿ ಸಂವಿಧಾನ ಸ್ಥಾಪನೆಯಾಯಿತು. ಆದರೆ ಇವರ ಹಿಂದೂ ಸಂವಿಧಾನದ ಹಿಂದಿರುವ ಉದ್ದೇಶವೇನು? ಭಾರತೀಯ ಮೂಲದ ಧರ್ಮಗಳಿಗೆ ಮಾತ್ರ ಮತದಾನದ ಹಕ್ಕು ಇರಬೇಕಂತೆ. ಅಂದರೆ ಅನ್ಯಧರ್ಮೀಯ ಪ್ರಜೆಗಳನ್ನು ಎರಡನೆಯ ದರ್ಜೆಯ ಪ್ರಜೆಗಳನ್ನಾಗಿಸುವ ಉದ್ದೇಶ ಈ ಹೊಸ ಸಂವಿಧಾನದ ಹಿಂದಿರುವ ಪ್ರೇರಣೆಯಾಗಿದೆ. ದ್ವೇಷಪೂರಿತವಾದ ಒಂದು ಹೀನ ಉದ್ದೇಶವು ಉದಾತ್ತವಾದ ಫಲವನ್ನು ಎಂದಿಗೂ ನೀಡಲಾರದು.

''ಸ್ವಾತಂತ್ರ್ಯ ಹೋರಾಟದ ನಂತರ ಪಾಕಿಸ್ತಾನವನ್ನು ಮುಸಲ್ಮಾನರಿಗಾಗಿ ಸ್ಥಾಪಿಸಲಾಯಿತು. ಇದೀಗ ನಮ್ಮ ದೇಶವನ್ನೂ 'ಹಿಂದೂ ರಾಷ್ಟ್ರ' ಎಂದು ಘೋಷಿಸುವ ಸಮಯ ಬಂದಿದೆ'' ಎಂದು ಆನಂದ್ ಸ್ವರೂಪ್ ಹೇಳಿದ್ದಾರೆ. ದೇಶ ವಿಭಜನೆಯಿಂದ ಹಿಂದೂಗಳಿಗಾಗಲಿ, ಮುಸಲ್ಮಾನರಿಗಾಗಲಿ ಯಾವ ದೃಷ್ಟಿಯಿಂದಲೂ ಒಳ್ಳೆಯದಾಗಲಿಲ್ಲ. ಇದನ್ನು ಡಾ. ರಾಮಮನೋಹರ ಲೋಹಿಯಾ ಅವರು ಬಹಳ ಸ್ಪಷ್ಟವಾಗಿ ವಿಚಾರಪೂರ್ಣವಾಗಿ ವಿವರಿಸಿದ್ದಾರೆ. ಹಾಗೆ ನೋಡಿದರೆ ಹಿಂದೂರಾಷ್ಟ್ರದ ಘೋಷಣೆ ಹೊಸ ಆಗ್ರಹವೇನಲ್ಲ. ದೇಶ ವಿಭಜನೆಯಾದಾಗಲೂ ಕೆಲವು ಉಗ್ರ ಹಿಂದೂಗಳು 'ಹಿಂದೂರಾಷ್ಟ್ರ'ಕ್ಕಾಗಿ ಆಗ್ರಹಿಸಿದ್ದರು. ಆಗ ಲೋಹಿಯಾ ನುಡಿದಿದ್ದ ಈ ಮಾತುಗಳು ಇಂದಿನ ಹಿಂದೂ ಸಂಘಟನೆಗಳಿಗೂ ಅನ್ವಯವಾಗುತ್ತವೆ: ''ನಮ್ಮ ಜನಗಳ ಮನಸ್ಸಿನಲ್ಲಿ ಮನೆಮಾಡಿರುವ ಪಾಕಿಸ್ತಾನ-ವಿರೋಧಿ ಧೋರಣೆಯು ಮುಸ್ಲಿಂ-ವಿರೋಧಿ ಧೋರಣೆಯಾಗಿ ಪರಿವರ್ತಿತವಾಗಿದೆ. ಪಾಕಿಸ್ತಾನದ ಮೇಲೆ ಹಲ್ಲೆ ಮಾಡಲು ಸಾಧ್ಯವಿಲ್ಲದ ಕಾರಣ ಈ ಹುಚ್ಚರು ಮತ್ತು ಖದೀಮರು ಅವಕಾಶ ಸಿಕ್ಕಾಗಲೆಲ್ಲ ಮುಸ್ಲಿಮರ ಮೇಲೆ ಹಲ್ಲೆ ಮಾಡಲು ಮುಂದಾಗುತ್ತಾರೆ. ಅಂಥ ದುಷ್ಕೃತ್ಯಗಳಿಂದ ದೇಶ ಇನ್ನಷ್ಟು ವಿಭಜನೆಯಾಗುತ್ತದೆ. ಹಿಂದೂ ಮುಸ್ಲಿಂ ಸಂಬಂಧದಲ್ಲಿ ಉಂಟಾದ ವಿಘಟನೆಯೇ ದೇಶ ವಿಭಜನೆಯ ಪ್ರಮುಖ ಕಾರಣವಾಗಿದೆ. ಹಿಂದೂ ಮುಸ್ಲಿಮರು ಪರಸ್ಪರ ಒಂದಾಗಿ ಗುರುತಿಸಿಕೊಂಡಾಗಲಷ್ಟೇ ವಿಭಜಿತ ದೇಶವನ್ನು ಒಗ್ಗೂಡಿಸಬಹುದು. ಯಾರ ಪಾಲಿಗೆ ದೇಶ ವಿಭಜನೆ ಶತ್ರುವೋ ಅವರ ಪಾಲಿಗೆ ಮುಸ್ಲಿಮರು ಅನಿವಾರ್ಯವಾಗಿ ಮತ್ತು ಅಗತ್ಯವಾಗಿ ಮಿತ್ರರಾಗಲೇಬೇಕು'' (Guilty men of India's partition, 5).

ಒಂದು ವೇಳೆ ಇವರ ಹಿಂದೂ ಸಂವಿಧಾನದ ಬೇಡಿಕೆ ನ್ಯಾಯಸಮ್ಮತವಾದುದೆಂದು ಸಾಬೀತಾದರೂ ಅಂಥ ಸಂವಿಧಾನ ರಚಿಸುವ ಮಠಾಧಿಪತಿಗಳಿಗೆ ಒಂದು ಕನಿಷ್ಠ ಅರ್ಹತೆ ಬೇಡವೇ? ಮತ್ತು ಆ ಸಂವಿಧಾನಕ್ಕೆ ಒಳಪಡುವ ಹಿಂದೂ ಸಮುದಾಯಕ್ಕೆ ಒಂದು ಕನಿಷ್ಠ ನೈತಿಕ ಮಾನದಂಡ ಇರಬೇಡವೇ? ನಮ್ಮಲ್ಲಿ ಜಾತಿಗಳಿವೆ ಮತ್ತು ಜಾತಿಯನ್ನು ಪ್ರತಿನಿಧಿಸುವ ಮಠಗಳಿವೆ. ಈ ಮಠಾಧಿಪತಿಗಳ ನಡುವೆಯೇ ಆಹಾರ ಪದ್ಧತಿ, ಪೂಜಾ ಪದ್ಧತಿ, ಸಾಧನಾನುಷ್ಠಾನ ಪದ್ಧತಿ ಮುಂತಾದ ವಿಷಯಗಳಲ್ಲಿ ಒಮ್ಮತವಿಲ್ಲ. ಒಂದೊಂದು ಸಂಪ್ರದಾಯವೂ ಒಂದೊಂದು ಗ್ರಂಥವನ್ನು ಪ್ರಮಾಣ ಗ್ರಂಥವೆಂದು ನಂಬುತ್ತವೆ. ಕೆಲವರಿಗೆ ವೇದ ಪ್ರಮಾಣವಾದರೆ, ಕೆಲವರಿಗೆ ವಚನಗಳು ಪ್ರಮಾಣವಾಗಿವೆ. ಕೆಲವರು ರೇವಣಸಿದ್ಧರನ್ನು, ಕೆಲವರು ಗೋರಕ್ಷನಾಥರನ್ನು, ಕೆಲವರು ಹಿಮಾಲಯದ ಅಜ್ಞಾತ ಸಾಧು ಸಂತರನ್ನು ತಮ್ಮ ಮೂಲಪುರುಷರೆಂದು ಘೋಷಿಸುತ್ತಾರೆ. ಸಮಾನ ಸಂವಿಧಾನವನ್ನು ತರುವ ಉಸ್ತುವಾರಿ ಹೊತ್ತವರು ಮೊದಲು ತಮ್ಮತಮ್ಮೊಳಗೆ ಸಮಾನತೆಯನ್ನು ಸ್ಥಾಪಿಸಿಕೊಳ್ಳಬೇಕಾಗುತ್ತದೆ.

ಕೆಲವು ಮಠಾಧೀಶರು ಜನಸಾಮಾನ್ಯರೊಂದಿಗೆ ಸಮಾನವಾಗಿ ವೇದಿಕೆ ಹಂಚಿಕೊಂಡರೆ ಮತ್ತೆ ಕೆಲವು ಮಠಾಧೀಶರು ಅಂತರ ಕಾಯ್ದುಕೊಳ್ಳುವರು. ಜನಸಾಮಾನ್ಯರು ಹಾಗಿರಲಿ ತಮ್ಮದೇ ಹಿಂದೂಧರ್ಮದ ಮತ್ತೊಂದು ಸಂಪ್ರದಾಯದ ಮಠಾಧೀಶರೊಂದಿಗೂ ಸಮಾನವಾಗಿ ಆಸೀನರಾಗುವುದಿಲ್ಲ. ಹಾಗೆ ನೋಡಿದರೆ ಇವರೆಲ್ಲರಿಗೂ ಪ್ರಮಾಣ ಗ್ರಂಥವೆನಿಸಿದ ಶ್ರುತಿ-ಸ್ಮೃತಿ-ಪುರಾಣಗಳಲ್ಲಿ ಎಲ್ಲಿಯೂ ಮಠಾಧಿಪತ್ಯದ ಪ್ರಸ್ತಾಪವಿಲ್ಲ. ಜಾತಿಗೊಂದು ಪೀಠ, ಆ ಪೀಠಕ್ಕೆ ನಿರ್ದಿಷ್ಟ ಜಾತಿಯವರೇ ಅಧಿಪತಿಯಾಗಬೇಕೆಂಬ ನಿಯಮವನ್ನು ಇವರ ಯಾವ ಶಾಸ್ತ್ರವೂ ಹೇಳಿಲ್ಲ, ಬದಲಾಗಿ ''ನಿಜವಾದ ಸನ್ಯಾಸಿಯು ಬ್ರಾಹ್ಮಣ, ಹಸು, ಆನೆ, ನಾಯಿ, ಪಂಚಮ ಮುಂತಾದ ಎಲ್ಲರಲ್ಲೂ ಏಕತ್ವವನ್ನೇ ಕಾಣುವನು'' ಎಂದಿದೆ (ಗೀತೆ 5.18). ಶಾಸ್ತ್ರಪ್ರಮಾಣದ ತಳಹದಿಯನ್ನೇ ಲೆಕ್ಕಿಸದ, ಗೀತಾವಾಕ್ಯಕ್ಕೇ ವ್ಯತಿರಿಕ್ತವಾಗಿ ನಡೆದುಕೊಳ್ಳುವ ಈ ಪೀಠಾಧ್ಯಕ್ಷರು ತಾವು ರಚಿಸುವ ಸಂವಿಧಾನಕ್ಕೆ ಬದ್ಧರಾಗಿರಬಲ್ಲರೇ?

ಆದ್ದರಿಂದ ಇಡೀ ದೇಶಕ್ಕೆ ಸಮಾನವಾದ ಒಂದು ಸಂವಿಧಾನವನ್ನು ಹೇರಲು ಹಾತೊರೆಯುತ್ತಿರುವ ಇವರು ಮೊದಲು ತಮ್ಮತಮ್ಮಲ್ಲೇ ಸಮಾನತೆಯನ್ನು ತಂದುಕೊಳ್ಳಲು ಅನುಕೂಲವಾಗುವಂಥ ಒಂದು ಧಾರ್ಮಿಕ ಸಂವಿಧಾನವನ್ನು ರಚಿಸಿಕೊಳ್ಳಲಿ. ಇವರು ಅಂಥದೊಂದು ತಾಲೀಮನ್ನು ನಡೆಸಬೇಕಾದ ಅಗತ್ಯವಿದೆ. ಇಲ್ಲಿ ಸಂದ ಮೇಲೆ ಅಲ್ಲಿಯೂ ನಿಸ್ಸಂಶಯವಾಗಿ ಸಲ್ಲುವರು. ಹಿಂದೂ ಜಾತಿಗಳ ನಡುವೆ ಮತ್ತು ಹಿಂದೂ ಮಠಗಳ ನಡುವೆ ಇರುವ ತಾರತಮ್ಯ, ಅಸಮಾನತೆಯನ್ನು ತೊಲಗಿಸದೇ ಸಮಾನ ಹಿಂದೂ ಕಾನೂನಿನ ಕನಸು ಕಂಡರೆ ಅದು ಗಗನಕುಸುಮವಾಗುತ್ತದೆ.

(ಲೇಖಕರು ಸಹ ಪ್ರಾಧ್ಯಾಪಕರು, ಆದಿಚುಂಚನಗಿರಿ ವಿಶ್ವವಿದ್ಯಾಲಯ)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅಪಸ್ವರ ಸಲ್ಲದು

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪ್ರಯಾಗ್‌ರಾಜ್ ಕುಂಭಮೇಳದ ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಿದ್ದಕ್ಕೆ ಹಿರಿಯ ಕಾಂಗ್ರೆಸ್ಸಿಗರೊಬ್ಬರು ''ಗಂಗೆಯಲ್ಲಿ ಮಿಂದರೆ ಬಡತನ ನಿವಾರಣೆಯಾಗುತ್ತಾ? ಗಂಗಾಸ್ನಾನವು ಹೊಟ್ಟೆಯನ್ನು ತುಂಬಿಸುತ್ತಾ'' ಎಂದು ಟೀಕಿಸಿರುವುದಾಗಿ ವರದಿಯಾಗಿದೆ. ಈ ಟೀಕೆಯು ಪ್ರಜ್ಞಾವಂತರನ್ನು ಮಾತ್ರವಲ್ಲದೆ ಜನಸಾಮಾನ್ಯರನ್ನೂ ನೋಯಿಸಿದೆ ಎನ್ನಲಡ್ಡಿಯಿಲ್ಲ. ನಂಬಿಕೆಯ ಪ್ರತೀಕವಾಗಿರುವ ಮಹಾಕುಂಭ ಸ್ನಾನವನ್ನು ಅಪಹಾಸ್ಯ ಮಾಡುವುದು ಖಂಡನೀಯ. ಕಾಂಗ್ರೆಸ್ ಪಕ್ಷದವರು ಅವಕಾಶ ದೊರಕಿದಾಗೆಲ್ಲಾ ಹಿಂದೂಗಳ ಭಾವನೆಯನ್ನು ಘಾಸಿಗೊಳಿಸುವುದು ಇತ್ತೀಚೆಗೆ ತೀರಾ ಸಾಮಾನ್ಯವಾಗಿದೆ. ತಮ್ಮ ಸೆಕ್ಯುಲರ್ ಧೋರಣೆಯನ್ನು ಹೊರಜಗತ್ತಿಗೆ ತೋರ್ಪಡಿಸಿಕೊಳ್ಳಲು ಹಿಂದೂಗಳ ನಂಬಿಕೆಯನ್ನು ಹೀಗೆ ಟೀಕಿಸಬೇಕೇ?

ಸದರಿ ನಾಯಕರು ತಮ್ಮ ಮಾತಿಗೆ ವಿಷಾದವನ್ನು ವ್ಯಕ್ತಪಡಿಸಿರಬಹುದು, ಆದರೆ ಅಷ್ಟು ಹೊತ್ತಿಗೆ ಅದು ಉಂಟುಮಾಡಿದ್ದ ನೋವನ್ನು ಅದು ಶಮನಗೊಳಿಸುವುದೇ? ಟೀಕೆ ಮತ್ತು ವಿಮರ್ಶೆಗಳು ಪ್ರಜಾಪ್ರಭುತ್ವದ ಸತ್ವಯುತ ಅಂಗಭಾಗಗಳು ಎಂಬುದರಲ್ಲಿ ಎರಡು ಮಾತಿಲ್ಲ; ಆದರೆ ಅವು ರಚನಾತ್ಮಕವಾಗಿರಬೇಕೇ ಹೊರತು ಒಬ್ಬರನ್ನು ವಿನಾಕಾರಣ ನೋಯಿಸುವಂತಿರಬಾರದು. ಇಡೀ ದೇಶವೇ ಮಹಾಕುಂಭ ಮೇಳವನ್ನು ಸಂಭ್ರಮಿಸುತ್ತಿರುವಾಗ ಇಂಥ ಅಡ್ಡಮಾತು, ಅಪಸ್ವರಗಳು ಹೊಮ್ಮಬಾರದಿತ್ತು.

- ರಮಾನಂದ ಎಸ್., ಬೆಂಗಳೂರು

ಸೌಲಭ್ಯ ಕಲ್ಪಿಸಿ

ರೈಲ್ವೆ ಇಲಾಖೆಯು ಸಾಕಷ್ಟು ಹಿಂದೆ, 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಪ್ರಯಾಣದ ದರದಲ್ಲಿ ಶೇ.30ರಷ್ಟು ರಿಯಾಯಿತಿ ನೀಡುತ್ತಿತ್ತು. ಇದರಿಂದ ಬಹಳಷ್ಟು ಮಂದಿಗೆ ಪ್ರಯೋಜನವಾಗಿತ್ತು. ಆದರೆ, ಮೂರು ವರ್ಷಗಳ ಹಿಂದೆ ದೇಶದಲ್ಲಿ ಕೋವಿಡ್ ಮಹಾಮಾರಿ ವ್ಯಾಪಕವಾಗಿ ಹರಡಿದ ನಂತರ, ಹಿರಿಯ ನಾಗರಿಕರು ಓಡಾಡುವುದನ್ನು ಸ್ವಲ್ಪ ಮಟ್ಟಿಗಾದರೂ ತಡೆಯಲು ಈ ರಿಯಾಯಿತಿಯನ್ನು ವಾಪಸ್ ಪಡೆಯಲಾಗಿದೆ ಎಂದು ಇಲಾಖೆಯು ಪ್ರಕಟಣೆ ಹೊರಡಿಸಿತ್ತು.

ಆದರೀಗ ದೇಶದಲ್ಲಿ ಕೋವಿಡ್ ಸೋಂಕು ಹೆಚ್ಚು ಕಡಿಮೆ ಮರೆಯಾಗಿರುವುದರಿಂದ ಹಾಗೂ ರೈಲ್ವೆ ಇಲಾಖೆಗೆ ಸಾಕಷ್ಟು ಪ್ರಮಾಣದಲ್ಲಿ ಆದಾಯವು ಬರುತ್ತಿದ್ದು ಲಾಭದಾಯಕವಾಗಿ ನಡೆಯುತ್ತಿರುವುದರಿಂದ, ಹಿಂದೆ ಇದ್ದ ರಿಯಾಯಿತಿ ಸೌಲಭ್ಯವನ್ನು ಮತ್ತೆ ಶುರುಮಾಡುವುದರ ಜತೆಗೆ, ಅದರ ಪ್ರಮಾಣವನ್ನು ಶೇ.30ರಿಂದ 40ಕ್ಕೆ ಹೆಚ್ಚಿಸಿ ಹಿರಿಯ ನಾಗರಿಕರಿಗೆ ಅನುಕೂಲ ಮಾಡಿಕೊಡುವುದರ ಕಡೆಗೆ ಇಲಾಖೆ ಗಮನ ಹರಿಸಲಿ ಎಂದು ಕೋರಿಕೆ.

- ಬೂಕನಕೆರೆ ವಿಜೇಂದ್ರ, ಮೈಸೂರು

ಭಟ್ಟರ್ ಸ್ಕಾಚ್

- **ಬೆಂ.ಮು.ಮಾರುತಿ, ಬೆಂಗಳೂರು**
  ಭಟ್ರೇ, ಪ್ರಕಾಶ ರಾಜ್ ಕುಂಭಮೇಳದಲ್ಲಿ ಡುಬುಕಿ ಹಾಕಿದರೆ ಏನು ಹೆಡ್‌ಲೈನ್ ಕೊಡಬಹುದು?
  – ಪ್ರಯಾಗರಾಜ್‌ದಲ್ಲಿ ಪ್ರಕಾಶ ರಾಜ್!
- **ಚಂದ್ರಶೇಖರ ನಾಗೂರ, (ಇಮೇಲ್ ಮೂಲಕ)**
  ಭಟ್ರೇ, 'ವಾಣಿ'ಗೆ 18 ವರ್ಷ ತುಂಬಿದ ಮೇಲೆ ಪ್ರಪೋಸ್ ಮಾಡಬಹುದಾ?
  – ನೀನು ಪ್ರಪೋಸ್ ಮಾಡಿ, ಮದುವೆಯಾಗೋ ಹೊತ್ತಿಗೆ ಅವಳು ನಾಲ್ಕು ಹೆತ್ತಿರ್ತಾಳೆ!
- **ಕಿಟ್ಟಿ, ಸಂಜಯನಗರ**
  ಭಟ್ರೇ, ಶ್ರೀನಗರ ಕಿಟ್ಟಿಯಂತೆ ಮಿಂಚುವ ಬಯಕೆ. ದಾರಿ ತೋರಿ ಗುರುಗಳೇ?
  – ಮೊದಲು ಸಂಜಯನಗರದಿಂದ ಶ್ರೀನಗರಕ್ಕೆ ಮನೆ ಬದಲಿಸು!
- **ಶೀಲಾ ಒಂಟಿಕೊಪ್ಪಲು, ಮೈಸೂರು**
  ಭಟ್ರೇ, ದೇವರು ಪ್ರತ್ಯಕ್ಷನಾದರೆ ಏನು ಕೇಳಲಿ?
  – ಆತನಿಗೆ ಕೊಡಲು ಸಾಧ್ಯವಾಗಿರುವುದನ್ನು!
- **ವಿರೂಪಾಕ್ಷ ಶಾಸ್ತ್ರೀ, ನಂಜನಗೂಡು**
  ಭಟ್ರೇ, ನನ್ನ ಮಿತ್ರ ಬಿಎಸ್ಸೆನ್ನೆಲ್ ಉದ್ಯೋಗಿಯಾಗಿದ್ದೂ ನನ್ನ ಕರೆಗಳನ್ನು ಎತ್ತುತ್ತಿಲ್ಲವಲ್ಲ?
  – ಸಚಿವ ಮಂಕಾಳ ವೈದ್ಯನ ಸಂಬಂಧಿ ಇದ್ದಿರಬಹುದು!
- **ನರಹರಿ ಆಚಾರ್ಯ, ಹೊಸಪೇಟೆ**
  ಮಾಡಬಾರದ್ದನ್ನು ಮಾಡಿದರೆ ಏನಾಗುತ್ತೆ ಭಟ್ರೇ?
  – ಆಗಬಾರದ್ದು ಆಗುತ್ತೆ ಅಷ್ಟೇ!
- **ಶ್ರೀರಾಮ ವಿ.ಪಿ.,(ಇಮೇಲ್ ಮೂಲಕ)**
  ಭಟ್ರೇ, ಈ ಕಾಲದ ಹುಶಾರಿ ಹುಡುಗರು ಮದುವೆ ನಂತರದ ಮಾತುಗಳನ್ನು ಮದುವೆ ಮುಂಚೆಯೇ ಪ್ರಸ್ತಾಪಿಸುತ್ತಾರಲ್ಲ?
  – ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕು ಅಂತ ಏನಾದರು ಹೇಳಿದ್ರಾ?
- **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
  ಭಟ್ರೇ, ಖುಷಿ ದಾಂಪತ್ಯದ ರಹಸ್ಯವೇನು?
  – ಅದು ನಿಗೂಢ ರಹಸ್ಯ!
- **ಶಾರದಾ ಭಟ್, ಪುತ್ತೂರು**
  ಭಟ್ರೇ, ಮದುವೆಯಾಗುವುದರ ಒಂದು ಲಾಭ ಏನು?
  – ತಪ್ಪುಗಳನ್ನು ಗಂಡನ ಮೇಲೆ ಹಾಕಬಹುದಲ್ಲ?!
- **ರಾಜೇಶ ಕುಲಕರ್ಣಿ, ಧಾರವಾಡ**
  ಭಟ್ರೇ, ನನ್ನ ಅಳಿಯನಿಗೆ ಅವನ ಮ್ಯಾರೇಜ್ ಆ್ಯನಿವರ್ಸರಿಗೆ ಯಾವ ಶುಭಾಶಯ ಕಳಿಸಲಿ?
  – ಸಾರಿ, ನೋ ರಿಟರ್ನ್!

ಸಾಲಭಾರ, ಸಾಯ ಬಾರಾ ಆಗಬಾರದು

ಎಂಎಫ್‌ಸಿಗಳಿಂದ ಕಿರು ಸಾಲ ಪಡೆದು ಜೀವನವನ್ನು ಬೆಳಗಿಸಿಕೊಂಡ ಸಾವಿರಾರು ಕುಟುಂಬಗಳೂ ಇವೆ. ಆದರೆ ಆರ್ಥಿಕ ಸಾಕ್ಷರತೆಯ ಅರಿವಿಲ್ಲದ ಕುಟುಂಬಗಳು ಸಮಸ್ಯೆಯಲ್ಲಿ ಸಿಲುಕಿವೆ. ಅಧಿಕ ಬಡ್ಡಿಯ ಮರ್ಮ ತಿಳಿಯದೆ ತಮ್ಮ ಆರ್ಥಿಕ ಸಾಮರ್ಥ್ಯವನ್ನು ಮೀರಿ ಸಾಲ ಪಡೆದವರು, ಪಡೆದ ಸಾಲವನ್ನು ಸದುಪಯೋಗಪಡಿಸಿಕೊಳ್ಳದೇ ಆನ್‌ಲೈನ್ ಜೂಜು, ಲಾಟರಿ ಖರೀದಿಗೆ ಬಳಸಿದವರು, ಕುಡಿತದ ದಾಸರಾದವರು, ಕೌಟುಂಬಿಕ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದವರು ಸಾಲ ವಾಪಸ್ ನೀಡಲಾಗದೆ, ಅವಮಾನ ತಾಳಲಾರದೆ ತಲೆ ಮರೆಸಿಕೊಂಡು ಓಡಾಡುವ ಸನ್ನಿವೇಶ ನಿರ್ಮಾಣವಾಗಿದೆ.

ಲೋಕಮತ
ಲೋಕೇಶ್ ಕಾಯರ್ಗ
kaayarga@gmail.com

ಸಾಲವನ್ನು ಕೊಂಬಾಗ ಹಾಲೋಗರುಂಡಂತೆ, ಸಾಲಿಗರು ಕೊಂಡು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ!

ಸರ್ವಜ್ಞನ ಈ ವಚನವನ್ನು ಸಾಲಗಾರರು ಎಷ್ಟರ ಮಟ್ಟಿಗೆ ಅರ್ಥೈಸಿಕೊಂಡಿದ್ದಾರೋ ಗೊತ್ತಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಸಾಲಿಗರು ಈ ವಚನವನ್ನು ಅಕ್ಷರಶ: ಪಾಲಿಸಲು ಹೊರಟಿದ್ದಾರೆ. ಇವರು ಸಾಲವನ್ನು ಸಕಾಲಕ್ಕೆ ಹಿಂತಿರುಗಿಸದ ಸುಸ್ತಿದಾರರನ್ನು ಹಿಡಿದು ಮನಬಂದಂತೆ ಥಳಿಸಿದ್ದಾರೆ. ಮಹಿಳೆಯೊಬ್ಬರ ತಲೆ ಬೋಳಿಸಿದ್ದಾರೆ. ಬಾಣಂತಿ ಸಮೇತ ಕುಟುಂಬ ಸದಸ್ಯರನ್ನು ಮನೆಯಿಂದ ಹೊರ ದಬ್ಬಿದ್ದಾರೆ. ಕಳೆದ ಮೂರ್‍ನಾಲ್ಕು ವಾರಗಳಲ್ಲಿ ನಮ್ಮದೇ ರಾಜ್ಯದಲ್ಲಿ ನಡೆದ ಘಟನೆಗಳಿವು.

ಸಾಲದ ವಿಚಾರ ಬಂದಾಗ ನಮ್ಮ ಹಿರಿಯರು ಹಿಂದಿನಿಂದಲೂ ಎಚ್ಚರಿಕೆಯ ಮಾತುಗಳನ್ನು ಆಡುತ್ತಾ ಬಂದವರು. 'ಹಾಸಿಗೆ ಇದ್ದಷ್ಟೇ ಕಾಲು ಚಾಚು', 'ಕೂತು ತಿಂದರೆ ಕುಡಿಕೆ ಹೊನ್ನು ಸಾಲದು' ಇತ್ಯಾದಿ ಹತ್ತಾರು ಗಾದೆ ಮಾತುಗಳು ನಮ್ಮ ಹಿರಿಯರ ಜೀವನಾನುಭವದ ಸಾರವೂ ಹೌದು. ಆದರೆ 'ಸಾಲ ಮಾಡಿಯಾದರೂ ಗಡಿಗೆ ತುಪ್ಪ ತಿನ್ನು' ಎಂಬ ಚಾರ್ವಾಕ ಋಷಿ ಪರಂಪರೆಯೂ ನಮ್ಮದೇ. ನಾವೀಗ ಹಿರಿಯರ ವಿವೇಕದ ಮಾತುಗಳನ್ನು ಬಿಟ್ಟು, ದುಡ್ಡಿನ ವಿಚಾರದಲ್ಲಿ ಚಾರ್ವಾಕ ಪಂಥದ ಅನುಯಾಯಿಗಳಾಗಿದ್ದೇವೆ. ಮೈಕ್ರೋ ಫೈನಾನ್ಸ್ ಕಂಪನಿಗಳಿಂದ ಸಾಲದ ಪಡೆದ ರಾಜ್ಯದ ಏಳೆಂಟು ಮಂದಿ ಆತ್ಮಹತ್ಯೆಗೆ ಶರಣಾದ ಘಟನೆಯ ಒಳಹೊಕ್ಕು ನೋಡಿದರೆ ಇಲ್ಲಿ ಸಾಲವಷ್ಟೇ ಪ್ರಮುಖವಲ್ಲ. ಬದಲಾದ ನಮ್ಮ ಜೀವನಶೈಲಿ, ಮನೋಧರ್ಮ ಮತ್ತು ಅಭಿರುಚಿಗಳೂ ಈ ಸಾವಿನಲ್ಲಿ ತಳುಕು ಹಾಕಿಕೊಂಡಿವೆ.

ಕೇವಲ ಮೂರು ದಶಕಗಳ ಹಿಂದೆ ಸಾಲದ ಪಡೆಯುವುದೇ ಕಷ್ಟದ ಬಾಬ್ತು ಆಗಿತ್ತು. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಆರಂಕಿ ಮೊತ್ತದ ಸಾಲವಂತೂ ಶ್ರೀಮಂತರಿಗಷ್ಟೇ ಲಭ್ಯವಿದ್ದ ಸವಲತ್ತಾಗಿತ್ತು. ಬಡವರು ಬ್ಯಾಂಕ್‌ಗಳ ಸಮೀಪಕ್ಕೆ ಹೋಗಲು ಹೆದರುತ್ತಿದ್ದರು. ಇನ್ನು ಗ್ರಾಮೀಣ ಪತ್ತಿನ ಸಹಕಾರಿ ಸಂಘಗಳು ಬಡವರ ಪಾಲಿಗೆ ಅಕ್ಕಿ, ಗೋಧಿ, ಸೀಮೆಎಣ್ಣೆ ವಿತರಣೆಗಷ್ಟೇ ಸೀಮಿತವಾಗಿದ್ದವು. ಶ್ರೀಮಂತ ರೈತರೂ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ಪಡೆಯಬೇಕಾದರೆ ಸಾಕಷ್ಟು ಹೆಣಗಾಡಬೇಕಿತ್ತು. ಕೈಯಲ್ಲಿ ಹಣದ ಥೈಲಿ ಇಲ್ಲದ ಆ ದಿನಗಳಲ್ಲಿ ನಮ್ಮ ಕನಸುಗಳೂ ಊಟ, ಬಟ್ಟೆಗೆ ಸೀಮಿತವಾಗಿದ್ದವು. ಇಂತಹ ಕಾಲ ಘಟ್ಟದಲ್ಲಿ ಸಾಲ ಮೇಳ ನಡೆಸಿ, ಒಂದೆರಡು ಸಾವಿರ ರು. ಸಾಲ ಕೊಡಿಸಿದ ಅಂದಿನ ಸಹಾಯಕ ಹಣಕಾಸು ಸಚಿವ ಜನಾರ್ದನ ಪೂಜಾರಿ ಬಡವರ ಪಾಲಿನ ಹೀರೋ ಆಗಿದ್ದರು. ಪೂಜಾರಿ ಕಾರಣದಿಂದ ಬ್ಯಾಂಕಿಂಗ್ ವ್ಯವಸ್ಥೆಯೇ ಕುಸಿದಿದೆ ಎಂದು ಅಂದು ಹುಯಿಲೆಬ್ಬಿಸಲಾಗಿತ್ತು. ಆದರೆ ಪೂಜಾರಿ ಕಾರಣದಿಂದ ರೈತರು, ಬಡವರು ಅಂದು ಬ್ಯಾಂಕ್ ಮೆಟ್ಟಿಲು ಏರಿದ್ದು ಸುಳ್ಳಲ್ಲ.

ಬದಲಾದ ಸಾಲ ವ್ಯವಸ್ಥೆ

ಇಂದು ಅಂದಿನಂತಿಲ್ಲ. ಉದಾರೀಕರಣದ ಕೃಪೆಯೋ, ಕಾಲದ ಮಹಿಮೆಯೋ ಗೊತ್ತಿಲ್ಲ. ಈಗ ಯಾರು ಬೇಕಿದ್ದರೂ ಸಾಲ ಪಡೆಯಬಹುದು. ದಿನಕ್ಕೆ ಹತ್ತಾರು ಸಲ ನಿಮ್ಮ ಮೊಬೈಲ್‌ಗೆ ಕರೆ ಮಾಡಿ ಸಾಲ ಬೇಕೇ ಎಂದು ಕೇಳುವವರಿದ್ದಾರೆ. ಮೊಬೈಲ್‌ನಲ್ಲಿ ಆ್ಯಪ್ ಓಪನ್ ಮಾಡಿ ಫಟಾಪಟ್ ದುಡ್ಡು ಪಡೆದುಕೊಂಡು ರಮ್ಮಿ ಆಡಬಹುದು. ಕ್ರೆಡಿಟ್ ಕಾರ್ಡ್ ಉಜ್ಜಿಯೂ ಸಾಲ ಎತ್ತಬಹುದು. ಕೈಯಲ್ಲಿ ದುಡ್ಡಿಲ್ಲದಿದ್ದರೂ ಪ್ರಾಜೆಕ್ಟ್ ರೆಡಿ ಮಾಡಿಕೊಂಡು ಮುದ್ರಾ ಹೆಸರಿನಲ್ಲಿ ಕೋಟಿಗೆ ಮೀರಿದ ಸಾಲಕ್ಕೆ ಅರ್ಜಿ ಸಲ್ಲಿಸಬಹುದು. ಮನೆ ಸಾಲ, ವಾಹನ ಸಾಲ, ವೈಯಕ್ತಿಕ ಸಾಲಗಳ ಜೋಳಿಗೆ ತುಂಬಲು ನೂರೆಂಟು ಬ್ಯಾಂಕುಗಳಿವೆ. ಪಹಣಿಯೊಂದಿದ್ದರೆ (ಆರ್‌ಟಿಸಿ) ಸಾಕು, ಕಿಸಾನ್ ಕ್ರೆಡಿಟ್ ಹೆಸರಿನಲ್ಲಿ ನಮ್ಮ ಗ್ರಾಮೀಣ ಪತ್ತಿನ ಸಹಕಾರ ಸಂಘಗಳು, ಬ್ಯಾಂಕುಗಳು ಕೂಡ 2 ಲಕ್ಷ ರು. ತನಕ ಬಡ್ಡಿ ರಹಿತ ಬೆಳೆಸಾಲ ನೀಡುತ್ತವೆ. ಸ್ವಯಂ ಸೇವಾ ಸಂಘಗಳನ್ನು ಕಟ್ಟಿಕೊಂಡು ಮಹಿಳೆಯರೂ ಬಡ್ಡಿ ರಹಿತ ಸಾಲ ಪಡೆಯಬಹುದು. ಇದಾವುದೂ ಸಿಗದೇ ಹೋದರೆ ಮೀಟರ್ ಬಡ್ಡಿಯಲ್ಲಿ ದುಡ್ಡು ಕೊಡುವ ಕುಳಗಳಿದ್ದಾರೆ!

ಇತ್ತೀಚಿನ ವರ್ಷಗಳಲ್ಲಿ ಇದಕ್ಕೆ ಹೊಸ ಸೇರ್ಪಡೆ ಮೈಕ್ರೋ ಫೈನಾನ್ಸ್ ಕಂಪನಿಗಳು. ಇವು ಹೊಸದೇನೂ ಅಲ್ಲ. ಗ್ರಾಮೀಣ ಭಾಗದ ಬಡವರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ 80ರ ದಶಕದಲ್ಲಿಯೇ ಈ ಬ್ಯಾಂಕುಗಳಿಗೆ ಚಾಲನೆ ನೀಡಲಾಗಿತ್ತು. ಗ್ರಾಮೀಣ ಸ್ವಸಹಾಯ ಗುಂಪುಗಳಿಗೆ ನೆರವಾಗುವ ದೃಷ್ಟಿಯಿಂದ ನಬಾರ್ಡ್ ಇದಕ್ಕೆ ಸಹಯೋಗ ನೀಡಿತ್ತು. ಸದ್ಯ 3 ಲಕ್ಷ ರು. ಮಿತಿಯಲ್ಲಿ ಸುಲಭ ಷರತ್ತುಗಳಲ್ಲಿ ಸಾಲ ನೀಡಲು ಈ ಬ್ಯಾಂಕುಗಳಿಗೆ ಆರ್‌ಬಿಐ ಅವಕಾಶ ನೀಡಿದೆ. ಆದರೆ 'ಸುಲಭ' ಸಾಲವೇ ಈಗ ಜನರ ಪಾಲಿಗೆ ಶೂಲವಾಗಿ ಪರಿಣಮಿಸಿದೆ.

10 ವರ್ಷಗಳ ಹಿಂದೆ ಬೆರಳೆಣಿಕೆಯಷ್ಟಿದ್ದ ಎಂಎಫ್‌ಸಿಗಳ ಸಂಖ್ಯೆ ಈಗ 250 ದಾಟಿವೆ ಎಂದರೆ ಇವುಗಳ ಜನಪ್ರಿಯತೆಯನ್ನು ಅರ್ಥ ಮಾಡಿಕೊಳ್ಳಬಹುದು. ಇದಕ್ಕೆ ಕಾರಣ ಮತ್ತೇನಿಲ್ಲ. ಇವು ನೀಡುವ ಸಾಲಕ್ಕೆ ಜಾಮೀನುದಾರರು ಬೇಕಿಲ್ಲ. ಸಿಬಿಲ್ ರೇಟಿಂಗ್ ಗೊಡವೆ ಇಲ್ಲ. ಕೇವಲ ಆಧಾರ್ ಕಾರ್ಡ್, ವೋಟರ್ ಐಡಿ ಕಾರ್ಡ್ ಪಡೆದು ಇವು ಸಾಲ ನೀಡುತ್ತವೆ. ಸಾಲ ಪಡೆಯಲು ಜಾಮೀನು ಹೊಂದಿಸಲು ಸಾಧ್ಯವಾಗದವರಿಗೆ, ಕೃಷಿ ಭೂಮಿ ಇಲ್ಲದ ಬಡವರಿಗೆ, ಕಿರಾಣಿ ಅಂಗಡಿದಾರರಿಗೆ, ತರಕಾರಿ ವ್ಯಾಪಾರಸ್ಥರಿಗೆ, ಮನೆಗೆಲಸ ಮಾಡಿ ಜೀವನ ನಿರ್ವಹಿಸುವ ಮಹಿಳೆಯರಿಗೆ ಈ ಕಂಪನಿಗಳ ಸಾಲ ಆಕರ್ಷಕವಾಗಿ ಕಂಡಿದ್ದರೆ ಆಶ್ಚರ್ಯವೇನೂ ಇಲ್ಲ.

ರಾಜ್ಯದಲ್ಲಿ ಮುಖ್ಯವಾಗಿ ನಮ್ಮ ಮಹಿಳಾ ಸ್ವಸಹಾಯ ಸಂಘಗಳು ಈ ಬ್ಯಾಂಕುಗಳಲ್ಲಿ ಸಾಲ ಪಡೆಯಲು ಮುಗಿಬಿದ್ದಿವೆ. ಕಾರಣ ಒಂದಷ್ಟು ದಾಖಲೆಗಳು ಕಡಿಮೆ ಬಿದ್ದರೂ ಇವು ಸಾಲ ನಿರಾಕರಿಸುವುದಿಲ್ಲ. ಸದ್ಯ ದೇಶದಲ್ಲಿ ಈ ಬ್ಯಾಂಕುಗಳಿಂದ ಸಾಲ ಪಡೆಯುವ ಸ್ವಸಂಘಗಳ ಸಂಖ್ಯೆಯೇ ಒಂದೂವರೆ ಕೋಟಿಯಷ್ಟಿದೆ. ಈ ಪೈಕಿ ಅರ್ಧದಷ್ಟು ನಮ್ಮ ರಾಜ್ಯದಲ್ಲಿವೆ!. ಅಂದರೆ ನಮ್ಮ ರಾಜ್ಯದ ಎಂಎಫ್‌ಸಿ ಗ್ರಾಹಕರಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಾಲದ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಶಿಕ್ಷಕಿ ಸೇರಿದಂತೆ ಮಹಿಳೆಯರೂ ಸೇರಿರುವುದು ಗಮನಾರ್ಹ.

ಸಾಲಗಾರರನ್ನು ಮಾತ್ರವಲ್ಲ ಹೂಡಿಕೆದಾರರನ್ನೂ ಈ ಬ್ಯಾಂಕುಗಳು ಹೆಚ್ಚಿನ ಸಂಖ್ಯೆಯಲ್ಲಿ ಸೆಳೆದಿವೆ. ರಾಷ್ಟ್ರೀಕೃತ ಬ್ಯಾಂಕುಗಳು ಠೇವಣಿಗಳಿಗೆ ಗರಿಷ್ಠ 7.5 ರಷ್ಟು ಬಡ್ಡಿ ನೀಡಿದರೆ. ಈ ಕಿರು ಸಾಲ ಬ್ಯಾಂಕುಗಳು ಶೇ. 8ರಿಂದ 9ರ ತನಕವೂ ಬಡ್ಡಿ ನೀಡಲು ಮುಂದಾಗಿವೆ. ರಾಷ್ಟ್ರೀಕೃತ ಬ್ಯಾಂಕುಗಳು ಉಳಿತಾಯ/ ಹೂಡಿಕೆ ಯೋಜನೆಗಳಿಗೆ ಗ್ರಾಹಕರಿಲ್ಲದೆ ಪರದಾಡುತ್ತಿದ್ದರೆ, ಈ ಬ್ಯಾಂಕುಗಳಲ್ಲಿ ಸರದಿ ಸಾಲಿನಲ್ಲಿ ನಿಂತು ಹೂಡಿಕೆ ಮಾಡುವವರಿದ್ದಾರೆ. ಇಲ್ಲಿನ ಲಾಭ ಮತ್ತು ಅಗಾಧ ಗ್ರಾಹಕರ ಸಂಖ್ಯೆಯನ್ನು ನೋಡಿ ಇಂಡಸ್ ಬ್ಯಾಂಕ್, ಐಡಿಎಫ್‌ಸಿ ಸೇರಿದಂತೆ ಹಲವು ಖಾಸಗಿ ಬ್ಯಾಂಕುಗಳು, ಏರ್‌ಟೆಲ್, ಬಜಾಜ್ ಸಮೂಹ ಸೇರಿದಂತೆ ಹಲವು ಕಾರ್ಪೋರೇಟ್ ಕಂಪನಿಗಳು ಮೈಕ್ರೋ ಫೈನಾನ್ಸ್ ವಲಯಕ್ಕೆ ಕಾಲಿಟ್ಟಿವೆ.

ಬಂಧನ್ ಬ್ಯಾಂಕ್, ಪೇಟಿಎಂ ಬ್ಯಾಂಕ್, ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್, ಇಕ್ವಿಟಾಸ್ ಸ್ಮಾಲ್ ಬ್ಯಾಂಕ್, ಆರ್‌ಬಿಎಲ್ ಬ್ಯಾಂಕ್, ಭಾರತ್‌ಪೇ, ಬಿಎಸ್‌ಎಸ್ ಮೈಕ್ರೋ ಫೈನಾನ್ಸ್ ಮುಂತಾದ ಹೆಸರಿನಲ್ಲಿ ನಗರ ಮಾತ್ರವಲ್ಲ ತಾಲ್ಲೂಕು, ಹೋಬಳಿ ಮಟ್ಟದಲ್ಲೂ ಈಗ ಎಂಎಫ್‌ಸಿ ಶಾಖೆಗಳನ್ನು ಕಾಣಬಹುದು. ಎಸ್‌ಬಿಐ, ಐಸಿಐಸಿಐನಂತಹ ದೊಡ್ಡ ಮಟ್ಟದ ಬ್ಯಾಂಕುಗಳು ನಡೆಸುವ ಎಲ್ಲ ರೀತಿಯ ಬ್ಯಾಂಕಿಂಗ್ ವಹಿವಾಟುಗಳನ್ನು ಈ ಬ್ಯಾಂಕುಗಳು ಕೂಡ ನಡೆಸುತ್ತಿವೆ. ಖಾಸಗಿ ಬ್ಯಾಂಕ್‌ಗಳಾದ ಕಾರಣ ನಗುಮುಖದ ಸೇವೆಯೂ ಲಭ್ಯ. ಹೀಗಾಗಿ ಗ್ರಾಹಕರೂ ಇವುಗಳತ್ತ ಆಕರ್ಷಿತರಾಗಿದ್ದಾರೆ.

ಬ್ಯಾಂಕುಗಳಿಗೂ ಸಾಲಭಾರ

ಆದರೆ ಅತಿಯಾದರೆ ಅಮೃತವೂ ವಿಷ ಎಂಬ ಮಾತು ಈ ಮೈಕ್ರೋ ಫೈನಾನ್ಸ್ ಕಂಪನಿಗಳ ಮಟ್ಟಿಗೂ ನಿಜವಾಗಿದೆ. ಪೈಪೋಟಿಗೆ ಬಿದ್ದು, ಬಣ್ಣದ ಮಾತುಗಳಿಂದ, ಆಕರ್ಷಕ ಜಾಹೀರಾತುಗಳಿಂದ ಗ್ರಾಹಕರನ್ನು ಸೆಳೆದು ಉದಾರವಾಗಿ ಸಾಲ ನೀಡಿದ ಎಂಎಫ್‌ಸಿಗಳು ಈಗ ಸಾಲಭಾರದ ಸಂಕಷ್ಟದಲ್ಲಿವೆ. ಕೆಲವು ಬ್ಯಾಂಕ್‌ಗಳು 3 ಲಕ್ಷ ರು. ಗರಿಷ್ಠ ಮಿತಿಯ ಬದಲು ಅಪ್ಪ, ಮಗ, ಅತ್ತೆ, ಸೊಸೆ, ಮಗಳ ಹೆಸರಿನಲ್ಲಿ 10 ಲಕ್ಷಕ್ಕಿಂತಲೂ ಹೆಚ್ಚು ಸಾಲ ನೀಡಿ ವಸೂಲಿ ಸಮಸ್ಯೆ ಎದುರಿಸುತ್ತಿವೆ. ಇತ್ತೀಚೆಗೆ ಪ್ರಕಟವಾದ ಈ ಬ್ಯಾಂಕುಗಳ ತ್ರೈಮಾಸಿಕ ಫಲಿತಾಂಶದಲ್ಲಿ ಹೆಚ್ಚಿನ ಬ್ಯಾಂಕುಗಳ ಲಾಭಾಂಶ ಗಣನೀಯವಾಗಿ ಕುಸಿತ ಕಂಡಿದೆ. ಉದಾಹರಣೆಗೆ ಆರ್‌ಬಿಎಲ್ ಬ್ಯಾಂಕಿನ ಲಾಭಾಂಶ ಶೇ. 86ರಷ್ಟು ಕುಸಿತ ಕಂಡಿದೆ. ಆರ್‌ಬಿಐ ಕೂಡ ಕೆಲವು ಎಂಎಫ್‌ಸಿಗಳ ಸಾಲ ಹಂಚಿಕೆಗೆ ತಡೆ ನೀಡಿದೆ.

ಸಾಲಗಳ ವಸೂಲಿ ಈ ಬ್ಯಾಂಕ್‌ಗಳಿಗೆ ಎಲ್ಲಕ್ಕಿಂತ ಮುಖ್ಯ ಸಮಸ್ಯೆಯಾಗಿದೆ. ಕೇವಲ ಆಧಾರ್ ಕಾರ್ಡ್ ಮತ್ತು ವೋಟರ್ ಐಡಿ ಪಡೆದು ಸಾಲ ನೀಡಿರುವ ಬ್ಯಾಂಕುಗಳು ಸಾಲ ವಸೂಲಿಗೆ ಆಧಾರವಿಲ್ಲದೆ ಬಲವಂತದ ಕ್ರಮಕ್ಕೆ ಇಳಿದಿವೆ. ಈಗ ನಡೆಯುತ್ತಿರುವ ವಿದ್ಯಮಾನಕ್ಕೂ, ಮೀಟರ್ ಬಡ್ಡಿ ವ್ಯವಹಾರಕ್ಕೂ ಹೆಚ್ಚೇನೂ ವ್ಯತ್ಯಾಸವಿಲ್ಲ. ಹಳ್ಳಿ ಮತ್ತು ನಗರಗಳಲ್ಲಿ ರೌಡಿಗಳನ್ನು ಇಟ್ಟುಕೊಂಡು ಬಡ್ಡಿ ವ್ಯವಹಾರ ಮಾಡುವವರು ಹಿಂದೆಯೂ ಇದ್ದರು. ಈಗಲೂ ಇದ್ದಾರೆ. ಈ ಬ್ಯಾಂಕುಗಳು ಈಗ ಅವರದೇ ದಾರಿಯನ್ನು ಹಿಡಿದಿವೆ. ಕೆಲವು ಬ್ಯಾಂಕುಗಳು ಸಾಲ ವಸೂಲಿ ಪ್ರಕ್ರಿಯೆಯನ್ನು ಖಾಸಗಿ ಏಜೆನ್ಸಿಗಳಿಗೆ ಒಪ್ಪಿಸಿವೆ. ಈ ಖಾಸಗಿ ಏಜೆನ್ಸಿಗಳು ವೃತ್ತಿಪರ ರೌಡಿಗಳನ್ನು ಇಟ್ಟುಕೊಂಡೇ ವಸೂಲಿಗೆ ಮುಂದಾಗಿವೆ. ಬ್ಯಾಂಕಿನ ಕೆಲವು ಪ್ರತಿನಿಧಿಗಳು ಬೆಳ್ಳಂಬೆಳಗ್ಗೆ ಇಲ್ಲವೇ ರಾತ್ರಿ ಹೊತ್ತಿಗೆ ದಿಢೀರ್ ಆಗಿ ಮನೆಯ ಎದುರು ಜಮಾಯಿಸಿ ಅಕ್ಕ ಪಕ್ಕದ ಮನೆಯವರಿಗೆ ಕೇಳಿಸುವಂತೆ ಸಾಲ ವಸೂಲಿ ಹೆಸರಿನಲ್ಲಿ ಗದ್ದಲ ಎಬ್ಬಿಸುತ್ತಿದ್ದಾರೆ. ಮರ್ಯಾದೆಗೆ ಅಂಜಿ ಸಾಲ ವಾಪಸ್ ನೀಡಲಿ ಎನ್ನುವುದು ಇವರ ಉದ್ದೇಶ. ಆದರೆ ಇದರಿಂದ ಅವಮಾನಕ್ಕೀಡಾದವರು ಆತ್ಮಹತ್ಯೆಯ ದಾರಿ ತುಳಿಯುತ್ತಿದ್ದಾರೆ.

ಆರ್ಥಿಕ ಸಾಕ್ಷರತೆಯ ಕೊರತೆ

ಎಂಎಫ್‌ಸಿಗಳಿಂದ ಕಿರು ಸಾಲ ಪಡೆದು ಜೀವನವನ್ನು ಬೆಳಗಿಸಿಕೊಂಡ ಸಾವಿರಾರು ಕುಟುಂಬಗಳೂ ಇವೆ. ಆದರೆ ಆರ್ಥಿಕ ಸಾಕ್ಷರತೆಯ ಅರಿವಿಲ್ಲದ ಕುಟುಂಬಗಳು ಸಮಸ್ಯೆಯಲ್ಲಿ ಸಿಲುಕಿವೆ. ಅಧಿಕ ಬಡ್ಡಿಯ ಮರ್ಮ ತಿಳಿಯದೆ ತಮ್ಮ ಆರ್ಥಿಕ ಸಾಮರ್ಥ್ಯವನ್ನು ಮೀರಿ ಸಾಲ ಪಡೆದವರು, ಪಡೆದ ಸಾಲವನ್ನು ಸದುಪಯೋಗಪಡಿಸಿಕೊಳ್ಳದೇ ಆನ್‌ಲೈನ್ ಜೂಜು, ಲಾಟರಿ ಖರೀದಿಗೆ ಬಳಸಿದವರು, ಕುಡಿತದ ದಾಸರಾದವರು, ಕೌಟುಂಬಿಕ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದವರು ಸಾಲ ವಾಪಸ್ ನೀಡಲಾಗದೆ, ಅವಮಾನ ತಾಳಲಾರದೆ ತಲೆ ಮರೆಸಿಕೊಂಡು ಓಡಾಡುವ ಸನ್ನಿವೇಶ ನಿರ್ಮಾಣವಾಗಿದೆ. ದೋಖಾ ಉದ್ದೇಶದಿಂದಲೇ ಸಾಲ ಪಡೆದವರ ಸಂಖ್ಯೆಯೂ ಕಡಿಮೆ ಏನಿಲ್ಲ.

ಈ ಪ್ರಕರಣದಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳನ್ನು ಮಾತ್ರ ದೂರುವಂತಿಲ್ಲ. ಆರ್‌ಬಿಐ ಇದರಲ್ಲಿ ಪ್ರಮುಖ ದೋಷಿ. ನಬಾರ್ಡ್ ಪಾಲುದಾರಿಕೆಯಲ್ಲಿ ಗ್ರಾಮೀಣ ಆರ್ಥಿಕತೆಯನ್ನು ಉತ್ತೇಜಿಸುವ ದೃಷ್ಟಿಯಿಂದ ಎಂಎಫ್‌ಸಿಗಳಿಗೆ ಅನುಮತಿ ನೀಡಿದ ಆರ್‌ಬಿಐ ಈ ದಾರಿಯಿಂದ ಈಗ ಬಹುದೂರ ಸಾಗಿದೆ. ಈ ಕಂಪನಿಗಳು ಬ್ಯಾಂಕ್‌ಗಳಿಂದಲೇ ಶೇ. 14ರಷ್ಟು ಬಡ್ಡಿ ದರದಲ್ಲಿ ಸಾಲ ಪಡೆದು ಕಡುಬಡವರಿಗೆ ಶೇ.24ರಷ್ಟು ದರದಲ್ಲಿ ಸಾಲ ನೀಡುವುದರಲ್ಲಿ ಅರ್ಥವಿಲ್ಲ. ಎಂಎಫ್‌ಸಿಗಳು ಬ್ಯಾಂಕುಗಳಿಂದ ಪಡೆಯುವ ಸಾಲದ ಬಡ್ಡಿ ದರ ಮತ್ತು ಗ್ರಾಹಕರಿಗೆ ವಿಧಿಸುವ ಸಾಲದ ಬಡ್ಡಿ ದರದಲ್ಲಿ ಹಿಂದೆ ಇದ್ದ ನಿರ್ಬಂಧವನ್ನು ಆರ್‌ಬಿಐ ರದ್ದು ಮಾಡಿದ ಬಳಿಕ ಬ್ಯಾಂಕ್‌ಗಳ ಬಡ್ಡಿ ದರ ಮೀಟರ್ ಬಡ್ಡಿಯಂತಾಗಿದೆ.

ಮೈಕ್ರೋ ಫೈನಾನ್ಸ್ ಸಂಸ್ಥೆಗಳಲ್ಲಿ ಚಿನ್ನ ಅಡವಿಡುವವರ ಸಂಖ್ಯೆಯೂ ಅಧಿಕವಾಗಿದೆ. ಇತ್ತೀಚಿನ ವರದಿಗಳ ಪ್ರಕಾರ ಚಿನ್ನದ ಸಾಲದ ಸುಸ್ತಿ ಪ್ರಮಾಣವೂ ಒಂದೂವರೆ ಲಕ್ಷ ಕೋಟಿ ರು. ಮೀರಿದೆ. ತಮ್ಮ ಹಿರಿಯರು ವರ್ಷಗಳಿಂದ ಕಾಪಿಟ್ಟುಕೊಂಡಿದ್ದ ಚಿನ್ನದ ಒಡವೆಗಳನ್ನು ಬ್ಯಾಂಕಿನಲ್ಲಿಟ್ಟು ಸಾಲ ಪಡೆದವರು ಈ ಸಾಲ ತೀರಿಸಲಾಗದೆ ಪರಿತಪಿಸುತ್ತಿದ್ದಾರೆ. ಇನ್ನೊಂದೆಡೆ ಚಿನ್ನದ ಸಾಲ ನೀಡುವ ಕೇರಳ ಮೂಲದ ಕಂಪನಿಗಳ ಸಂಖ್ಯೆ ಮತ್ತು ಆದಾಯ ದುಪ್ಪಟ್ಟಾಗಿದೆ.

ಸಹಕಾರಿ ರಂಗವೇ ಮದ್ದು

ಗ್ರಾಮೀಣ ಭಾಗದ ಆರ್ಥಿಕತೆ ಉತ್ತೇಜನ ನೀಡಲು ಈಗಲೂ ಸಹಕಾರಿ ರಂಗವೇ ಅತ್ಯುತ್ತಮ ಆಯ್ಕೆ. ಗ್ರಾಮೀಣ ಪತ್ತಿನ ಸಹಕಾರ ಸಂಘಗಳಿಗೆ ನಬಾರ್ಡ್ ವತಿಯಿಂದ ಕಡಿಮೆ ದರದಲ್ಲಿ ಸಾಲ ಒದಗಿಸಿದರೆ, ಇವು ಆಯಾ ಪ್ರದೇಶದ ಜನರ ಅವಶ್ಯಕತೆಗಳನ್ನು ಈಡೇರಿಸಲು ಸಾಧ್ಯವಿದೆ. ಗ್ರಾಮಸ್ಥರ ಅವಶ್ಯಕತೆಗೆ ಅನುಗುಣವಾಗಿ ಈ ಸಹಕಾರಿ ಸಂಘಗಳು ಅಡಮಾನರಹಿತ ಸಾಲ ವಿತರಿಸಲು ನಿಯಮಗಳನ್ನು ರೂಪಿಸುವುದು ಕಷ್ಟದ ಕೆಲಸವೇನಲ್ಲ. ಇದರಿಂದ ಸಾಲದ ಸದುಪಯೋಗದ ಜತೆ ದುರುಪಯೋಗದ ಸಾಧ್ಯತೆಯನ್ನೂ ತಡೆಗಟ್ಟಬಹುದು.

ಗ್ರಾಮೀಣ ಸಹಕಾರಿ ಸಂಘಗಳನ್ನು ಬೆಳೆಸಬೇಕಾದ ಸರಕಾರಗಳು ಇವುಗಳನ್ನು ರಾಜಕೀಯಕ್ಕೆ ಬಳಸಿಕೊಂಡು ಈ ಕ್ಷೇತ್ರವನ್ನು ಕಲುಷಿತಗೊಳಿಸಿವೆ. ಕಡಿಮೆ ಬಡ್ಡಿಯಲ್ಲಿ ಬೆಳೆ ಸಾಲ, ಅಡಮಾನ ಸಾಲ ನೀಡುವ ಅವಕಾಶಗಳಿದ್ದರೂ ಸಂಘಗಳ ಬೊಕ್ಕಸ ಬರಿದಾಗಿದೆ. ಸರಕಾರ ನೀಡಬೇಕಾದ ಪರಿಹಾರ ಮೊತ್ತ ಇನ್ನೂ ತಲುಪಿಲ್ಲ. ಬೆಳೆ ಸಾಲ ಪ್ರಮಾಣವನ್ನು ಮೂರು ಲಕ್ಷಗಳಿಂದ ಐದು ಲಕ್ಷ ರು.ಗಳಿಗೆ ಏರಿಸುವ ಸಿಎಂ ಸಿದ್ದರಾಮಯ್ಯ ಅವರ ಬಜೆಟ್ ಘೋಷಣೆ ಇನ್ನೂ ಕಡತದಲ್ಲಿಯೇ ಉಳಿದಿದೆ. ಮೈಕ್ರೋ ಫೈನಾನ್ಸ್ ಕಂಪನಿಗಳು ಈಸ್ಟ್ ಇಂಡಿಯಾ ಕಂಪನಿಯಂತೆ ಗ್ರಾಮೀಣರ ದುಡ್ಡು ದೋಚುವ ಕಂಪನಿಗಳಾಗಬಾರದು. ಸದ್ಯದ ಮೈಕ್ರೋ ಫೈನಾನ್ಸ್ ಬಿಕ್ಕಟ್ಟಿಗೆ ಮ್ಯಾಕ್ರೋ ಲೆವೆಲ್ ಪರಿಹಾರಗಳನ್ನು ಚಿಂತಿಸಬೇಕಾಗಿದೆ.

ಮೈಕ್ರೊ ಫೈನಾನ್ಸ್ ಬಿಕ್ಕಟ್ಟು: ಜನ ಕಲಿಯಬೇಕಾದ ಪಾಠವೇನು?

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಕರ್ನಾಟಕದಲ್ಲಿ ಮೈಕ್ರೊ ಫೈನಾನ್ಸ್ ಕಂಪನಿಗಳು ಜನರಿಗೆ ಕೊಟ್ಟಿರುವ ಸಾಲದ ಒಟ್ಟು ಬಾಕಿ ಮೊತ್ತ 59,367 ಕೋಟಿ ರುಪಾಯಿಗಳಾಗಿದೆ. ಒಟ್ಟು ಖಾತೆಗಳ ಸಂಖ್ಯೆ 1 ಕೋಟಿ 9 ಲಕ್ಷದ 88 ಸಾವಿರದ 332. ರಾಜ್ಯದಲ್ಲಿ 31 ಮೈಕ್ರೊ ಫೈನಾನ್ಸ್ ಕಂಪನಿಗಳಿದ್ದು, ಅವುಗಳಿಗೆ 3,090 ಶಾಖೆಗಳಿವೆ. ಇನ್ನು ರಿಜಿಸ್ಟರ್ ಆಗಿರದ ಅನಧಿಕೃತ ಮೈಕ್ರೊ ಫೈನಾನ್ಸ್‌ಗಳೂ ಬಹಳಷ್ಟಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಸಾಲ ಮರುವಸೂಲಾತಿ ಏಜೆಂಟರ ದೌರ್ಜನ್ಯ, ಕಿರುಕುಳಕ್ಕೆ ಬೇಸತ್ತು ನಿಸ್ಸಹಾಯಕ ಸಾಲಗಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ, ಮನೆ, ಕುಟುಂಬ, ಊರನ್ನೇ ಬಿಟ್ಟು ಹೋಗುವ ಮನ ಕಲಕುವ ಪ್ರಕರಣಗಳು ಬೆಚ್ಚಿ ಬೀಳಿಸಿವೆ.

ಮೈಕ್ರೊ ಫೈನಾನ್ಸ್ ಕಂಪನಿಗಳು, ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಸಾಲ ಮರುವಸೂಲಾತಿಯನ್ನು ಹೇಗೆ ಮಾಡಬೇಕು ಮತ್ತು ಮಾಡಬಾರದು ಎಂಬುದರ ಬಗ್ಗೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಮಾರ್ಗದರ್ಶಿಯೂ ಇದೆ. ಹೀಗಿದ್ದರೂ, ಕಿರುಕುಳ ನಿಂತಿಲ್ಲ ಎಂಬುದು ಕಳವಳಕಾರಿ. ಆದ್ದರಿಂದ ಮೈಕ್ರೊ ಫೈನಾನ್ಸ್ ಕಂಪನಿ ಎಂದರೇನು? ಇವುಗಳ ಉದ್ದೇಶವೇನು? ಇಲ್ಲಿ ಸಾಲ ಸುಲಭವಾಗಿ ಏಕೆ ಸಿಗುತ್ತದೆ? ಇಲ್ಲೇಕೆ ಬಡ್ಡಿ ದರ ಭಾರಿ ಹೆಚ್ಚಾಗಿರುತ್ತದೆ? ಸಾಲ ಮರುವಸೂಲಾತಿಯಲ್ಲಿ ಕಿರುಕುಳ ಮಾಡುವುದೇಕೆ? ಮೈಕ್ರೊ ಫೈನಾನ್ಸ್ ಸಾಲ ಪಡೆಯುವುದಕ್ಕೆ ಮುನ್ನ ತಿಳಿದುಕೊಳ್ಳಬೇಕಾದ ಸಂಗತಿಗಳೇನು? ಎಂಬಿತ್ಯಾದಿ ಸಂಗತಿಗಳನ್ನು ಸಾಲಗಾರರು ಅರ್ಥ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಸಂಕಷ್ಟ ಕಟ್ಟಿಟ್ಟಬುತ್ತಿ. ಏಕೆಂದರೆ ಭಾರತದಲ್ಲಿ ಮೈಕ್ರೊ ಫೈನಾನ್ಸ್ ಇಂಡಸ್ಟ್ರಿಯ ಗಾತ್ರ ಸಣ್ಣದೇನಲ್ಲ. 2024ರ ಮಾರ್ಚ್ ವೇಳೆಗೆ 3.77 ಲಕ್ಷ ಕೋಟಿ ರುಪಾಯಿ ಮೌಲ್ಯದ ಸಾಲವನ್ನು ವಿತರಿಸಲಾಗಿದೆ. 6.6 ಕೋಟಿ ಸಾಲಗಾರರಿದ್ದಾರೆ.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ 2022ರಲ್ಲಿ ಮೈಕ್ರೊ ಫೈನಾನ್ಸ್ ಕಂಪನಿಗಳು, ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕ್‌ಗಳು ನೀಡುವ ಕಿರುಸಾಲಗಳ ಬಗ್ಗೆ ಮಾರ್ಗದರ್ಶಿಯನ್ನು ಪ್ರಕಟಿಸಿತ್ತು. ಪ್ರಶ್ನೋತ್ತರ ಮಾದರಿಯಲ್ಲಿರುವ ಮುಖ್ಯಾಂಶಗಳನ್ನು ನೋಡೋಣ.

- **ಮೈಕ್ರೊ ಫೈನಾನ್ಸ್ ಸಾಲ ಪಡೆಯಲು ಕುಟುಂಬದ ಎಲ್ಲರೂ ಕಡ್ಡಾಯವಾಗಿ ಸಾಲಗಾರರಾಗಬೇಕೆ?**

– ಕುಟುಂಬದ ಮಟ್ಟದಲ್ಲಿ ಆದಾಯ ಮತ್ತು ಋಣಭಾರವನ್ನು ಮೌಲ್ಯಮಾಪನ ಮಾಡಬೇಕಾದ ಅಗತ್ಯ ಇರುತ್ತದೆ. ಆದರೆ ಕುಟುಂಬದ ಒಬ್ಬ ಸದಸ್ಯ ಪಡೆಯುವ ಸಾಲಕ್ಕೆ ಇತರ ಸದಸ್ಯರನ್ನೂ ಸಾಲಗಾರರೆಂದು ಪರಿಗಣಿಸಬೇಕಾದ ಅಗತ್ಯ ಇಲ್ಲ.

- **ಮನೆಯಲ್ಲಿ ನಡೆಯುವ ಸಮಾರಂಭಗಳ ಖರ್ಚಿಗೆ, ಗ್ಯಾಜೆಟ್‌ಗಳ ಖರೀದಿಗೆ ಪಡೆಯುವ ಸಾಲವನ್ನು ಮೈಕ್ರೊ ಫೈನಾನ್ಸ್ ಸಾಲ ಎಂದು ಪರಿಗಣಿಸಬಹುದೇ?**

– ವಾರ್ಷಿಕ 3 ಲಕ್ಷ ರು.ಗಿಂತ ಕಡಿಮೆ ಆದಾಯ ಇರುವ ಕುಟುಂಬಗಳಿಗೆ ಅಡಮಾನ ರಹಿತವಾಗಿ ನೀಡುವ ಸಾಲಗಳನ್ನು ಮೈಕ್ರೊ ಫೈನಾನ್ಸ್ ಸಾಲ ಎನ್ನಲಾಗುತ್ತದೆ. ಬ್ಯಾಂಕಿಂಗ್ ಮಾರ್ಗದರ್ಶಿಗಳ ಪ್ರಕಾರ ಮೈಕ್ರೊ ಫೈನಾನ್ಸ್ ಕಂಪನಿಗಳು ತಾವು ನೀಡುವ ಸಾಲಕ್ಕೆ ಬಡ್ಡಿ ದರವನ್ನು ನಿಗದಿಪಡಿಸಬಹುದು ಹಾಗೂ ಪರಿಷ್ಕರಿಸಬಹುದು.

- **ಸಾಲಗಾರರಿಗೆ ಸಾಲ ಮರುವಸೂಲಾತಿ ಸಲುವಾಗಿ ಬೆಳಗ್ಗೆ 9 ಗಂಟೆಗೆ ಮೊದಲು ಹಾಗೂ ಸಂಜೆ 6 ಗಂಟೆಯ ಬಳಿಕ ಕರೆ ಮಾಡಬಹುದೇ?**

– ಸಾಲಗಾರರಿಗೆ ಸಾಲ ಮರುವಸೂಲಾತಿಗೆ ಸಂಬಂಧಿಸಿ ಬೆಳಗ್ಗೆ 9 ಗಂಟೆಗೆ ಮೊದಲು ಮತ್ತು ಸಂಜೆ 6 ಗಂಟೆಯ ಬಳಿಕ ಕರೆ ಮಾಡುವಂತಿಲ್ಲ, ಸಂಪರ್ಕಿಸುವಂತಿಲ್ಲ. ಒಂದು ವೇಳೆ ಮಾಡಿದರೆ ಅದು ಬಲವಂತದ ಕ್ರಮ ಎಂದು ಪರಿಗಣನೆಯಾಗುವುದು.

- **ಮೈಕ್ರೊ ಫೈನಾನ್ಸ್ ಸಾಲ ಪಡೆಯುವಾಗ ಸಾಲಗಾರರು ಗಮನಿಸಬೇಕಾದ ಸಂಗತಿಗಳೇನು?**

– ಮೊದಲನೆಯದಾಗಿ ಈ ಸಾಲ ಪಡೆಯುವಾಗ ಎಲ್ಲಿಯೂ ಯಾವುದೇ ಡೆಪಾಸಿಟ್ ಕೊಡಬೇಕಿಲ್ಲ. ಮಾರ್ಜಿನ್ ಬೇಡ, ಅಡಮಾನ ನೀಡಬೇಕಿಲ್ಲ. ಸಾಲದಾತರು ಸಾಲಗಾರರಿಗೆ ಅವರಿಗೆ ತಿಳಿದಿರುವ ಭಾಷೆಯಲ್ಲಿ ಲೋನ್ ಕಾರ್ಡ್ ನೀಡಬೇಕು. ಲೋನ್ ಕಾರ್ಡ್‌ನಲ್ಲಿ ಸಾಲದ ಷರತ್ತುಗಳನ್ನು ಸ್ಪಷ್ಟವಾಗಿ ದಾಖಲಿಸಬೇಕು. ಅಹವಾಲುಗಳ ಸಲ್ಲಿಕೆಗೆ ಯಾರನ್ನು ಸಂಪರ್ಕಿಸಬೇಕೆಂಬ ವಿವರ ಇರಬೇಕು. ಇದರಲ್ಲಿರುವ ಶುಲ್ಕಗಳನ್ನು ಮಾತ್ರ ಸಾಲಗಾರ ಕೊಡಬೇಕು. ಸಾಲವನ್ನು ಅವಧಿಗೆ ಮುನ್ನ ಮರುಪಾವತಿಸಿದರೆ ದಂಡ ಹಾಕುವಂತಿಲ್ಲ.

- **ಸಾಲಗಾರರು ಬಡ್ಡಿ ದರದ ಬಗ್ಗೆ ತಿಳಿಯುವುದು ಹೇಗೆ?**

– ಮೈಕ್ರೊ ಫೈನಾನ್ಸ್ ಸಾಲದ ಬಗ್ಗೆ ಕಂಪನಿಗಳು ಕನಿಷ್ಠ ಬಡ್ಡಿ ದರ, ಸರಾಸರಿ ಬಡ್ಡಿ ದರ ಮತ್ತು ಗರಿಷ್ಠ ಬಡ್ಡಿ ದರ ವಿವರವನ್ನು ಎಲ್ಲರಿಗೂ ಕಾಣಿಸುವಂತೆ ಕಡ್ಡಾಯವಾಗಿ ನೋಟಿಸ್ ಬೋರ್ಡ್ ಅಥವಾ ಫಲಕಗಳಲ್ಲಿ ತಮ್ಮೆಲ್ಲ ಕಚೇರಿಗಳಲ್ಲಿ ಪ್ರದರ್ಶಿಸಬೇಕು. ಕರಪತ್ರಗಳಲ್ಲಿ, ವೆಬ್‌ಸೈಟ್ ಇದ್ದರೆ ಅವುಗಳಲ್ಲಿ ತೋರಿಸಬೇಕು.

ಭಾರತದಲ್ಲಿ ಕಳೆದ 50 ವರ್ಷಗಳಿಂದಲೂ ಮೈಕ್ರೊ ಫೈನಾನ್ಸ್ ವ್ಯವಸ್ಥೆ ಇದೆ. ಸಾಂಪ್ರದಾಯಿಕ ಬ್ಯಾಂಕ್‌ಗಳಲ್ಲಿ ಸಾಲ ಸಿಗದವರಿಗೆ ಕೂಡ ಸಾಲ ವಿತರಿಸುವುದು ಇವುಗಳ ಉದ್ದೇಶ. ಆದರೆ ಇಲ್ಲಿ ಬಡ್ಡಿ ಜಾಸ್ತಿ ಇರುತ್ತದೆ. ಪ್ರತಿಯಾಗಿ ಸುಲಭವಾಗಿ ಸಾಲ ಸಿಗುತ್ತದೆ. ಹೆಚ್ಚಿನ ದಾಖಲಾತಿಗಳ ಅವಶ್ಯಕತೆ ಇರುವುದಿಲ್ಲ. ಹೀಗಿದ್ದರೂ, ಮೈಕ್ರೊ ಫೈನಾನ್ಸ್‌ಗಳಲ್ಲಿ ನೋಂದಣಿಯಾಗದ ಕಂಪನಿಗಳೂ ಇವೆ. ಇವುಗಳ ಆಟಾಟೋಪವನ್ನು ಹೇಳೋರಿಲ್ಲ, ಕೇಳೋರಿಲ್ಲ ಎಂಬಂತಾಗಿದೆ.

ಆರ್‌ಬಿಐ, 2022ರಲ್ಲಿ ಮೈಕ್ರೊ ಫೈನಾನ್ಸ್ ಕಂಪನಿಗಳು ವಿಧಿಸುವ ಬಡ್ಡಿ ದರಗಳ ಮೇಲಿನ ಮಿತಿಯನ್ನು ರದ್ದುಪಡಿಸಿತು. ಕಂಪನಿಗಳ ನಡುವೆ ಸ್ಪರ್ಧಾತ್ಮಕತೆ ಉಂಟಾಗಿ ಬಡ್ಡಿ ದರ ಇಳಿಯಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಆಗಿದ್ದೇ ಬೇರೆ. ಮೈಕ್ರೊ ಫೈನಾನ್ಸ್ ಕಂಪನಿಗಳು ಬಡ್ಡಿ ದರವನ್ನು ಅತಾರ್ಕಿಕವಾಗಿ ಏರಿಸಿದವು. ಅಲ್ಲಿಯವರೆಗೆ ಎಂಎಫ್‌ಐಗಳು ತಮಗೆ ತಗಲುವ ಸಾಲದ ವೆಚ್ಚದ ಮೇಲೆ ಶೇ.12ರ ತನಕ ಸೇರಿಸಿ ಬಡ್ಡಿ ನಿಗದಿಪಡಿಸಬಹುದಿತ್ತು. ಉದಾಹರಣೆಗೆ ಫಂಡ್ ಪಡೆಯಲು ಶೇ.10ರಷ್ಟು ವೆಚ್ಚವಾದರೆ ಅದರ ಮೇಲೆ ಶೇ.12ರಷ್ಟು ಸೇರಿಸಬಹುದಿತ್ತು. ಆಗ ಬಡ್ಡಿ ದರ ಗರಿಷ್ಠ ಶೇ.22 ಆಗುತ್ತಿತ್ತು. ಆದರೆ ಆರ್‌ಬಿಐ ಮಿತಿಯನ್ನು ತೆರವುಗೊಳಿಸಿದ ಬಳಿಕ ಕೆಲವು ಮೈಕ್ರೊ ಫೈನಾನ್ಸ್ ಕಂಪನಿಗಳು ಶೇ.45ರ ತನಕ ಬಡ್ಡಿಯನ್ನು ಏರಿಸಿದವು ಎಂದು ವರದಿಯಾಗಿದೆ. ಹೀಗೆ ಆರ್‌ಬಿಐ ಒಳ್ಳೆಯ ಉದ್ದೇಶಕ್ಕೆ ಮಿತಿ ರದ್ದುಪಡಿಸಿದ್ದರೂ, ಸಾಲಗಾರರಿಗೆ ಕಠೋರವಾಗಿ ಪರಿಣಮಿಸಿದೆ. ಬಹುಶಃ ಆರ್‌ಬಿಐ ಸಾಲಗಾರರ ರಕ್ಷಣೆಗೆ ಬೇರೆ ನಿರ್ಧಾರ ತೆಗೆದುಕೊಳ್ಳಬಹುದು ಎಂದು ಆಶಿಸಬಹುದು. ಆದರೆ ಇಂಥ ಸಂಗತಿಗಳನ್ನು ಸಾಲಗಾರರು ಮನನ ಮಾಡಿಕೊಳ್ಳಬೇಕು.

ಹೀಗಾಗಿ ಬಡ ಕುಟುಂಬಗಳ ಸಾಲಗಾರರು, ಮೈಕ್ರೊ ಫೈನಾನ್ಸ್ ಸಾಲ ಪಡೆಯುವಾಗ ಕಲಿತಿರಬೇಕಾದ ಪಾಠ ಏನೆಂದರೆ–

- **ಇತರ ಬ್ಯಾಂಕ್‌ಗಳಿಂದ ಇಲ್ಲಿ ಬಡ್ಡಿ ದರ ಅತ್ಯಧಿಕ ಇರುತ್ತದೆ ಎಂಬುದು. ಒಂದು ಕಂತಿನ ಸಾಲ ಮರುಪಾವತಿ ವಿಳಂಬವಾದರೂ ಬಡ್ಡಿ ಜ್ವರದಂತೆ ಬೆಳೆಯುತ್ತದೆ. ಶೇ.18-26ರ ತನಕ ಇಲ್ಲಿ ಸಾಮಾನ್ಯವಾಗಿರುವ ಅಧಿಕ ಬಡ್ಡಿ ದರದ ಬಿಸಿಯನ್ನು ಭರಿಸಬಹುದೇ ಎಂದು ಲೆಕ್ಕಾಚಾರ ಹಾಕಲೇಬೇಕು.**
- **ಮೈಕ್ರೊ ಫೈನಾನ್ಸ್ ಸಾಲದ ಮರುಪಾವತಿಯ ಅವಧಿ ಕೆಲ ತಿಂಗಳುಗಳಿಂದ 3 ವರ್ಷದ ತನಕ ಇರಬಹುದು. ಹೆಚ್ಚು ಅವಧಿ ಸಿಗುವುದಿಲ್ಲ.**
- **ಸ್ವಸಹಾಯ ಗುಂಪುಗಳಲ್ಲಿ ಮೈಕ್ರೊ ಫೈನಾನ್ಸ್ ಸಾಲ ಪಡೆಯುವಾಗ ಎಚ್ಚರ ಇರಲಿ. ಇತರರು ಸಾಲ ಕಟ್ಟದಿದ್ದರೂ, ನಿಮಗೆ ಸಮಸ್ಯೆಯಾಗಬಹುದು.**
- **ರಿಜಿಸ್ಟರ್ ಆಗದಿರುವ ಮೈಕ್ರೊ ಫೈನಾನ್ಸ್ ಕಂಪನಿಯಲ್ಲಿ ಸಾಲ ಪಡೆಯದಿರಿ.**
- **ಬಡ್ಡಿ ದರಗಳ ವಿವರಗಳನ್ನು ಸಮರ್ಪಕವಾಗಿ ನೀಡದಿದ್ದರೆ, ಅಂಥ ಮೈಕ್ರೊ ಫೈನಾನ್ಸ್ ಸಾಲದ ಸಹವಾಸವೇ ಬೇಡ.**

ಆಂಧ್ರಪ್ರದೇಶದಲ್ಲಿ 2010ರ ಆಸುಪಾಸಿನಲ್ಲಿ ಮೈಕ್ರೊ ಫೈನಾನ್ಸ್ ಬಿಕ್ಕಟ್ಟು ಸೃಷ್ಟಿಯಾಗಿತ್ತು. ಅಲ್ಲಿಯೂ ಸಾಲ ಮರುವಸೂಲಾತಿಯಲ್ಲಿ ಕಂಪನಿಗಳ ಕಿರುಕುಳಕ್ಕೆ ಬೇಸತ್ತು ಹಲವಾರು ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಕೊನೆಗೆ ರಾಜ್ಯ ಸರಕಾರವು ಪ್ರತ್ಯೇಕ ಕಾಯಿದೆಯ ಮೂಲಕ ಕಿರು ಹಣಕಾಸು ಸಂಸ್ಥೆಗಳ ವಲಯವನ್ನು ಬಿಗಿಗೊಳಿಸಿತ್ತು. ಇದೀಗ ಕರ್ನಾಟಕದಲ್ಲಿಯೂ ಹೊಸ ಕಾಯಿದೆ ಜಾರಿಯಾಗಲಿದೆ ಎಂದು ಸರಕಾರ ತಿಳಿಸಿದೆ. ಹಾಗಂತ ಆಂಧ್ರಪ್ರದೇಶದಲ್ಲಿ ಮೈಕ್ರೊ ಫೈನಾನ್ಸ್ ಬಿಕ್ಕಟ್ಟು ಉಪಶಮನವಾಗಿದೆ ಎಂದರ್ಥವಲ್ಲ. ಈಗಲೂ ಕಿರುಕುಳದ ಪ್ರಕರಣಗಳು ವರದಿಯಾಗುತ್ತಿವೆ. ಆದರೆ 2010ರ ಪರಿಸ್ಥಿತಿ ಈಗಿಲ್ಲ ಎನ್ನಬಹುದು. ಆದ್ದರಿಂದ ಜನರೇ ಇಂಥ ಸಾಲ ಪಡೆಯುವಾಗ, ಇದರ ಸಾಧಕ-ಬಾಧಕಗಳನ್ನು ಅರಿತುಕೊಳ್ಳುವುದು ಮುಖ್ಯ.

ರಾಜ್ಯದಲ್ಲಿ ಅನೇಕ ಮಹಿಳಾ ಸ್ವಸಹಾಯ ಗುಂಪುಗಳು ಮೈಕ್ರೊ ಫೈನಾನ್ಸ್ ಸಾಲ ಪಡೆದು ತೀವ್ರ ಸಂಕಷ್ಟಕ್ಕೆ ಗುರಿಯಾಗಿವೆ. ಸ್ವಸಹಾಯ ಗುಂಪುಗಳಲ್ಲಿ ಸಣ್ಣ ಪುಟ್ಟ ಬಿಸಿನೆಸ್‌ಗೆ ಬಂಡವಾಳದ ಸಲುವಾಗಿ ಸಾಲ ಮಾಡುತ್ತಾರೆ. ಕೆಲವು ಮಹಿಳೆಯರು ನಾಲ್ಕಾರು ಸ್ವಸಹಾಯ ಗುಂಪುಗಳಿಂದ ಕೆಲವು ಸಾವಿರ ರುಪಾಯಿಗಳ ಸಾಲ ಮಾಡುತ್ತಾರೆ. ಈ ರೀತಿ ಸಾಲ ಪಡೆದ ಉತ್ತರ ಕರ್ನಾಟಕದ ಮಹಿಳೆ ದೌಲ್ಬೀರ್ ಅವರ ಕರುಣಾಜನಕ ಕಥೆಯನ್ನು ಕೇಳಿದರೆ ಸಂಕಟವಾಗುತ್ತದೆ. ''ಮೂರ್‍ನಾಲ್ಕು ಸಂಘಗಳಲ್ಲಿ ಒಟ್ಟು ಒಂದು ಲಕ್ಷ ರುಪಾಯಿ ಸಾಲ ಪಡೆದಿದ್ದೆ. ಆದ್ರೆ ಈಗ ನನ್ನ ಪಾಲಿಗೆ ಬಂದಿದ್ದ ಜಮೀನನ್ನು ಮಾರಿದ್ದೇನೆ. ಬಂಗಾರ-ಪಿಂಗಾರ ಎಲ್ಲವನ್ನೂ ಮಾರಿದ್ದೇನೆ. ಈಗ ಉಟ್ಟಿರುವ ಬಟ್ಟೆ ಮಾತ್ರ ಉಳಿದಿದೆ. ಆದ್ರೂ ಸಾಲ ಮುಗಿದಿಲ್ಲ'' ಎನ್ನುತ್ತಾರೆ ಅವರು. ಇನ್ನೂ ಕೆಲ ಮಹಿಳೆಯರು ಮೈಮೇಲಿನ ಬಂಗಾರ, ಮಕ್ಕಳ ಕಿವಿಯೋಲೆಯನ್ನೂ ಮಾರಿದ್ದಾರೆ. ಆದರೂ ಕೆಲವು ಸಾವಿರ ರು.ಗಳ ಸಾಲ ಮುಗಿದಿಲ್ಲ! ಇಂಥ ನೂರಾರು ಕರುಣಾಜನಕ ಕಥೆಗಳು ಸುತ್ತಮುತ್ತ ನಡೆಯುತ್ತಿರುವುದು ದುರಂತ. ಬಡತನದ ನಿರ್ಮೂಲನೆಗಾಗಿ ಇರಬೇಕಿದ್ದ ಮೈಕ್ರೊಫೈನಾನ್ಸ್ ಕಂಪನಿಗಳು ಬಡವರನ್ನೇ ಹಿಂಡುತ್ತಿರುವುದು ದುರಂತ.

ಕೋವಿಡ್ ಬಿಕ್ಕಟ್ಟಿನ ಬಳಿಕ ಭಾರತದಲ್ಲಿ ಜನ ಸಾಮಾನ್ಯರು ಮೈಕ್ರೊ ಫೈನಾನ್ಸ್ ಕಂಪನಿಗಳಿಂದ ವ್ಯಾಪಕವಾಗಿ ಸಾಲ ತೆಗೆದುಕೊಂಡಿದ್ದರು. ಆದರೆ ಇತ್ತೀಚಿನ ವರ್ಷಗಳಲ್ಲಿ ಸಾಲ ಬಾಕಿ ಇರಿಸಿಕೊಂಡಿರುವವರ ಸಂಖ್ಯೆಯೂ ಹೆಚ್ಚುತ್ತಿದೆ. ಸಕಾಲಕ್ಕೆ ಕಂತುಗಳನ್ನು ಕಟ್ಟಲು ಎಲ್ಲ ಸಾಲಗಾರರಿಂದ ಸಾಧ್ಯವಾಗುತ್ತಿಲ್ಲ, ಇದರ ಪರಿಣಾಮ ಮೈಕ್ರೊ ಫೈನಾನ್ಸ್ ಸೆಕ್ಟರ್ ಗಣನೀಯ ಸವಾಲುಗಳನ್ನು ಎದುರಿಸುತ್ತಿದೆ. ಹೊಸ ಸಾಲದ ವಿತರಣೆಯಲ್ಲಿ ಇಳಿಕೆಯಾಗಿದೆ. ಹಾಗಂತ ಆರ್‌ಬಿಐ ಮಾರ್ಗದರ್ಶಿಯನ್ನೂ ಗಾಳಿಗೆ ತೂರಿ, ಸಾಲ ವಸೂಲಾತಿಗಾಗಿ ನಡೆಸುವ ಗೂಂಡಾಗಿರಿಯನ್ನು, ದೌರ್ಜನ್ಯವನ್ನು ಸಮರ್ಥಿಸಿಕೊಳ್ಳಲು ಸಾಧ್ಯವೇ?

Microfinance is an idea whose time has come ಎಂದು ವಿಶ್ವಸಂಸ್ಥೆಯ ಮಾಜಿ ಕಾರ್ಯದರ್ಶಿಯಾಗಿದ್ದ ಕೋಫಿ ಅನ್ನಾನ್ ಹೇಳಿದ್ದರು. ಅದು ನಿಜವಾಗಲಿ ಎಂಬುದಷ್ಟೇ ಹಾರೈಕೆ.

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಏಟು-ಎದುರೇಟು!

''ಮಹಾ ಕುಂಭಮೇಳದಲ್ಲಿ ಗಂಗಾಸ್ನಾನ ಮಾಡಿಬಿಟ್ಟರೆ ದೇಶದ ಬಡತನ ನಿವಾರಣೆಯಾಗುತ್ತದೆಯೇ? ದೇಶದಲ್ಲಿ ಬಡತನ ತಾಂಡವವಾಡುತ್ತಿರುವಾಗ, ಮಕ್ಕಳು ಹಸಿವಿನಿಂದ ಸಾಯುತ್ತಿರುವಾಗ ಹೀಗೆ ಕೋಟಿಗಟ್ಟಲೆ ಹಣ ಖರ್ಚುಮಾಡಿ ಇಂಥ ಮೇಳವನ್ನು ನಡೆಸುವ ಅಗತ್ಯವಿತ್ತೇ?'' ಎಂಬ ಆಣಿಮುತ್ತುಗಳನ್ನು ಉದುರಿಸಿದ್ದಾರೆ ಹಿರಿಯ ಕಾಂಗ್ರೆಸ್ಸಿಗರೊಬ್ಬರು!

ಈ ಮಾತನ್ನು ಕೇಳಿಸಿಕೊಂಡ 'ಕೇಶವಕೃಪಾ'ಪೋಷಿತರೊಬ್ಬರು, ''ಅಬ್ಬಾ, ಏನ್ ಮಾತು ಏನ್ ಕಥೆ, ಎಂಥಾ 'ಪನ್ನು' ಎಂಥಾ 'ಫನ್ನು'?! ಕಾಂಗ್ರೆಸ್ಸಿಗರು ದಶಕಗಳ ಹಿಂದೆಯೇ 'ಗರೀಬಿ ಹಟಾವೊ' ಎಂಬ ಮಂತ್ರವನ್ನು ಕಂಠಪಾಠ ಮಾಡಿಕೊಂಡು, ಸಿಕ್ಕ ಸಿಕ್ಕ ಸಾರ್ವಜನಿಕ ವೇದಿಕೆಗಳಲ್ಲೆಲ್ಲಾ ಅದೇ ತೌಡನ್ನು ಕುಟ್ಟುತ್ತಿದ್ದರು. ಇದರಿಂದ ಮೂಟೆಗಟ್ಟಲೆ ಹೊಟ್ಟು ಸಿಕ್ಕಿತೇ ವಿನಾ, ದೇಶಸ್ಥರ 'ಗರೀಬಿ'ಯಂತೂ 'ಹಟಾವ್' ಆಗಲಿಲ್ಲ. ದಶಕಗಳ ಕಾಲ ದೇಶವನ್ನು ಆಳಿದ ಕಾಂಗ್ರೆಸ್ಸಿಗರಿಂದಲೇ ನಿವಾರಣೆಯಾಗದ ಬಡತನವು, ಈಗೊಂದು ಹನ್ನೊಂದು ವರ್ಷದಿಂದ ಗದ್ದುಗೆಯಲ್ಲಿ ಕೂತಿರೋರು ನೀರಲ್ಲಿ ಮುಳುಗೇಳುತ್ತಿದ್ದಂತೆ ನಿರ್ನಾಮವಾಗಿಬಿಡುವುದೇ?!!'' ಎಂದು ವಿಶಿಷ್ಟ ಶೈಲಿಯಲ್ಲಿ 'ಟಾಂಗ್' ನೀಡಿ, ಗೊಜ್ಜವಲಕ್ಕಿಯನ್ನು ಬಾಯಾಡಿಸಿದರಂತೆ!!

ವಿಪಕ್ಷದವರೇ ಕಾರಣ!

''ರಾಜ್ಯದಲ್ಲಿ ಏನೇ ನಡೆದರೂ, ಹಿಂದಿನ ಬಿಜೆಪಿ ಸರಕಾರ ಮತ್ತು ಕೇಂದ್ರ ಸರಕಾರದ ಮೇಲೆ ಹಾಕುತ್ತಾರೆ; ಮಳೆ ಹೆಚ್ಚಾದರೂ ಕಡಿಮೆಯಾದರೂ ಇದಕ್ಕೆ ಬಿಜೆಪಿಯೇ ಕಾರಣ ಅಂತಾರೆ. ಇಂಥ ಬಾಲಿಶ ಹೇಳಿಕೆಗಳನ್ನು ಕೊಡುವುದನ್ನು ಬಿಡಬೇಕು'' ಎಂದಿದ್ದಾರೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿಯವರು.

ಸರ್, ನಿಮ್ಮ ಮಾತು 200% ನಿಜ. ನಿಮ್ಮ ಎದುರಾಳಿ ಪಕ್ಷದ ಯುವನಾಯಕರೊಬ್ಬರು ತಮ್ಮ

'ವೈಫ್' ಅನ್ನು ಹೆರಿಗೆಗೆಂದು ನರ್ಸಿಂಗ್ ಹೋಮ್‌ಗೆ ಸೇರಿಸಿ, ತಾವು ಅಲ್ಲಿನ ಪಡಸಾಲೆಯ ಬೆಂಚ್ ಮೇಲೆ ಉಗುರು ಕಚ್ಚುತ್ತಾ ಕೂತಿದ್ದರು. ಕೆಲ ಹೊತ್ತಿನ ನಂತರ ಅವರಿದ್ದಲ್ಲಿಗೆ ಓಡಿಬಂದ 'ಮಲಯಾಳಿ ಮಿಡ್‌ವೈಫ್', ''ಸರ್, ನಿಂಗಳುಡೆ ಭಾರ್ಯ ಒರು ಪೆಣ್‌ಕುಂಜಿನೆ ಪ್ರಸವಿಚ್ಚು'' (ಸರ್, ನಿಮ್ಮ ಹೆಂಡತಿಗೆ ಹೆಣ್ಣುಮಗು ಆಯ್ತು) ಎಂದು ಸುದ್ದಿಮುಟ್ಟಿಸಿದಳು. ಗಂಡುಮಗುವಿನ ನಿರೀಕ್ಷೆಯಲ್ಲಿದ್ದ ಆ ಯುವಪುಢಾರಿ ಕೆರಳಿ ಕೆಂಡವಾಗಿ 'ಥಣ್' ಅಂತ ಎದ್ದು ನಿಂತು, ''ವಾಟ್...? ಇದರ ಹಿಂದೆ ವಿಪಕ್ಷದವರ ಸಂಚು ಇದೆ, ಇದನ್ನು ಉಗ್ರವಾಗಿ ಖಂಡಿಸ್ತೇನೆ..'' ಅಂತ ಅಡ್ಡಜ್ಞಾನದಲ್ಲಿ ಅಬ್ಬರಿಸಿ, ನರ್ಸಿಂಗ್ ಹೋಮ್‌ನ ಪಡಸಾಲೆಯಲ್ಲಿ ಅತ್ತಿಂದಿತ್ತ ಶತಪಥ ಹಾಕತೊಡಗಿದರು!!

ನಾರಾಯಣ ನಾರಾಯಣ!

''ರಾಜ್ಯ ಕಾಂಗ್ರೆಸ್‌ನಲ್ಲಿ 'ಗೊಂದಲ'ವಿದೆ. ಶ್ರೀರಾಮುಲು-ಜನಾರ್ದನ ರೆಡ್ಡಿ ನಡುವಿನ ಸಂಘರ್ಷದಿಂದಾಗಿ ಬಿಜೆಪಿಯಲ್ಲೂ 'ಗೊಂದಲ'ಗಳಿವೆ. ಒಟ್ಟಾರೆ ಕರ್ನಾಟಕದ ರಾಜಕಾರಣವೇ ಈಗ 'ಗೊಂದಲ'ದಲ್ಲಿದೆ'' ಎಂದಿದ್ದಾರೆ ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪನವರು. ಈ ಮಾತುಗಳನ್ನು ಕೇಳಿಸಿಕೊಂಡ ಕವಿ ಎಂ.ಗೋಪಾಲಕೃಷ್ಣ ಅಡಿಗರ ಅಭಿಮಾನಿಗಳು, ''ಸರ್, ಹಾಗಿದ್ದಲ್ಲಿ 'ಗೊಂದಲ' ಹುಟ್ಟುಹಾಕೋ ರಾಜಕಾರಣಿಗಳು ಓಡಾಡೋ ಪ್ರದೇಶಕ್ಕೆ 'ಗೊಂದಲಪುರ' ಅಂತ ನಾಮಕರಣ ಮಾಡಿದರೆ ಹೇಗಿರುತ್ತೆ? ಬರೋಬ್ಬರಿ 420 ಸಾಲುಗಳಿರುವ 'ಗೊಂದಲಪುರ' ಹೆಸರಿನ ಕವನವೊಂದನ್ನು ನಮ್ ಅಡಿಗರು 1953ರಲ್ಲೇ ಬರೆದಿದ್ದಾರೆ'' ಎಂದು ಸಲಹೆ ನೀಡಲು ಬಯಸಿದ್ದಾರಂತೆ!!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 15

THIS IS A PUBLIC ANNOUNCEMENT FOR INFORMATION PURPOSES ONLY AND IS NOT A PROSPECTUS ANNOUNCEMENT AND DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE TO SECURITIES.
NOT FOR RELEASE, PUBLICATION OR DISTRIBUTION DIRECTLY OR INDIRECTLY, OUTSIDE INDIA.
Initial public offer of equity shares on the main board of the Stock Exchanges in compliance with Chapter II of the Securities and Exchange Board of India (Issue of Capital and Disclosure Requirements) Regulations, 2018, as amended ("SEBI ICDR Regulations").

Denta
Water Revitalizing Experts

(Please scan the QR code to view the Prospectus)

DENTA WATER AND INFRA SOLUTIONS LIMITED

Our Company was incorporated as *'Denta Properties and Infrastructure Private Limited'* in Bangalore, Karnataka as a private limited company under Companies Act, 2013, pursuant to a certificate of incorporation dated November 17, 2016 issued by Deputy Registrar of Companies, Central Registration Centre. Thereafter, pursuant to a resolution passed at the meeting of the Board of Directors held on June 14, 2023, and a special resolution of the Shareholders at the extraordinary general meeting held on June 26, 2023, the name of our Company was changed to *'Denta Water and Infra Solutions Private Limited'* and a fresh certificate of incorporation dated July 31, 2023, consequent upon the name change, was issued by the Registrar of Company, Karnataka at Bangalore (**"RoC"**). Subsequently, our Company was converted from a private limited company to a public limited company pursuant to a special resolution passed in the extraordinary general meeting of our Shareholders held on August 14, 2023, and consequently, the name of our Company was changed to *'Denta Water and Infra Solutions Limited'*, and a fresh certificate of incorporation dated September 12, 2023 was issued by the RoC to our Company. For details relating to changes in the name and registered office of our Company, please see section titled ***"History and Certain Corporate Matters"*** on page 216 of the Prospectus dated January 27, 2025 (**"Prospectus"**) filed with the RoC.

Corporate Identity Number: U70109KA2016PLC097869

Registered Office: # 40, 3rd Floor, Sri Lakshminarayana Mansion, South End Road, Basavanagudi Bangalore, South Bangalore- 560 004 Karnataka, India. **Telephone:** +91 080 2991 6509; **Contact Person:** Sujata Gaonkar, Company Secretary and Compliance Officer, **Website:** www.denta.co.in; **E-mail:** cs@denta.co.in

OUR PROMOTERS: SOWBHAGYAMMA, SUJITH T R, C MRUTHYUNJAYA SWAMY AND HEMA H M.

Our Company has filed the Prospectus with the RoC, and the Equity Shares are proposed to be listed on the Stock Exchanges and trading is expected to commence on or about Wednesday, January 29, 2025.

BASIS OF ALLOTMENT

INITIAL PUBLIC OFFER OF UP TO 7,500,000 EQUITY SHARES OF FACE VALUE OF ₹ 10 EACH ("EQUITY SHARES") OF DENTA WATER AND INFRA SOLUTIONS LIMITED ("COMPANY" OR "ISSUER") FOR CASH AT A PRICE OF ₹ 294 PER EQUITY SHARE (INCLUDING A SHARE PREMIUM OF ₹ 284 PER EQUITY SHARE) ("ISSUE PRICE") AGGREGATING UP TO ₹ 2,205.00 MILLION ("ISSUE").

ANCHOR INVESTOR ISSUE PRICE: ₹ 294 PER EQUITY SHARE OF FACE VALUE OF ₹10 EACH
ISSUE PRICE: ₹294 PER EQUITY SHARE OF FACE VALUE OF ₹10 EACH
THE ISSUE PRICE IS 29.40 TIMES OF THE FACE VALUE

RISKS TO INVESTORS:

For details, refer to *"Risk Factors"* on page 33 of the Prospectus.

1) **Legal Proceedings by Lokayukta and Enforcement Directorate:** In the past, one of our Promoters, C Mruthyunjaya Swamy, in the capacity as a secretary of the Public Works Department, Karnataka, has been subjected to enquiry by the Lokayukta Police, Bangalore ("Lokayukta") and initiation of certain legal proceedings by the Enforcement Directorate against him, which was subsequently disposed off. Although Mr. C Mruthyunjaya Swamy is currently retired from the services of Government of Karnataka, there is no assurance that legal proceedings will not be reopened by Lokayukta or any other relevant authority against him. For further details, please refer to Addendum dated June 13, 2024 and November 30, 2024.
2) **Complaints filed with SEBI and other authorities:** Certain untraceable persons have filed complaints with SEBI and other authorities against our Company and our Promoter, C Mruthyunjaya Swamy, with allegations including indulging in corrupt practices, misusing of authority by our Promoter while being in public service and influencing the government officers in awarding the contracts to our Company, among others. There is no assurance that our Company or SEBI or other authorities do not receive similar complaints in future. For further details, please refer to Addendum dated June 13, 2024 and November 30, 2024.
3) **Customer Concentration:** Our revenue contribution from government clients has increased from 18.25% in FY 2023 to 63.40% as of FY 2024, and we currently rely substantially on our government clients for our revenues.
   We derive a significant part of our revenue from some customers. If one or more of such customers choose not to source their requirements from us or to terminate our contracts, our business, cash flows, financial condition and results of operations may be adversely affected. For further details on revenue contribution by our customers, please see section titled *"Risk Factors"* on page 42 of the Prospectus.
4) **Dependency on Government of Karnataka:** Our Company relies heavily on the Government of Karnataka for its business. 83.98% of our revenue from operations in six months period ended September 30, 2024, is from Government of Karnataka.
5) **Dependency on procurement of projects:** We are significantly dependent on the procurement of projects. Our revenue and earnings are dependent upon award of new contracts which we cannot directly control. If we fail to secure new contracts on a continual basis, our operating results may be materially and adversely affected, and we may be unable to secure projects or maintain our growth it may impact our profitability and subsequently our revenues, and business operations.
6) **Supplier concentration risk:** We rely on a limited number of suppliers for our raw material, loss of these suppliers may have an adverse effect on our business, results of operations and financial conditions. For further details on suppliers, please see section titled *"Risk Factors"* on page 44 of the Prospectus.
7) **Outstanding Litigations:** There is an outstanding litigation against our Promoter, Sowbhagyamma. Any adverse decision in such proceedings may render us / them liable to liabilities / penalties and may adversely affect our business, results of operations and financial condition. For further details, please refer to page no. 359 of Prospectus.
8) **Risk relating to joint venture arrangements:** We enter into joint ventures arrangements for completion of our projects which may expose us to additional liabilities on account of our partners' failure or underperformance and any premature termination of which, may adversely affect our business, reputation, financial condition and results of operations.
9) **Order Book related risk:** Our current order book may not necessarily translate into future income in its entirety. Some of our current orders may be modified, cancelled, delayed, put on hold or not fully paid for by our customers, which could adversely affect our business, financial condition, results of operations and future prospects. For further details on Order Book, please see section titled *"Risk Factors"* on page 42 of the Prospectus.
10) The Weighted Average Cost of Acquisition of all Equity Shares transacted in last three years, 18 months and one year preceding the date of the Prospectus:

Period	Weighted average cost of acquisition (₹)*	Cap Price is 'X' times the Weighted Average Cost of Acquisition	Range of acquisition price: Lowest price – Highest price (in ₹)*
Last one year	Nil	Nil	0-0
Last 18 months	Nil	Nil	0-0
Last three years	Nil	Nil	0-0

** As certified by Maheshwari & Co., Chartered Accountants, by way of their certificate dated January 27, 2025.*

11) The BRLM associated with the Issue has handled 1 Main Board issue in the past the three years and such issue has not closed below the issue price on listing price.

BID/ISSUE PROGRAMME

ANCHOR INVESTOR BIDDING OPENED AND CLOSED ON TUESDAY, JANUARY 21, 2025
BID/ ISSUE OPENED ON WEDNESDAY, JANUARY 22, 2025 | BID/ ISSUE CLOSED ON FRIDAY, JANUARY 24, 2025

The Issue was made in terms of Rule 19(2)(b) of the Securities Contacts (Regulation) Rules, 1957 ("**SCRR**"), read with Regulation 31 of the SEBI ICDR Regulations. The Issue was made in accordance with Regulation 6(1) of the SEBI ICDR Regulations, through the Book Building Process wherein not more than 50% of the Issue was allocated on a proportionate basis to Qualified Institutional Buyers ("**QIBs**") ("**QIB Portion**"), provided that our Company in consultation with the BRLM was available for allocation up to 60% of the QIB Portion to Anchor Investors on a discretionary basis in accordance with the SEBI ICDR Regulations ("**Anchor Investor Portion**"), out of which one-third shall be reserved for domestic Mutual Funds only, subject to valid Bids being received from domestic Mutual Funds at or above the price at which allocation was made to Anchor Investors ("**Anchor Investor Allocation Price**"), in accordance with the SEBI ICDR Regulations. Further, 5% of the Net QIB Portion was made available for allocation on a proportionate basis to Mutual Funds only, and the remainder of the Net QIB Portion was made available for allocation on a proportionate basis to all QIB Bidders, including Mutual Funds, subject to valid Bids being received at or above the Issue Price. However, if the aggregate demand from Mutual Funds is less than 5% of the Net QIB Portion, the balance Equity Shares available for allocation in the Mutual Fund Portion were be added to the remaining Net QIB Portion for proportionate allocation to QIBs. Further, not less than 15% of the Issue shall be available for allocation to Non-Institutional Bidders out of which (a) one third of such portion shall be reserved for applicants with application size of more than two lakh rupees and up to ten lakh rupees; and (b) two third of such portion shall be reserved for applicants with application size of more than ten lakh rupees, provided that the unsubscribed portion in either of such sub-categories may be allocated to applicants in the other sub-category of non-institutional investors and not less than 35% of the Issue shall be available for allocation to Retail Individual Bidders ("**RIBs**") in accordance with the SEBI ICDR Regulations, subject to valid Bids being received at or above the Issue Price. All potential Bidders (except Anchor Investors) are required to mandatorily utilise the Application Supported by Blocked Amount ("**ASBA**") process providing details of their respective ASBA accounts, and UPI ID in case of RIBs, if applicable, in which the corresponding Bid Amounts were blocked by the SCSBs or by the Sponsor Banks under the UPI Mechanism, as applicable, to the extent of the respective Bid Amounts. Anchor Investors are not permitted to participate in the Issue through the ASBA process. For further details, please see section titled ***"Issue Procedure"*** on page 378 of the Prospectus.

The bidding for Anchor Investor opened and closed on Tuesday, January 21, 2025. The Company received 10 applications from 10 Anchor Investors for 3,401,500 Equity Shares. The Anchor Investor Issue Price was finalized at ₹294 per Equity Share. A total of 2,250,000 Equity Shares were allocated under the Anchor Investor Portion aggregating to ₹661,500,000.00/-.

The Issue received 3,868,981 applications for 1,156,881,050 Equity Shares resulting in 154.40 times subscription as disclosed in the Prospectus. The details of the applications received in the Issue from Retail Individual Bidders, Non-Institutional Bidders and QIBs are as under (before rejections):

Sl. No.	CATEGORY	NO. OF APPLICATIONS RECEIVED	NO. OF EQUITY SHARES APPLIED	EQUITY SHARES RESERVED AS PER PROSPECTUS	NO. OF TIMES SUBSCRIBED	AMOUNT (₹)
A	Retail Individual Bidders	3,549,327	234,570,450	2,625,000	89.3602	68,963,712,300.00
B	Non-Institutional Investors – (More than ₹ 0.2 million and upto ₹1 million)	205,139	152,552,650	375,000	406.8071	44,850,479,100.00
C	Non-Institutional Investors – (above ₹1 million)	114,353	415,746,000	750,000	554.3280	122,229,324,000.00
D	Qualified Institutional Bidders (excluding Anchor Investors)	152	351,761,950	1,500,000	234.5080	103,418,013,300.00
E	Anchor Investors	10	3,401,500	2,250,000	1.5118	1,000,041,000.00
	Total	**3,868,981**	**1,158,032,550**	**7,500,000**	**154.4043**	**340,461,569,700.00**

Final Demand

A summary of the final demand as per NSE and BSE as on the Bid/Issue Closing Date at different Bid prices is as under:

Sr. No	Bid Price (₹)	No. of Equity Shares	% to Total	Cumulative Total	Cumulative % of Total
1	294	987,175,500.00	81.18	1,214,041,200.00	99.83
2	293	424,900.00	0.03	1,214,466,100.00	99.87
3	292	317,650.00	0.03	1,214,783,750.00	99.89
4	291	43,650.00	0.00	1,214,827,400.00	99.90
5	290	278,250.00	0.02	1,215,105,650.00	99.92
6	289	28,350.00	0.00	1,215,134,000.00	99.92
7	288	26,750.00	0.00	1,215,160,750.00	99.93
8	287	29,700.00	0.00	1,215,190,450.00	99.93
9	286	37,200.00	0.00	1,215,227,650.00	99.93
10	285	141,100.00	0.01	1,215,368,750.00	99.94
11	284	27,950.00	0.00	1,215,396,700.00	99.94
12	283	13,100.00	0.00	1,215,409,800.00	99.95
13	282	17,200.00	0.00	1,215,427,000.00	99.95
14	281	21,800.00	0.00	1,215,448,800.00	99.95
15	280	133,250.00	0.01	1,215,582,050.00	99.96
16	279	487,550.00	0.04	1,216,069,600.00	100.00
	CUT-OFF	226,865,700.00	18.66	226,865,700.00	100.00
	TOTAL	**1,216,069,600.00**	**100**		

The Basis of Allotment was finalized in consultation with the Designated Stock Exchange, being NSE on January 28, 2025.

A. Allotment to Retail Individual Bidders (After Rejections) (including ASBA Applications)

The Basis of Allotment to the Retail Individual Bidders, who have bid at cut-off or at the Issue Price of ₹294 per Equity, was finalized in consultation with NSE. This category has been subscribed to the extent of 89.36 times. The total number of Equity Shares Allotted in Retail Individual Bidders category is 2,625,000 Equity Shares to 52,500 successful applicants.

Continued on next page...

...continued from previous page.

The category-wise details of the Basis of Allotment are as under:

Sr. No	Category	No. of Applications Received	% of Total	Total No. of Equity Shares applied	% to Total	No. of Equity Shares Allotted per Bidder	Ratio	Total No. of Equity Shares allotted
1	50	3,196,243.00	90.05	159,812,150.00	68.13	50	94:6355	2,363,850.00
2	100	167,536.00	4.72	16,753,600.00	7.14	50	94:6355	123,900.00
3	150	56,671.00	1.60	8,500,650.00	3.62	50	94:6355	41,900.00
4	200	29,992.00	0.85	5,998,400.00	2.56	50	94:6355	22,200.00
5	250	21,820.00	0.61	5,455,000.00	2.33	50	94:6355	16,150.00
6	300	11,935.00	0.34	3,580,500.00	1.53	50	177:11935	8,850.00
7	350	11,793.00	0.33	4,127,550.00	1.76	50	174:11793	8,700.00
8	400	5,982.00	0.17	2,392,800.00	1.02	50	89:5982	4,450.00
9	450	4,680.00	0.13	2,106,000.00	0.90	50	69:4680	3,450.00
10	500	10,148.00	0.29	5,074,000.00	2.16	50	150:10148	7,500.00
11	550	2,451.00	0.07	1,348,050.00	0.57	50	36:2451	1,800.00
12	600	2,553.00	0.07	1,531,800.00	0.65	50	38:2553	1,900.00
13	650	27,523.00	0.78	17,889,950.00	7.63	50	94:6355	20,350.00
	TOTAL	3,549,327	100.00	234,570,450	100.00			2,625,000

B. Allotment to Non-Institutional Bidders (more than ₹0.20 million and upto ₹1 million) (After Rejections) (including ASBA Applications)

The Basis of Allotment to the Non-Institutional Bidders (more than ₹ 0.20 million and upto ₹1 million), who have bid at the Issue Price of ₹294 per Equity Share or above, was finalized in consultation with NSE. This category has been subscribed to the extent of 406.8071 times. The total number of Equity Shares allotted in this category is 375,000 Equity Shares to 535 successful applicants. The category-wise details of the Basis of Allotment are as under *(Sample)*:

Sr. No	Category	No. of Applications Received	% of Total	Total No. of Equity Shares applied	% to Total	No. of Equity Shares allotted per Bidder	Ratio	Total No. of Equity Shares allotted
1	700	189,918	92.58	132,942,600	87.15	700	496:189918	347,200
2	750	3,632	1.77	2,724,000	1.79	700	9:3632	6,300
3	800	1,275	0.62	1,020,000	0.67	700	3:1275	2,100
4	850	721	0.35	612,850	0.40	700	2:721	1,400
5	900	624	0.30	561,600	0.37	700	2:624	1,400
6	950	286	0.14	271,700	0.18	700	1:286	700
7	1,000	1,246	0.61	1,246,000	0.82	700	3:1246	2,100
8	1,050	479	0.23	502,950	0.33	700	1:479	700
9	1,100	229	0.11	251,900	0.17	700	1:229	700
10	1,200	195	0.10	234,000	0.15	700	1:195	700
11	1,350	196	0.10	264,600	0.17	700	1:196	700
12	1,400	1,113	0.54	1,558,200	1.02	700	3:1113	2,100
13	1,500	390	0.19	585,000	0.38	700	1:390	700
14	1,700	1,865	0.91	3,170,500	2.08	700	5:1865	3,500
15	1,750	194	0.09	339,500	0.22	700	1:194	700
16	2,100	243	0.12	510,300	0.33	700	1:243	700
17	3,400	469	0.23	1,594,600	1.05	700	1:469	700
56	3,350.00					700	3:2064	2,100
57	3,350.00					12	1:1	468
58	3,350.00					1	32:39	32
	TOTAL	205,139	100.00	152,552,650	100.00			375,000

C. Allotment to Non-Institutional Bidders (more than ₹1 million) (After Rejections) (including ASBA Applications)

The Basis of Allotment to the Non-Institutional Bidders (more than ₹1 million), who have bid at the Issue Price of ₹294 per Equity Share or above, was finalized in consultation with NSE. This category has been subscribed to the extent of 554.3280 times. The total number of Equity Shares allotted in this category is 750,000 Equity Shares to 1,071 successful applicants. The category-wise details of the Basis of Allotment are as under: *(Sample)*

Sr. No	Category	No. of Applications Received	% of Total	Total No. of Equity Shares applied	% to Total	No. of Equity Shares allotted per Bidder	Ratio	Total No. of Equity Shares allotted
1	3,450	106,884.00	93.47	368,749,800	88.70	700	9:961	700,700
2	3,500	2,379.00	2.08	8,326,500	2.00	700	22:2379	15,400
3	3,550	561.00	0.49	1,991,550	0.48	700	5:561	3,500
4	3,600	510.00	0.45	1,836,000	0.44	700	5:510	3,500
5	3,650	208.00	0.18	759,200	0.18	700	2:208	1,400
6	3,700	174.00	0.15	643,800	0.15	700	2:174	1,400
7	3,750	210.00	0.18	787,500	0.19	700	2:210	1,400
8	3,800	83.00	0.07	315,400	0.08	700	1:83	700
9	3,900	98.00	0.09	382,200	0.09	700	1:98	700
10	4,000	214.00	0.19	856,000	0.21	700	2:214	1,400
11	4,050	56.00	0.05	226,800	0.05	700	1:56	700
12	4,100	62.00	0.05	254,200	0.06	700	1:62	700
13	4,150	92.00	0.08	381,800	0.09	700	1:92	700
14	4,200	70.00	0.06	294,000	0.07	700	1:70	700
15	4,500	99.00	0.09	445,500	0.11	700	1:99	700
16	5,000	238.00	0.21	1,190,000	0.29	700	2:238	1,400
17	6,800	55.00	0.05	374,000	0.09	700	1:55	700
18	6,900	262.00	0.23	1,807,800	0.43	700	2:262	1,400
19	7,000	105.00	0.09	735,000	0.18	700	1:105	700
20	10,350	70.00	0.06	724,500	0.17	700	1:70	700
390	321,650					700	16:1923	11,200
391	321,650					1	300:1071	300
	TOTAL	114,353	100	415,746,000	100			750,000

D. Allotment to QIBs (After Rejections)

Allotment to QIBs, who have bid at the Offer Price of ₹ 294 per Equity Share or above, has been done on a proportionate basis in consultation with NSE. This category has been subscribed to the extent of 234.51 times of Net QIB portion. As per the SEBI Regulations, QIBs were allotted Equity Shares i.e. 15,00,000 Equity Shares on a proportionate basis which were allotted to 152 successful Applicants.

CATEGORY	FIS/BANKS	MF'S	IC'S	NBFC'S	AIF	FPC	OTHERS	TOTAL
ALLOTMENT	480,098	-	39,728	102,907	302,662	280,531	294,074	1,500,000

E. Allotment to Anchor Investors (After Rejections)

The Company, in consultation with the BRLMs, have allocated 2,250,000 Equity Shares to 10 Anchor Investors (through 10 Anchor Investor Application Forms) (including Nil domestic Mutual Funds through Nil schemes) at an Anchor Issue Price at ₹294 per Equity Share in accordance with SEBI ICDR Regulations. This represents 60% of the QIB portion.

CATEGORY	FIS/BANKS	MF'S	IC'S	NBFC'S	AIF	FPC	OTHERS	TOTAL
ALLOTMENT	-	-	-	510,300	1,037,550	702,150	-	2,250,000

The Board of Directors of our Company at its meeting held on January 28, 2025 has taken on record the basis of allotment of Equity Shares approved by the Designated Stock Exchange, being NSE and has allotted the Equity Shares to various successful applicants. The Allotment Advice Cum Refund Intimation and/or notices have been dispatched to the address of the investors as registered with the depositories. Further, instructions to the SCSBs have been issued for unblocking of funds and transfer to the Public Issue Account on January 28, 2025 and the payments to non-syndicate brokers have been issued on January 28, 2025. In case the same is not received within ten days, investors may contact the Registrar to the Issue at the address given below. The Equity Shares allotted to the successful allottees have been uploaded on January 28, 2025 for credit into the respective beneficiary accounts subject to validation of the account details with the depositories concerned. The Company has filed the Listing application with BSE and NSE on January 28, 2025. The Company has received the listing and trading approval from BSE & NSE, and trading will commence on January 28, 2025.

Note: All capitalized terms used and not defined herein shall have the respective meanings assigned to them in the Prospectus.

NOTICE TO INVESTORS: CORRIGENDUM TO THE PROSPECTUS DATED JANUARY 27, 2025 (THE "CORRIGENDUM")

This Corrigendum is with reference to the Prospectus dated January 27, 2025, filed in relation to the Issue. In this regard, Investors may note the following:

1. In the chapter ***"Definitions and Abbreviations"*** on page 9 of the Prospectus, the definition of Monitoring Agency Agreement should be read as Agreement dated March 22, 2024 read with amendment to the Monitoring Agency Agreement dated January 27, 2025 entered into between our Company and CARE Ratings Limited.
2. In the chapter ***"Capital Structure"*** on page 92, in the table, ***"Details of the Equity Shares to be locked-in for eighteen months from the date of Allotment as Minimum Promoter's Contribution"***, the total number of Equity Shares locked-in should be read as 5,340,001 instead of 19,46,453.
3. In the chapter "The Issue" on page 71, in the table, under the sub-heading of "One-third of the Non-Institutional Portion available for allocation to Bidders with an application size more than ₹ 0.20 million to ₹ 1.00 million", the number should be read as 375,000 instead of 375,500.
4. In the section titled as ***"Material Contracts and Documents for Inspection"*** beginning on page 412, point 5 of point A - Material Contracts for the Issue should be read as:
   "Monitoring agency agreement dated March 22, 2024 read with amendment to the Monitoring Agency Agreement dated January 27, 2025 entered into between our Company and CARE Ratings Limited."

The Prospectus shall be read in conjunction with this Corrigendum. The information specified in this Corrigendum supersedes the information in the Prospectus to the extent inconsistent with the information already specified therein. The Prospectus accordingly stands amended to the extent stated hereinabove.

Unless otherwise specified, all capitalized terms used herein shall have the same meaning ascribed to such terms in the Prospectus. For further details, please refer to the Prospectus.

INVESTORS PLEASE NOTE

These details of the Allotment made was hosted on the website of Registrar to the Issue, Integrated Registry Management Services Private Limited at www.integratedindia.in.

All future correspondence in this regard may kindly be addressed to the Registrar to the Issue quoting full name of the First/ Sole applicant, Serial number of the Bid cum Application form number, Bidders DP ID, Client ID, PAN, date of submission of Bid cum Application Form, address of the Bidder, number of Equity Shares bid for, name of the Member of the Syndicate, place where the bid was submitted and payment details at the address given below:

INTEGRATED
CORPORATE SOLUTIONS SIMPLIFIED

Integrated Registry Management Services Private Limited
No 30 Ramana Residency, 4th Cross Sampige Road, Malleswaram, Bengaluru 560 003, Karnataka, India.
Telephone: 080- 23460815/816/817/818; **E-mail:** dentaipo@integratedindia.in; **Investor grievance e-mail:** giri@integratedindia.in, dentaipo@integratedindia.in;
Website: www.integratedindia.in; **Contact Person:** S Giridhar; **SEBI registration number:** INR000000544

For **DENTA WATER AND INFRA SOLUTIONS LIMITED**
Sd/-
Sujata Gaonkar
Company Secretary & Compliance Officer

Place : Bangalore, Karnataka
Date : January 28, 2025

THE LEVEL OF SUBSCRIPTION SHOULD NOT BE TAKEN TO BE INDICATIVE OF EITHER THE MARKET PRICE OF THE EQUITY SHARES ON LISTING OR THE BUSINESS PROSPECTS OF DENTA WATER AND INFRA SOLUTIONS LIMITED.

DENTA WATER AND INFRA SOLUTIONS LIMITED has filed a Prospectus dated January 27, 2025 with the RoC. The Prospectus is made available on the website of the SEBI at www.sebi.gov.in as well as on the website of the BRLM i.e., SMC Capitals Limited at www.smccapitals.com, the website of the NSE at www.nseindia.com and the website of the BSE at www.bseindia.com and the website of the Company at www.denta.co.in. Any potential investor should note that investment in equity shares involves a high degree of risk and for details relating to such risks, please see the section ***"Risk Factors"*** beginning on page 33 of the Prospectus. Potential investors should not rely on the DRHP for making any investment decision but should only rely on the information included in the RHP filed by the Company with the RoC.

The Equity Shares offered in the Issue have not been, and will not be, registered under the U.S. Securities Act and may not be offered or sold within the United States, except pursuant to an exemption from, or in a transaction not subject to, the registration requirements of the U.S. Securities Act and applicable state securities laws. Accordingly, the Equity Shares are only being offered and sold outside the United States in "offshore transactions" as defined in and in reliance on Regulation S under the U.S. Securities Act and the applicable laws of the jurisdictions where such offers and sales are made. There will be no public offering of securities in the United States.

CONCEPT

ಬ್ಯಾರಿಕೇಡ್ ನಿರ್ಮಾಣಕ್ಕೆ 40 ಕೋಟಿ ಹಂಚಿಕೆ: ಸಚಿವ ಈಶ್ವರ್ ಖಂಡ್ರೆ

ಕಾಡಾನೆಗಳ ಹಾವಳಿಗೆ ಬ್ಯಾರಿಕೇಡ್

ರಾಮನಗರ: ಕಾಡಾನೆಗಳ ಹಾವಳಿ ತಪ್ಪಿಸಲು 26 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ 40 ಕೋಟಿ ರು. ಹಣ ಹಂಚಿಕೆ ಮಾಡಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಪ್ರಕಟಿಸಿದರು.

ರಾಮನಗರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶಾಸಕರುಗಳಾದ ಸಿ.ಪಿ. ಯೋಗೇಶ್ವರ್, ಇಕ್ಬಾಲ್ ಹುಸೇನ್ ಅವರೊಂದಿಗೆ ಉನ್ನತಮಟ್ಟದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಮನಗರ ಜಿಲ್ಲೆಯಲ್ಲಿ ಆನೆಗಳು ನಾಡಿಗೆ ಬಂದು ಬೆಳೆಹಾನಿ, ಜೀವಹಾನಿ ಮಾಡುತ್ತಿದ್ದು, ಇದನ್ನು ನಿಯಂತ್ರಿಸಲು ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು ಎಂದರು. ತಾವು ಸಚಿವರಾದ ತರುವಾಯ ರಾಮನಗರ ಜಿಲ್ಲೆಗೆ ಒಟ್ಟು 35 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಮಂಜೂರು ಮಾಡಿದ್ದು, ಈಗಾಗಲೇ 25 ಕಿ.ಮೀ. ಕಾಮಗಾರಿ ಪೂರ್ಣಗೊಂಡಿದೆ. ಉಳಿದ ಕಾಮಗಾರಿ ಪ್ರಗತಿಯಲ್ಲಿದೆ ಎಂದರು. ಜಿಲ್ಲೆಯಲ್ಲಿ ಆನೆ ಸಂಘರ್ಷ ಅತಿ ಹೆಚ್ಚು ಇರುವ ವಿಭಾಗ 85 ಇದ್ದರೆ, ಹೆಚ್ಚಿನ ಸಂಘರ್ಷ ಇರುವ 45 ವಿಭಾಗಗಳಿವೆ ಮತ್ತು ಮಧ್ಯಮ ಸಂಘರ್ಷದ 40 ವಿಭಾಗಗಳಿವೆ ಹೀಗಾಗಿ, ಆನೆಗಳು ಅರಣ್ಯದಿಂದ ಹೊರಗೆ ಬಂದ ಸಂದರ್ಭದಲ್ಲಿ ಗ್ರಾಮಸ್ಥರಿಗೆ ಈ ಬಗ್ಗೆ ವಾರದ ಏಳೂದಿನ, ದಿನದ 24 ಗಂಟೆ ಎಚ್ಚರಿಕೆ ಸಂದೇಶ ರವಾನಿಸಲು ವ್ಯವಸ್ಥೆ ಕಲ್ಪಿಸುವಂತೆ ಅಧಿಕಾರಿಗಳಿಗೆ ಈಶ್ವರ ಖಂಡ್ರೆ ಸೂಚಿಸಿದರು.

ಕಾಡ್ಗಿಚ್ಚು ನಿಯಂತ್ರಣಕ್ಕೆ ಸೂಚನೆ: ಬೇಸಿಗೆಯಲ್ಲಿ ಅರಣ್ಯ ಪ್ರದೇಶದಲ್ಲಿ ಕಾಡ್ಗಿಚ್ಚು ಸಂಭವಿಸದಂತೆ ಹಾಗೂ ಬೆಂಕಿ ರೇಖೆ ನಿರ್ಮಿಸಲು ಕ್ರಮ ವಹಿಸುವಂತೆ ಹಾಗೂ ಅಗ್ನಿಶಾಮಕ ಸಲಕರಣಗಳ ಸನ್ನದ್ಧತೆ ಸೇರಿದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ರಾಮನಗರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶಾಸಕರುಗಳಾದ ಸಿ.ಪಿ. ಯೋಗೇಶ್ವರ್, ಇಕ್ಬಾಲ್ ಹುಸೇನ್ ಅವರೊಂದಿಗೆ ಸಚಿವ ಈಶ್ವರ ಬಿ.ಖಂಡ್ರೆ ಉನ್ನತಮಟ್ಟದ ಸಭೆ ನಡೆಸಿದರು.

ಆನೆ ವಿಹಾರ ಧಾಮ

ಭದ್ರಾ ಅಭಯಾರಣ್ಯದಲ್ಲಿ ಆನೆಗಳ ವಿಹಾರಧಾಮ (ಎಲಿಫೆಂಟ್ ಸಾಫ್ಟ್ ರಿಲೀಸ್ ಸೆಂಟರ್) ನಿರ್ಮಿಸುವುದಾಗಿ ಘೋಷಿಸಿರುವ ರೀತಿಯಲ್ಲೇ, ರಾಮನಗರ ಜಿಲ್ಲೆಯಲ್ಲಿ ಕೂಡ ಮುತ್ತತ್ತಿ ಅಥವಾ ನೇರಳಹಟ್ಟಿ ಬಳಿ ಆನೆ ವಿಹಾರ ಧಾಮ ಸ್ಥಾಪಿಸುವ ಮೂಲಕ ರಾತ್ರಿಯ ವೇಳೆ ನಾಡಿಗೆ ಬಂದು ಬೆಳೆ ತಿಂದು ರಾತ್ರಿ ಕಾಡಿಗೆ ಹೋಗುವ ಆನೆಗಳ ಹಾವಳಿ ತಪ್ಪಿಸಬೇಕು ಎಂಬ ಶಾಸಕರ ಮನವಿಗೆ ಸ್ಪಂದಿಸಿದ ಈಶ್ವರ ಖಂಡ್ರೆ, ಈ ಸಂಬಂಧ ಪರಿಶೀಲಿಸಿ ಕ್ರಮ ವಹಿಸುವ ಭರವಸೆ ನೀಡಿದರು.

ಅರಣ್ಯ ಪ್ರದೇಶದೊಳಗೆ ಆನೆ ಸೇರಿದಂತೆ ಎಲ್ಲ ವನ್ಯಜೀವಿಗಳಿಗೆ ಕುಡಿಯುವ ನೀರು ಮತ್ತು ಆಹಾರದ ಲಭ್ಯತೆಯ ಖಾತ್ರಿ ಪಡಿಸಲು ಕ್ರಮ ವಹಿಸಿ. ಬೇಸಿಗೆಯಲ್ಲಿ ಕಾವೇರಿ ವನ್ಯಜೀವಿ ಧಾಮ ಸೇರಿದಂತೆ ಜಿಲ್ಲೆಯ ಎಲ್ಲ ಅರಣ್ಯಗಳಲ್ಲಿರುವ ನೀರು ಗುಂಡಿಗಳಲ್ಲಿ ನೀರು, ಅಗತ್ಯ ಇರುವ ಕಡೆ ಕೊಳವೆಬಾವಿಗಳಿಗೆ ಸೌರ ಪಂಪ್ ಸೆಟ್ ಅಳವಡಿಸಿ ನಿರಂತರವಾಗಿ ನೀರು ಹಾಯಿಸಲು ಕ್ರಮ ವಹಿಸಬೇಕು.

ಈಶ್ವರ್ ಬಿ.ಖಂಡ್ರೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ

ನಿಮ್ಮ ಪೋಷಕರ ಕನಸು ನನಸಾಗಲು ಪಣ ತೊಡಿ

ಬಸವನಿಕೇತನ ಎಜುಕೇಷನ್ ಶಿಕ್ಷಣ ಸಂಸ್ಥೆ ಶಾಲಾ ವಾರ್ಷಿಕೋತ್ಸವವನ್ನು ಎಚ್.ಸಿ.ಬಸವರಾಜು ಉದ್ಘಾಟಿಸಿದರು.

ಪಿರಿಯಾಪಟ್ಟಣ: ವಿದ್ಯಾರ್ಥಿಗಳು ಪೋಷಕರ ಭಾವನೆಗಳಿಗೆ ಬೆಲೆಕೊಟ್ಟು ಉತ್ತಮವಾಗಿ ವಿದ್ಯಾಭ್ಯಾಸ ನಡೆಸಬೇಕು ಎಂದು ಮಾಜಿ ಶಾಸಕ ಹಾಗೂ ಬಸವನಿಕೇತನ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಎಚ್.ಸಿ.ಬಸವರಾಜು ತಿಳಿಸಿದರು.

ಪಟ್ಟಣದ ಹೊರವಲಯದಲ್ಲಿ ಹರವೆ ಮಲ್ಲರಾಜಪಟ್ಟಣದ ಬಸವನಿಕೇತನ ಎಜುಕೇಷನ್ ಶಿಕ್ಷಣ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದರು. ವಿದ್ಯಾರ್ಥಿಗಳು ಸಮಾಜದ ಎಲ್ಲಾ ಕ್ಷೇತ್ರಗಳ 'ಲ್ಲೂ ಪಾಲ್ಗೊಳ್ಳುವ ಸಾಮರ್ಥ್ಯ ಪಡೆದು ಇರುವ ಅವಕಾಶ ಬಳಸಿಕೊಂಡು ಜೀವನದಲ್ಲಿ ಯಶಸ್ಸು ಪಡೆಯಬೇಕು. ಎಲ್ಲಾ ವಿಷಯಗಳನ್ನು ಅರಿತಾಗ ಮಾತ್ರ ವಿಕಸನ ಸಾಧ್ಯ ಎಂದರು. ಬಸವನಿಕೇತನ ಎಜುಕೇಷನ್ ಟ್ರಸ್ಟ್ ವತಿಯಿಂದ ದಶಕಗಳ ಹಿಂದೆಯೇ ವಿದ್ಯಾಸಂಸ್ಥೆ ಆರಂಭಿಸಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಿ ಮಾನವೀಯ ಮೌಲ್ಯಗಳನ್ನು ಕಲಿಸುವಲ್ಲಿ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ. ಮಕ್ಕಳು ಸ್ಪರ್ಧಾತ್ಮಕ ಯುಗದಲ್ಲಿ ಇದನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ಪ್ರಾಂಶುಪಾಲ ರುದ್ರೇಶ್ ಮಾತನಾಡಿ, ಸಣ್ಣ ಮನೆಯೊಂದರಲ್ಲಿ ಆರಂಭವಾದ ನಮ್ಮ ಶಾಲೆ ಪಾಲಕರ ಸಹಕಾರದಿಂದ ಉನ್ನತ ಮಟ್ಟದಲ್ಲಿ ಬೆಳೆದು ನಿಂತಿದೆ. ವಿದ್ಯಾರ್ಥಿಗಳು ಭವಿಷ್ಯವನ್ನು ರೂಪಿಸಿಕೊಳ್ಳುವುದರತ್ತ ಚಿಂತಿಸಬೇಕು ಎಂದು ಕಿವಿ ಮಾತು ಹೇಳಿದರು. ಸಂಸ್ಥೆಯಿಂದ ಆಯೋಜಿಸಿದ ಕ್ರೀಡಾಕೂಟದಲ್ಲಿ ವಿಜೇತ ವಿದ್ಯಾರ್ಥಿಗಳಿಗೆ, ಪಾಲಕರಿಗೆ ಬಹುಮಾನ ವಿತರಿಸಿದರು.

ಈ ವೇಳೆ ಉಪಾಧ್ಯಕ್ಷ ಶಿವಸ್ವಾಮಿ, ಕಾರ್ಯದರ್ಶಿ ಸಿ.ಎಸ್ ಮಂಜುನಾಥ್, ನಿರ್ದೇಶಕರಾದ ಆದರ್ಶ್ ಪಟೇಲ್, ಬ್ರಿಜೇಸ್, ವೀರಣ್ಣ, ಉಪನ್ಯಾಸಕ ದರ್ಶನ್ ಕುಮಾರ್, ಹಿರಿಯ ವಿದ್ಯಾರ್ಥಿ ಡಾ.ರಾಜೇಶ್ವರಿ, ಶಾಲಾ ಮುಖ್ಯ ಶಿಕ್ಷಕ ಕೆ.ಎಸ್.ಲೋಕೇಶ್ ಇದ್ದರು.

ವಿರಾಮ
ಪ್ರತಿ ಭಾನುವಾರ

2ನೇ ಅಧಿಕ ಸಿವಿಲ್ ನ್ಯಾಯಾದೀಶರವರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ತುಮಕೂರು
ಅಸಲು ದಾವಾ ಸಂ: 310/2024

ವಾದಿಗಳು : ತೇಜಸ್ವಿನಿ ಮತ್ತು ಇನ್ನೊಬ್ಬರು
ವಿರುದ್ಧ
ಪ್ರತಿವಾದಿಗಳು : ಪುಟ್ಟಲಕ್ಷ್ಮಮ್ಮ ಮತ್ತು ಇತರರು
ಪ್ರತಿವಾದಿಗಳು 2 ರಿಂದ 5.
ಪ್ರತಿವಾದಿ 2 ತಿಮ್ಮಪ್ಪ ಬಿನ್ ಲೇಟ್ ನಾರಾಯಪ್ಪ, ವಯಸ್ಸು 55 ವರ್ಷ.
ಪ್ರತಿವಾದಿ 3 ರತ್ನಮ್ಮ ಕೋಂ ತಿಮ್ಮಪ್ಪ, ವಯಸ್ಸು 40 ವರ್ಷ.
ಪ್ರತಿವಾದಿ 4 ವಿಜಯ ಸಾರಥಿ ಬಿನ್ ತಿಮ್ಮಪ್ಪ, ವಯಸ್ಸು 10 ವರ್ಷ, ಮೈನರ್ ಗಾರ್ಡಿಯನ್ ಆಗಿ ಶ್ರೀಮತಿ ರತ್ನಮ್ಮ ಅಂದರೆ ಪ್ರತಿವಾದಿ 3 ಪ್ರತಿನಿಧಿಸುತ್ತಾರೆ.
2 ರಿಂದ 4 ರವರ ವಾಸ :- ಶಾಮ ನಿಲಯ, ಅರಳಿಮರದಪಾಳ್ಯ, ಶಿರಾ ಗೇಟ್, ತುಮಕೂರು ಟೌನ್ ಪ್ರತಿವಾದಿ 5 ಮಂಜಮ್ಮ ಕೋಂ ರಂಗಪ್ಪ ಬಿನ್ ಲೇಟ್ ನಾರಾಯಪ್ಪ, ವಯಸ್ಸು 57 ವರ್ಷ ವಾಸ : ಮಾಯಸಂದ್ರ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ, ಬೆಂಗಳೂರು.

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ ನ್ಯಾಯಾಲಯದಲ್ಲಿ ವಾದಿಗಳು ನಿಮ್ಮ ವಿರುದ್ಧ ಮತ್ತು ಇತರರ ವಿರುದ್ಧ ಈ ಘನ ನ್ಯಾಯಾಲಯದಲ್ಲಿ ವಿಭಾಗಕ್ಕಾಗಿ ಅಸಲು ದಾವಾ ಸಂ. 310/2024 ರಂತೆ ಮೂಲ ದಾವೆ ಸಲ್ಲಿಸಿರುತ್ತಾರೆ. ಈ ದಾವೆಯಲ್ಲಿ 2 ರಿಂದ 5ನೇ ಪ್ರತಿವಾದಿಗಳಾದ ನಿಮಗೆ ನ್ಯಾಯಾಲಯಕ್ಕೆ ಹಾಜರಾಗಲೂ ನ್ಯಾಯಾಲಯದಿಂದ ಹಲವಾರು ಬಾರಿ ಸಮನ್ಸ್ ನೀಡಲಾಗಿತ್ತು ಮತ್ತು ನೋಂದಾಯಿತ ಅಂಚೆ ಮೂಲಕ ಸಹ ಸಮನ್ಸ್ ನೀಡಾಲಾಗಿದ್ದರೂ ಸಹ ನೀವುಗಳು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ.

ಆದ್ದರಿಂದ ಈ ಘನ್ಯ ನ್ಯಾಯಾಲಯದ ಆದೇಶದಂತೆ ಈ ಪ್ರಕಟಣೆ ಮೂಲಕ ಈ ಮೇಲ್ಕಂಡ ದಾವೆಯಲ್ಲಿ ದಿನಾಂಕ 01/03/2025 ರಂದು ನೀವುಗಳು ಹಾಜರಾಗಲೂ ತಿಳಿಯಪಡಿಸಿರುತ್ತದೆ.

ಆದ್ದರಿಂದ 2 ರಿಂ 5ನೇ ಪ್ರತಿವಾದಿಗಳಾದ ನೀವು ದಿನಾಂಕ 01/03/2025 ರಲ್ಲಿ ನೀವೇ ಖುದ್ದಾಗಿ ಆಗಲೀ ಅಥವಾ ನಿಮ್ಮಿಂದ ಅಧಿಕಾರ ಪಡೆದ ವಕೀಲರ ಮೂಲಕವಾಗಲೀ ಹಾಜರಾಗತಕ್ಕದ್ದು, ಹಾಗೇ ಒಂದು ವೇಳೆ ನೀವು ಕೇಸಿಗೆ ದಿನಾಂಕ 01/03/2025 ರಂದು ಬೆಳಿಗ್ಗೆ 11 ಗಂಟೆಗೆ ಹಾಜರಾಗದಿದ್ದಲ್ಲಿ ಈ ಘನ ನ್ಯಾಯಾಲಯವು ನೀವುಗಳು ಗೈರು ಹಾಜರಿ ಎಂದು ಪರಿಗಣಿಸಿ ನಿಮ್ಮ ಮೇಲೆ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಈ ಮೂಲಕ ತಿಳಿಯಪಡಿಸಿರುತ್ತದೆ.

ಮೇಲ್ಕಂಡ ಈ ಘನ ನ್ಯಾಯಾಲಯದ ಆದೇಶದಂತೆ ನ್ಯಾಯಾಲಯದ ಮೊಹರಿನೊಂದಿಗೆ ಈ ದಿನ ಅಂದರೆ 23/01/2025 ರಂದು ಸಹಿ ಮಾಡಲಾಗಿದೆ.

ದಾವಾ ಷೆಡ್ಯೂಲ್

1. ಸರ್ವೆ ನಂ. 106/2 ಒಟ್ಟು ವಿಸ್ತೀರ್ಣ 5 ಎಕರೆ 38 ಗುಂಟೆ ಖರಾಬು 2 ಗುಂಟೆ ಉಳಿದದ್ದು 5 ಎಕರೆ 36 ಗುಂಟೆ ಇದರ ಪೈಕಿ 2 ಎಕರೆ ಜಮೀನು ಅಹೋಬಲ ಅಗ್ರಹಾರ ಗ್ರಾಮ, ಕೋರಾ ಹೋಬಳ್ಳಿ, ತುಮಕೂರು ತಾಲ್ಲೂಕು. ಇದರ ಚಕ್ಕುಬಂದಿ ಪೂರ್ವಕ್ಕೆ- ಗಿರಿಯಪ್ಪ ರವರ ಜಮೀನು ಪಶ್ಚಿಮಕ್ಕೆ – ಚಿಕ್ಕೀರಪ್ಪ ರವರ ಜಮೀನು ಉತ್ತರಕ್ಕೆ – ರಾಮಣ್ಣ ರವರ ಜಮೀನು ದಕ್ಷಿಣಕ್ಕೆ ಸರ್ಕಾರಿ ಜಮೀನು.
2. ಮನೆಯ ಸ್ವತ್ತಿನ ಸಂ. 139, ಸ್ವತ್ತಿನ ಸಂ. 02 ಒಟ್ಟು ವಿಸ್ತೀರ್ಣ ಪೂರ್ವ-ಪಶ್ಚಿಮ 45 ಅಡಿ ಉತ್ತರ-ದಕ್ಷಿಣ 30, ಬೆಳಧರ ಗ್ರಾಮ ಪಂಚಾಯಿತಿ ಚಿನಿವಾರದಹಳ್ಳಿ ಗ್ರಾಮ ಕೋರಾ ಹೋಬಳಿ, ತುಮಕೂರು ತಾಲ್ಲೋಕು. ಇದರ ಚಕ್ಕುಬಂದಿ:- ಪೂರ್ವ-ಗ್ರಾಮಠಾಣಾ ಮತ್ತು ಸರ್ಕಾರಿ ಶಾಲೆ ಪಶ್ಚಿಮಕ್ಕೆ- ಕುಡಿಯುವ ನೀರಿನ ಬಾವಿ ಉತ್ತರಕ್ಕೆ – ಸರ್ಕಾರಿ ರಸ್ತೆ, ದಕ್ಷಿಣಕ್ಕೆ ಮಮತ ರವರ- ನಿವೇಶನ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು.
2ನೇ ಅಧಿಕ ಸಿವಿಲ್ ನ್ಯಾಯಾದೀಶರವರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ತುಮಕೂರು.
ವಾದಿಗಳ ಪರ ವಕೀಲರು
ಎಂ ಸಿ. ಮಲ್ಲಿಕಾರ್ಜುನಯ್ಯ,
ದಿನಾಂಕ: 23/1/2025

'ನಮ್ಮೂರಿಗೆ ನಮ್ಮ ಶಾಸಕ' ಕಾರ್ಯಕ್ರಮದಲ್ಲಿ ದಿನ್ನಹಳ್ಳಿ ಗ್ರಾಮದ ಸಂತ್ರಸ್ತರ ಅಳಲು

ಫೈನಾನ್ಸ್ ಹಾವಳಿಯಿಂದ ಕಾಪಾಡಿ: ಶಾಸಕ ಪ್ರದೀಪ್ ಈಶ್ವರ್ ಅಭಯ

ಚಿಕ್ಕಬಳ್ಳಾಪುರ: ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಹಾವಳಿ ಮಿತಿಮೀರಿರುವ ನಡುವೆ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕೂಡ ಮಂಗಳವಾರ ಶಾಸಕ ಪ್ರದೀಪ್ ಈಶ್ವರ್‌ಗೆ ಇದರ ಬಿಸಿ ತಟ್ಟಿತು,

ಹೌದು ಕಮ್ಮಗುಟ್ಟಹಳ್ಳಿ ಪಂಚಾಯಿತಿ ದಿನ್ನಹಳ್ಳಿ ಗ್ರಾಮದಲ್ಲಿ ಮಂಗಳವಾರ ಶಾಸಕ ಪ್ರದೀಪ್ ಈಶ್ವರ್ ಹಮ್ಮಿಕೊಂಡಿದ್ದ ನಮ್ಮೂರಿಗೆ ನಮ್ಮ ಶಾಸಕ ಕಾರ್ಯಕ್ರಮದಲ್ಲಿ ಮಂಡಿಕಲ್‌ನ ಅಮ್ರಿನ್ ಬಾನು, ಸ್ವಾತಿ, ಮಂಜಮ್ಮ, ನಾಜಿಯಾಭಾನು ಸೇರಿ 18ಕ್ಕೂ ಹೆಚ್ಚು ಮಹಿಳೆಯರು ದಿನ್ನಹಳ್ಳಿ ಗ್ರಾಮಕ್ಕೆ ಆಗಮಿಸಿ ಶಾಸಕ ಪ್ರದೀಪ್ ಈಶ್ವರ್‌ಗೆ ಮೈಕ್ರೋ ಫೈನಾನ್ಸ್ ಕಿರುಕುಳವನ್ನು ಎಳೆಎಳೆಯಾಗಿ ಬಿಚ್ಚಿಟ್ಟದ್ದು ಕಂಡು ಶಾಸಕರಾದಿಯಾಗಿ ತಹಸೀಲ್ದಾರ್,ಇಒ. ಇತರೆ ಅಧಿಕಾರಿಗಳೇ ಹೌಹಾರಿದರು. ದಿನಕ್ಕೆ ಒಬ್ಬೊಬ್ಬರಂತೆ ಯಾರು ಯಾರೋ ಬರುತ್ತಾರೆ. ಮಹಿಳೆಯರು ಮಕ್ಕಳು ಎಂಬುದನ್ನು ನೋಡದೆ ಹಣ ಕೊಡುವವರೆಗೆ ಮನೆ ಬಿಟ್ಟು ಹೋಗುವುದೇ ಇಲ್ಲ,ಗಂಡಸರು ಇಲ್ಲ, ಆಮೇಲೆ ಬನ್ನಿ,ನಮ್ಮ ಬಳಿ ಈಗ ಹಣ ಎಂದರೆ ನೀವಿದ್ದೀರಲ್ಲ ಎಂದು ಅವಮಾನ ಮಾಡುತ್ತಾರೆ. ದಯವಿಟ್ಟು ನಮಗೆ ಇದರಿಂದ ಮುಕ್ತಿಕೊಡಿಸಿ ಎನ್ನುತ್ತಾ ರಮೀಜಾ ಕಣ್ಣೀರಾದರು.

ಮಹಿಳೆಯ ಅಹವಾಲು ಸ್ವೀಕರಿಸಿ ಮಾತನಾಡಿದ ಶಾಸಕ ಪ್ರದೀಪ್ ಈಶ್ವರ್ ಅಳಬೇಡಿ ಅಮ್ಮ, ಸಾಲಕೊಟ್ಟವರು, ಕಾನೂನಿನಂತೆ ಸಾಲಮರುಪಾವತಿ ಮಾಡಿ ಎಂದು ಕೇಳಬೇಕೇ ವಿನಃ ಬಾಯಿಗೆ ಬಂದಂತೆ ಮಾತನಾಡಬಾರದು.ಇನ್ನೊಮ್ಮೆ ಅವರು ಹೀಗೆಲ್ಲಾ ಮಾತನಾಡಿದರೆ ಅದನ್ನು ವಿಡಿಯೋ ಮಾಡಿಕೊಂಡು ಪೊಲೀಸರಿಗೆ ದೂರು ನೀಡಿ.ನಾನೂ ಕೂಡ ಮಾತನಾಡುತ್ತೇನೆ. ನಮ್ಮ ಸರಕಾರ ಇದಕ್ಕಾಗಿ ವಿಶೇಷ ಕಾಯ್ದೆ ತರಲು ಮುಂದಾಗಿದೆ ಎಂದು ಧೈರ್ಯ ತುಂಬಿದರು.

ಇದಕ್ಕೂ ಮೊದಲು ಚಿಕ್ಕನಾರಪ್ಪನಹಳ್ಳಿ,ಕೊಮ್ಮಲಮರಿ ಗ್ರಾಮಕ್ಕೆ ಭೇಟಿ ನೀಡಿದ್ದ ಶಾಸಕ ಪ್ರದೀಪ್ ಈಶ್ವರ್ ಅಕ್ಷರಶಃ ಜನರ ಜತೆ ಅವರಂತೆ ಬೆರೆತು ಸಮಸ್ಯೆ ಆಲಿಸಿದರು ಮಂಗಳವಾರ ಬೆಳಗ್ಗೆ 8 ಗಂಟೆ ಸುಮಾರಿಗೆ 113ನೇ ಹಳ್ಳಿಯಾದ ತಾಲೂಕಿನ ಚಿಕ್ಕನಾರಪ್ಪನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿದ ಶಾಸಕರು,ಅಲ್ಲಿನ ಸಮಸ್ಯೆಗಳನ್ನು ಆಲಿಸಿದರು. ಇದೇ ಗ್ರಾಮದಲ್ಲಿ ಜನರೊಂದಿಗೆ ನಿಂತುಕೊಂಡು ತಿಂಡಿ ತಿಂದ ಶಾಸಕ ತಿಂಡಿ ತಿನ್ನುವಾಗಲೂ ಸಮಸ್ಯೆಗಳನ್ನು ಆಲಿಸಿ ಪರಿಹಾರದ ಬಗ್ಗೆ ಮಾತನಾಡಿದ್ದು ವಿಶೇಷವಾಗಿತ್ತು.

ಚಿಕ್ಕಬಳ್ಳಾಪುರ ತಾಲೂಕು ಕಮ್ಮಗುಟ್ಟಹಳ್ಳಿ ಪಂಚಾಯಿತಿ ಚಿಕ್ಕನಾರೇಪಲ್ಲಿ,ಕೊಮ್ಮಲ ಮರಿ, ದಿನ್ನಹಳ್ಳಿ ಗ್ರಾಮಗಳಲ್ಲಿ ಶಾಸಕ ಪ್ರದೀಪ್ ಈಶ್ವರ್ ನಮ್ಮೂರಿಗೆ ನಮ್ಮ ಶಾಸಕ ಕಾರ್ಯಕ್ರಮ ನಡೆಸಿಕೊಟ್ಟರು.

ಗುಡಿಬಂಡೆ, ಚಿಕ್ಕಬಳ್ಳಾಪುರದಿಂದ ನಮ್ಮ ಗ್ರಾಮಕ್ಕೆ ಬಸ್ ವ್ಯವಸ್ಥೆ ಮಾಡಿಕೊಡಿ ಎಂದು ಅಂತಿಮ ಬಿಕಾಂ ವಿದ್ಯಾರ್ಥಿನಿ ಗಂಗೋತ್ರಿ ಶಾಸಕರಿಗೆ ಮನವಿ ಮಾಡಿದರು. ಬಸ್ ವ್ಯವಸ್ಥೆಗೆ ಭರವಸೆ ನೀಡಿದರು.

ಸ್ಮಶಾನ ಜಾಗ: ಸ್ಮಶಾನ ಜಾಗ ಎಲ್ಲಿದೆ ಎಂಬುದೇ ನಮಗೆ ಗೊತ್ತಿಲ್ಲ. ನಮ್ಮ ಹೊಲಗಳಲ್ಲೇ ಶವಸಂಸ್ಕಾರ ಮಾಡಿಕೊಳ್ಳುತ್ತಿದ್ದೇವೆ ಎಂದು ಕೊಮ್ಮಲಮರಿ ಗ್ರಾಮಸ್ಥರು ತಿಳಿಸಿದರು. ಶಾಸಕರ ಪಕ್ಕದಲ್ಲೇ ಕುಳಿತಿದ್ದ ಕಂದಾಯ ಅಧಿಕಾರಿ, ಎರಡು ದಿನಗಳಲ್ಲಿ ಸ್ಥಳ ಪರಿಶೀಲನೆ ನಡೆಸಿ, ಎರಡು ಎಕರೆ ಸ್ಮಶಾನ ಜಾಗ ಗುರುತಿಸುವುದಾಗಿ ಉತ್ತರಿಸಿದರು. ದಿನ್ನಹಳ್ಳಿಗೆ ಭೇಟಿ ನೀಡಿದ ಶಾಸಕರು ಅಲ್ಲಿನ ಜನರ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಅನಿಲ್ ಕುಮಾರ್, ಇ.ಒ.ಮಂಜುನಾಥ್,ತಾಲೂಕು ಸಮಾಜಕಲ್ಯಾಣ ಅಧಿಕಾರಿ ಶೇಷಾದ್ರಿ, ತಾಲೂಕು ಆರೋಗ್ಯಾಧಿಕಾರಿ ಮಂಜುಳ,ಸಮುದಾಯ ಆರೋಗ್ಯಾಧಿಕಾರಿ ಶ್ವೇತ, ಕಮ್ಮಗುಟ್ಟಹಳ್ಳಿ ಗ್ರಾಪಂ ಪಿಡಿಒ, ಬೆಸ್ಕಾಂ ಎಇ, ಆಶಾ ಕಾರ್ಯಕರ್ತೆಯರು, ಕಾಂಗ್ರೆಸ್ ಕಾರ್ಯಕರ್ತರು ಇದ್ದರು.

ಕಾಣೆಯಾಗಿದ್ದಾರೆ



ವಿನೋದ್ ಬಾಬು ಟಿ.ಎಸ್ (ಬಾಬಣ್ಣ)

ವಯಸ್ಸು (60) ಲಿಂಗಾಯತ ಸಮುದಾಯಕ್ಕೆ ಸೇರಿದವರಾಗಿದ್ದು, ತಿಪಟೂರು ತಾಲೂಕು, ಹೆಡಗರಹಳ್ಳಿ ಕಾಲೋನಿಯ ವಾಸಿಯಾಗಿದ್ದು, ಬಸ್ ಏಜೆಂಟರಾಗಿ ಕೆಲಸ ಮಾಡುತ್ತಿದ್ದರು. ಕೆಂಪು ಬಣ್ಣದ ಚೆಕ್ಸ್ ಶರ್ಟ್ ಹಾಗೂ ನೀಲಿ ಬಣ್ಣದ ಪಂಚೆ ಧರಿಸಿದ್ದಾರೆ. 5 ಅಡಿ 11 ಇಂಚು ಎತ್ತರ, ಗೋಧಿ ಮೈಬಣ್ಣ ಹಾಗೂ ದೃಢಕಾಯ ಶರೀರವನ್ನು ಹೊಂದಿದ್ದಾರೆ. ದಿನಾಂಕ 8.10.2024 ರಂದು ಕಾಣೆಯಾಗಿದ್ದು, ನೊಣವಿನಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ವ್ಯಕ್ತಿಯು ಕಂಡು ಬಂದಲ್ಲಿ ದಯವಿಟ್ಟು ಈ ಕೆಳಗಿನ ಮೊಬೈಲ್ ನಂಬರ್‌ಗೆ ಕರೆ ಮಾಡಿ.

ಪುನೀತ್.
9844099113
7975650875

ಬಿ ಪಾಸಿಟಿವ್

ನೀರಿನಿಂದ ಕಲಿವ ಪಾಠ

ಜೀವಸೆಲೆಯಾದ ನೀರು ಪ್ರಕೃತಿಯು ನಮಗೆ ನೀಡಿದ ವರಗಳಲ್ಲಿ ಬಹು ಮುಖ್ಯವಾದದ್ದು. ಜೀವ ಜಗತ್ತಿನ ದಾಹವನ್ನು ತೀರಿಸುವ ಜಲಮಾತೆಯು ಪೂಜ್ಯನೀಯಳು. ನಿಸರ್ಗದ ಪ್ರತಿಯೊಂದು ಭಾಗವೂ ನಮಗೆ ಗುರುವಿನಂತೆ. ಅವುಗಳೆಡೆಗೆ ಸೂಕ್ಷ್ಮ ದೃಷ್ಟಿಯಿಂದ ನಮ್ಮ ಮನಸ್ಸನ್ನು ಹರಿಸಿದಾಗ ಅವು ಹೇಳುವ ಸುಪ್ತ ಭಾವಗಳು ನಮ್ಮ ಅರಿವಿಗೆ ಬರುವವು. ನೀರಿನ ಹರಿವನ್ನು ನಾವು ಗಮನಿಸಿದರೆ ಅದು ಹೇಳುವ ಪಾಠವು ಬೆಲೆ ಕಟ್ಟಲಾಗದ್ದು ಎನಿಸಿಬಿಡುತ್ತದೆ. ಅದರ ಬಹು ವಿಶಿಷ್ಟ ಗುಣವೆಂದರೆ ತನಗೆ ಒದಗಿ ಬರುವ ಹರಿವು, ಪಾತಳಿ, ಆಕಾರ, ಆಕರಗಳಿಗೆ ಅನುಗುಣವಾಗಿ ತನ್ನನ್ನು ಒಡ್ಡಿಕೊಳ್ಳುವ ಜಾಯಮಾನ. ನೀರನ್ನು ಪಾತ್ರೆಯಲ್ಲಿ, ಬಾವಿಯಲ್ಲಿ, ಹೊಳೆಯಲ್ಲಿ, ಕಲ್ಲಿನ ಕೊರಕಲಿನಲ್ಲಿ ಎಲ್ಲಿ ನೋಡಿದರೂ ಅದು ಆ ಸನ್ನಿವೇಶಕ್ಕೆ ತನ್ನ ಹರಿವನ್ನು ಬದಲಿಸಿಕೊಂಡು ಇರುವುದು.

ಬದುಕೆಂಬ ಒರತೆಯಲ್ಲಿ ನಾವೂ ನೀರಿನಂತೆ ಆಗಬೇಕು. ತಾಪತ್ರಯಗಳ ಕೊರಕಲು, ಸವಾಲುಗಳ ಹೆಬ್ಬಂಡೆಗಳು, ನೋವಿನ ಪ್ರಪಾತಗಳು, ಅವಮಾನ, ವ್ಯಂಗದ ಇಂಗಲಾರದ ಬಾವಿಗಳು ಹೀಗೆ ಎಲ್ಲ ಬಗೆಯ ಬದಲಾಗುವ ವಾತಾವರಣಕ್ಕೆ ನಮ್ಮನ್ನು ನಾವು ಒಂದು ಅಸಾಧಾರಣ ಸ್ಥಿತಪ್ರಜ್ಞತೆಯಿಂದ ಹೊಂದಿಸಿಕೊಂಡು ಹರಿಯಬೇಕು. ನದಿಯು ಬಹು ದೂರ ಕ್ರಮಿಸಿ ಸಮುದ್ರದಲ್ಲಿ ಒಂದಾಗುವ ಪರಿಯಲ್ಲಿ ನಮ್ಮೆಲ್ಲರ ಪಯಣದ ಅಂತಿಮ ಗಮ್ಯವು ಸಮಾನವಾಗಿರುವುದು.

ಜಲವು ನಮ್ಮ ಎದೆಯ ತಾಪವನ್ನು ತಣಿಸಿದಂತೆ, ನಾವು ನಮ್ಮ ಇತಿ ಮಿತಿಯಲ್ಲಿ ಇತರರ ನೋವನ್ನು ಶಮನಮಾಡಲು ದಾರಿಯಾಗಬೇಕು. ಎತ್ತರದಿಂದ ಬೀಳುವ ನೀರು ವಿದ್ಯುತ್ತನ್ನು ಉತ್ಪಾದಿಸುವ ಮೂಲವಾದಂತೆ, ನಾವು ನಮ್ಮ ಉನ್ನತ ನಡೆತೆಯಿಂದ ಸಮಾಜವನ್ನು ಬೆಳಗಬೇಕು. ಮನದ ಏರಿಳಿತಗಳನ್ನು ತಹಬಂದಿಗೆ ತರುವ ನಮ್ಮ ಸಾಧನೆಗೆ ನೀರು ದೃಷ್ಟಾಂತವಾಗಬಲ್ಲುದು. ಬಗ್ಗಡಗೊಂಡ ನೀರು ಸ್ವಲ್ಪ ಸಮಯ ಹಾಗೇ ಬಿಟ್ಟರೆ ತಿಳಿಯಾಗುವುದು. ಅದೇ ತೆರನಲ್ಲಿ, ಉದ್ವಿಗ್ನಗೊಂಡ ನಮ್ಮ ಮನವು ಶಮನವಾಗಲು, ಕೊಳದ ನೀರಿನಂತೆ ಕೆಲಕಾಲ ಸುಮ್ಮನೆ ಇದ್ದುಬಿಡಬೇಕು. ನಮ್ಮ ಇಹದ ಪಯಣವು ನಿಂತ ನೀರಾಗದೆ ಸದಾ ಹರಿಯುವ ತೊರೆಯಾದಾಗ, ಆಳವಾದ ಕಠಿಣ ಸುಳಿಯಿಂದ ಮೇಲೆದ್ದು ಬರಬಲ್ಲೆವು.

● ವಿದ್ಯಾಶಂಕರ ಶರ್ಮ

ಹನಿ ಮಳೆ

ಇಲ್ಲೂ ವಿವಾದ!

ಪ್ರಯಾಗದಿ ನಡೆದಿದೆ ಕುಂಭಮೇಳ
ಅನುದಿನ
ನೆರೆದಿಹರು ಸಾವಿರಾರು ಸಾಧು
ಸನ್ಯಾಸಿ ಜನ
ಆದರೆ ಇಲ್ಲೂ ಅಪಸ್ವರದ ಕಿಚ್ಚು
ವಿವಾದವೆಂದರೆ ರಾಜಕಾರಣಿಗಳಿಗೆ
ಅಚ್ಚು ಮೆಚ್ಚು!

● ಕಿರಣ್ ಕೊರ್ಕ್ಕರ್ಣೆ

ಮಾತಿನಲ್ಲಿ ಏನಿದೆ? ನೀವೇ ಹೇಳಿ..!

● ಜಯಶ್ರೀ ಕಾಲ್ಕುಂದ್ರಿ

ಉಳಿದೆಲ್ಲ ಜೀವಿಗಳಿಂದ ಮನುಷ್ಯನನ್ನು ಪ್ರತ್ಯೇಕಿಸುವ ಬಹುಮುಖ್ಯ ಲಕ್ಷಣವೆಂದರೆ ಆತನಿಗಿರುವ ಮಾತಾಡುವ ಸಾಮರ್ಥ್ಯ. ಮಾತನಾಡುವು ದನ್ನು ಅರಿಯದಿದ್ದ ಸಮಯದಲ್ಲಿಯೂ ಸಹ, ಆತ ಆಂಗಿಕ ಭಾಷೆಯನ್ನು ಬಳಸುವುದರ ಜೊತೆಗೆ, ವಿಶಿಷ್ಟ ಧ್ವನಿಗಳ ಮೂಲಕ ತನ್ನ ಸಹಜೀವಿಗಳೊಡನೆ ಸಂವಹನ ನಡೆಸಲು ಪ್ರಯತ್ನಿಸುತ್ತಿದ್ದನೆಲ್ಲಾಗಿದೆ. ಮಾತು ಸರಸ್ವತಿಯ ಸ್ವರೂಪವೆಂಬ ನಂಬಿಕೆಯಿದೆ. ಮಾತಿನಿಂದ ಅಕ್ಷರಗಳು ಮೂಡಿ, ಶಬ್ದಗಳ ರೂಪ ತಳೆದು ವಾಕ್ಯವೃಂದಗಳಾಗುತ್ತವೆ. ಮಾನವನ ಸಂಸ್ಕೃತಿ ಬೆಳೆದಂತೆ ಮಾತಿನ ಅಗತ್ಯವು ಸಹ ಬೆಳೆಯುತ್ತ ಬಂದಿತೆನ್ನಬಹುದು. ಮಾತಿನ ಮಹತ್ವ ಹೆಚ್ಚಿದಂತೆ, ನೋವು, ನಲಿವು, ಮೆಚ್ಚುಗೆ, ಮುನಿಸುಗಳು ಭಾವರೂಪ ತಳೆದು ಮಾತಿನಲ್ಲಿ ಮಿಳಿತಗೊಂಡವು.

ಮಾತು ಮನಸ್ಸಿನ ಅಭಿವ್ಯಕ್ತಿ ರೂಪ. 'ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು', ಎಂಬ ಗಾದೆ ಜನಮನದಲ್ಲಿದೆ. ಮಾತನಾಡುವುದಕ್ಕಿಂತ ಮುಂಚೆ ಈ ಮಾತನ್ನು ಹೇಗೆ ಆಡಲಿ, ಈ ಮಾತನ್ನು ಆಡಲೇಬೇಕೇ ಎಂದೆಲ್ಲ ಆಲೋಚಿಸುವವರ ಸಂಖ್ಯೆ ಇತ್ತೀಚಿಗೆ ಕಡಿಮೆಯಾಗಿದೆ! 'ಮಾತಿನಿಂ ನಗೆ-ನುಡಿಯು, ಮಾತಿನಿಂ ಹಗೆ ಕೊಲೆಯು, ಮಾತಿನಿಂ ಸರ್ವ ಸಂಪದವು ಲೋಕಕ್ಕೆ, ಮಾತೆ ಮಾಣಿಕವು'. ಸರ್ವಜ್ಞನ ಈ ನುಡಿಗಳು ಪ್ರಸ್ತುತ.

ಕಹಿ ಸತ್ಯಕ್ಕೆ ಸಿಹಿಯ ಲೇಪನ

ರಾಜನೊಬ್ಬ ದುಸ್ವಪ್ನವನ್ನು ಕಂಡಾಗ, ಆಸ್ಥಾನ ಜ್ಯೋತಿಷಿಯನ್ನು ಕರೆಯಿಸಿ ಅರ್ಥ ತಿಳಿಸಲು ಕೇಳಿದನಂತೆ. ಆ ಜ್ಯೋತಿಷಿ ರಾಜನನ್ನು ಕುರಿತು 'ನಿಮ್ಮ ಮುಂದೆಯೇ, ನಿಮ್ಮ ಮಕ್ಕಳು-ಮೊಮ್ಮಕ್ಕಳೆಲ್ಲಾ ಸಾವನ್ನಪ್ಪುತ್ತಾರೆ,' ಎಂದು ನುಡಿಯುತ್ತಾನೆ. ಜ್ಯೋತಿಷಿಯ ನುಡಿಗಳಿಂದ ಕುಪಿತನಾದ ರಾಜ, ಆ ಜ್ಯೋತಿಷಿಯನ್ನು ಸೆರೆಮನೆಗೆ ಅಟ್ಟುವಂತೆ ಆಜ್ಞಾಪಿಸುತ್ತಾನೆ. ಇನ್ನೊಬ್ಬ ಜ್ಯೋತಿಷಿ, ರಾಜನನ್ನು ಕುರಿತು, ಅದೇ ಭವಿಷ್ಯವನ್ನು ಇನ್ನೊಂದು ರೀತಿಯಲ್ಲಿ ಪ್ರಸ್ತುತ ಪಡಿಸುತ್ತಾ, 'ಮಹಾರಾಜ, ನಿಮ್ಮ ಮಕ್ಕಳು-ಮೊಮ್ಮಕ್ಕಳಿಗಿಂತ ನೀವೇ ದೀರ್ಘಕಾಲ ಜೀವಿಸುತ್ತೀರಿ', ಎಂದು ಸೌಜನ್ಯಪೂರ್ವಕವಾಗಿ ನುಡಿದಾಗ, ರಾಜನು ಆತನಿಗೆ ಬಹುಮಾನವನ್ನಿತ್ತು ಗೌರವಿಸುತ್ತಾನೆ. ಇದು ಮಾತಿನ ಮಹತ್ವವನ್ನು ಬಿಂಬಿಸುತ್ತದೆ.

ರಸ್ತೆಯಲ್ಲಿ ಮಹಿಳೆಯರನ್ನು ಕುರಿತು ಪರಿಹಾಸ್ಯ, ಟೀಕೆಯ ಮಾತುಗಳು, ಅಧಿಕಾರಿಯಾಗಿದ್ದರೆ ಕೆಳಹಂತದ ಉದ್ಯೋಗಿಗಳೊಡನೆ ಏರುದನಿ, ಮನೆಯ ಕೆಲಸದವರೊಡನೆ ಕೋಪದ ಮಾತುಗಳು ವಾತಾವರಣವನ್ನೇ ಕಲುಷಿತಗೊಳಿಸಿಬಿಡುತ್ತವೆ.

ಸಂಘರ್ಷ ನಿವಾರಣೆ

ಪರಿಣಾಮಕಾರಿ ಸಂವಹನಕ್ಕಾಗಿ ಉತ್ತಮ ಪದಗಳು ಮತ್ತು ಆಹ್ಲಾದಕರವಾಗಿರುವ ಸ್ವರದ ಮಟ್ಟವನ್ನು ಬಳಸುವುದು ಸೂಕ್ತ. ನಾವು

ಆಯ್ಕೆ ಮಾಡುವ ಹಿತ ನುಡಿಗಳು ಮತ್ತು ಅವುಗಳನ್ನು ತಲುಪಿಸುವ ವಿಧಾನಗಳು ನಮ್ಮ ಸಂಬಂಧಗಳನ್ನು ಗಟ್ಟಿಯಾಗಿಸಬಲ್ಲವು. ಬಳಸುವ ಭಾಷೆಯಲ್ಲಿ ದಯೆ, ಸ್ಪಷ್ಟತೆ, ಆದರ, ಗೌರವ ಮತ್ತು ಸಹಾನುಭೂತಿಯನ್ನು ಸೇರಿಸುವ ಮೂಲಕ ನಾವು ಇತರರಲ್ಲಿ ನಂಬಿಕೆಯನ್ನು ಸೃಷ್ಟಿಸಬಹುದು, ಆಲೋಚನೆಗಳನ್ನು ಹಂಚಿಕೊಳ್ಳಬಹುದು. ಆರೋಪ-ಪ್ರತ್ಯಾರೋಪಗಳನ್ನು ನಿಗ್ರಹಿಸಬಹುದು ಮತ್ತು ಸಕಾರಾತ್ಮಕ ಹಾಗೂ ಭಾವನಾತ್ಮಕ ವಾತಾವರಣವನ್ನು ನಿರ್ಮಿಸಬಹುದು. ಸಂವಹನವು ಸಂಘರ್ಷಗಳನ್ನು ಪರಿಹರಿಸಲು ಮತ್ತು ಸಂಬಂಧಗಳನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಒಳ್ಳೆಯ ಮಾತುಗಾರನೆನಿಸಿಕೊಳ್ಳಬೇಕಾದರೆ, ಇನ್ನೊಬ್ಬರ ಮಾತುಗಳನ್ನು ಕೇಳಲು ಕಲಿಯಬೇಕು; ಮಾತಿನಲ್ಲಿ ಅಹಂಕಾರ, ಆಕ್ರೋಶ, ನಿಂದನೆ ಬೆರೆತರೆ, 'ಎಲುಬಿಲ್ಲದ ನಾಲಿಗೆ ಹೇಗೆ ಬೇಕೆಂದರೆ ಹಾಗೆ ಮಾತನಾಡು ತ್ತದೆ' ಎಂಬ ಬಿರುದಿಗೆ ಒಡೆಯರಾಗಬೇಕಾ ಗುತ್ತದೆ. ಮಾತನ್ನು ಕುರಿತು, 'ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು', 'ಮಾತು ಬಲ್ಲವನಿಗೆ ಜಗಳವಿಲ್ಲ ಊಟ ಬಲ್ಲವ ನಿಗೆ ರೋಗವಿಲ್ಲ'. 'ಮಾತು ಮನೆ ಕೆಡಿಸಿತು ತೂತು ಒಲೆ ಕೆಡಿಸಿತು', ಇತ್ಯಾದಿ ಹಲವು ಬಗೆಯ ಗಾದೆಗಳು ಜನಮನದಲ್ಲಿದೆ. ನೆಲಕ್ಕೆ ಬಿದ್ದು ಚೂರಾದ ಕನ್ನಡಿಯನ್ನು ಮತ್ತೆ ಮೊದಲಿನಂತೆ ಜೋಡಿಸಲಾಗದು. ಹಾಗೆಯೇ, ಆಡಿದ ಮಾತುಗಳನ್ನು ಮರಳಿ ಪಡೆಯಲು ಅಸಾಧ್ಯ. ಮಾತನಾಡುವ ಸ್ವಾತಂತ್ರ್ಯಕ್ಕೆ ಪ್ರತಿಯೊಬ್ಬರೂ ಅರ್ಹರಾಗಿದ್ದರೂ, ಇನ್ನೊಬ್ಬರ ವ್ಯಕ್ತಿತ್ವವನ್ನು ಹರಣವಾಗಿಸುವ ಮಾತುಗಳು ಟೀಕೆಯೆನಿಸಿಬಿಡುತ್ತವೆ. ಮಾತುಗಳು ಸಿಹಿಯಾಗಿರಬೇಕೇ ಹೊರತು ಸಿಹಿ ಮಿಶ್ರಿತ ಕಹಿಯಾಗಿರಬಾರದು. ಮಾತನಾಡುವುದು ಸಹ ಒಂದು ಕಲೆಯೆಂಬುದು ನಿರ್ವಿವಾದ. ಎಲ್ಲರೂ ಒಳ್ಳೆಯ ಮಾತುಗಾರರಾಗಲು ಸಾಧ್ಯ; ಆದರೆ ಇದಕ್ಕೆ ಸಾಕಷ್ಟು ಪರಿಶ್ರಮ ಬೇಕು. ಸಮಯಾಸಮಯ ಮತ್ತು ಔಚಿತ್ಯಗಳನ್ನು ಮರೆತು ಮಾತನಾಡುವ ಸ್ವಭಾವವಿರುವವರಿಂದ ಅವರ ಸ್ನೇಹಿತರೇ ದೂರ ಸರಿಯುತ್ತಾರೆ. ಇನ್ನು ಕೆಲವರು, ತಮ್ಮ ಮಾತು, ವಾದ, ಮತ್ತು ಸಿದ್ಧಾಂತವನ್ನೇ ಉಳಿದವರು ಅನುಸರಿಸಬೇಕೆಂಬುದು ಆಗ್ರಹಿಸುವುದರ ಜೊತೆಜೊತೆಗೆ ತಮ್ಮ ಮಾತುಗಳು ಒಪ್ಪಿತವಾಗದವರನ್ನು ಖಂಡಿಸಿ ಬಿಡುತ್ತಾರೆ.



ಜಗತ್ತನ್ನೇ ಗೆದ್ದರು!

ಮಾತು ಅಭಿವ್ಯಕ್ತಿ ರೂಪದ ಜತೆ, ವ್ಯಕ್ತಿತ್ವದ ಕನ್ನಡಿಯೂ ಹೌದು. ಸರ್ವಧರ್ಮ ಸಮ್ಮೇಳನದಲ್ಲಿ, ಸ್ವಾಮಿ ವಿವೇಕಾನಂದರು ತಮ್ಮ ಸುಸಂಸ್ಕೃತ ಮಾತುಗಳಿಂದ, ದೇಶ-ವಿದೇಶಗಳಿಂದ ಆಗಮಿಸಿದ ಕೋಟ್ಯಾಂತರ ಜನರ ಮನ ಗೆದ್ದರು; ಭಾರತದ ಹಿರಿಮೆ-ಗರಿಮೆಗಳನ್ನು ಆಗಸದೆತ್ತರಕ್ಕೆ ಕರೆದೊಯ್ದರು. ಮಾತಿನಿಂದ ಜಗತ್ತನ್ನೇ ಗೆಲ್ಲಬಹುದು ಎಂಬುದಕ್ಕೆ ವಿವೇಕಾನಂದರು ಒಂದು ಉದಾಹರಣೆ. ಯೋಗ್ಯವಾದ ಮಾತುಗಳು ಚಿಕ್ಕವರನ್ನೂ ಸಹ ದೊಡ್ಡ ಸ್ಥಾನಕ್ಕೆ ಕರೆದೊಯ್ದರೆ, ಅನುಚಿತ ಮಾತು ದೊಡ್ಡವರನ್ನು ಸಣ್ಣವರಾಗಿಸಿಬಿಡುತ್ತದೆ. ಜನಾನುರಾಗಿ ವ್ಯಕ್ತಿಗಳು ಸಾರ್ವಜನಿಕವಾಗಿ, ಜನಪ್ರಿಯತೆಯ ಉನ್ಮಾದದಲ್ಲಿ ಆಡುವ ಬಿರು ನುಡಿಗಳು, ಸಾರ್ವಜನಿಕ ವಾತಾವರಣವನ್ನು ಕಲುಷಿತಗೊಳಿಸುವ ಸಂಭವ ಜಾಸ್ತಿ. ಹೆಸರು ಪ್ರಚಾರ ಮತ್ತು ಪ್ರಸಿದ್ಧಿಯ ಪ್ರಭಾವಳಿಯ ಭ್ರಮೆಯಲ್ಲಿ ಅನೇಕರು ಅನುಚಿತ ಮಾತುಗಳನ್ನಾಡಿ ಕೊನೆಗೆ ಜೀರ್ಣಿಸಿಕೊಳ್ಳಲಾಗದೆ ಸಂಕಟ ಪಡುವಂತಾಗುತ್ತದೆ. ಜನರ ನಡುವೆ ದ್ವೇಷವನ್ನು ಬಿತ್ತುವಂತಹ ಮಾತುಗಳು ಹಿತಕಾರಿಯಲ್ಲ.

ನೋವಾಗದಿರಲಿ

ಮಾತುಗಳು ಸಿಹಿಯಾಗಿದ್ದರೆ ಮನಸ್ಸು ಸಹ ಸಿಹಿಯಾಗಿರುತ್ತದೆ. ವಾತಾವರಣವೂ ಸಹ ಸಿಹಿಯಾಗಿರುತ್ತದೆ. ನೊಂದವರ ನೋವಿಗೆ ದನಿಯಾಗಿ, ಹಿತನುಡಿಗಳನ್ನಾಡಲು ಯಾರಿಗೂ ಏನನ್ನೂ ಕೊಡಬೇಕಾಗಿಲ್ಲ. ನಮ್ಮ ಮಾತಿನಿಂದ ಯಾರಿಗಾದರೂ ನೋವಾಗಬಹುದೇ ಎಂದು ಚಿಂತಿಸಿ; ಆಗುವಂತಿದ್ದರೆ, ಅಂತಹ ಮಾತುಗಳು ಗಂಟಲಿನೊಳಗೆ ಉಳಿಯಲಿ. ತನ್ನ ಮಾತಿನಲ್ಲಿ ನಯ, ವಿನಯ, ವಿವೇಕ ಸೌಜನ್ಯವನ್ನು ತುಂಬಿಕೊಂಡಿರುವವನನ್ನೇ ನಿಜವಾದ ಮಾತಿನ ಮೋಡಿಗಾರನೆನ್ನ ಬಹುದು. ವಿದ್ಯೆಗೆ ವಿನಯವೇ ಭೂಷಣ ವೆನ್ನುವ ಹಾಗೆ ಮಾತಿಗೆ ಸೌಜನ್ಯವೇ ಭೂಷಣ. ಒಳ್ಳೆಯ ಮಾತು, ಸಹಕಾರ ಮತ್ತು ಸಮಾಲೋಚನೆಗಳಿಂದ ದೇಶ- ವಿದೇಶಗಳ ಮಧ್ಯೆ ಸಾಮಾಜಿಕ, ಆರ್ಥಿಕ ಸಂಬಂಧಗಳು ಗಟ್ಟಿಯಾಗಲು ಸಾಧ್ಯ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಅರ್ಜುನನಿಗೆ ತಿಳಿಸಿದಂತೆ, 'ಮಾನಸನ್ಮಾನಗಳ ಗೊಡವೆ ಬೇಡ, ಬೆನ್ನು ಹತ್ತಿ ದೊಡ್ಡಸ್ತಿಕೆಯ ಪ್ರದರ್ಶನ ಬೇಡ, ಈ ಬದುಕಿಗೆ ಸೌಜನ್ಯ ತುಂಬಿದ ಮಾತನಾಡಿದರೆ ಸಾಕು. ಸೌಜನ್ಯ ತುಂಬಿದ ಮಾತುಗಳೇ ಬದುಕಿನ ಬಲು ದೊಡ್ಡ ಆಸ್ತಿ'.

ಮಾತೇ ಒಂದು ಅಸ್ತ್ರ!

ಒಳ್ಳೆಯ ಮಾತುಗಳಿಂದ ಸ್ನೇಹ ವೃದ್ಧಿಯಾಗುವುದರ ಜೊತೆಗೆ ಎಷ್ಟೋ ಸಮಸ್ಯೆಗಳು ಪರಿಹಾರವಾಗುತ್ತದೆ. ಶತ್ರುತ್ವದ ನಿವಾರಣೆಗೆ ಪ್ರಯೋಗಿಸಲಾಗುವ ನಾಲ್ಕು ಉಪಾಯಗಳಲ್ಲಿ, ಸಾಮೋಪಾಯಕ್ಕೆ ಮೊದಲ ಸ್ಥಾನವನ್ನು ನೀಡಲಾಗಿದೆ - ಇದರಲ್ಲಿ ಬಳಕೆಯಾಗುವುದೇ ಮಾತು. ಇಂತಹ ಮಾತುಗಳನ್ನು ಒಂದು ಸಮಸ್ಯಾ ನಿವಾರಕ ಅಸ್ತ್ರ ಎಂದೂ ತಿಳಿಯಬಹುದು!

ಹೂವಿನ ರಥೋತ್ಸವ!

● ಪ.ನಾ.ಹಳ್ಳಿ.ಹರೀಶ್ ಕುಮಾರ್

ಹೂವಿನ ರಥಗಳ ಮಹೋತ್ಸವ ನಡೆಯುವುದು ತುಸು ಕಡಿಮೆ ಎಂದೇ ಹೇಳಬಹುದು; ತುಮಕೂರು ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರವಾಗಿರುವ ಸಿರಾ ನಗರದಿಂದ ಮಧುಗಿರಿಗೆ ಹೋಗುವ ಮಾರ್ಗದಲ್ಲಿ ಸುಮಾರು 12 ಕಿಲೋ ಮೀಟರುಗಳಷ್ಟು ಅಂತರದಲ್ಲಿರುವ ಮಾಗೋಡು ಕ್ಷೇತ್ರದಲ್ಲಿ, ಜಾತ್ರೋತ್ಸವ ನಡೆಯುವಾಗ ಹೂವಿನ ರಥವನ್ನು ಎಳೆಯುವರು! ಮೂಲತಃ ಇದೊಂದು ಕಾಡುಗೊಲ್ಲರ ಹಟ್ಟಿ.

ಸುಮಾರು ಒಂದು ಎಕರೆಯಷ್ಟು ವಿಸ್ತೀರ್ಣ ಪ್ರದೇಶದಲ್ಲಿ ಮಾಗೋಡು ರಂಗನಾಥ ಸ್ವಾಮಿಯ ದೇವಾಲಯವಿದೆ. ದೇವಾಲಯದ ಪ್ರಾಂಗಣದಲ್ಲಿ ಕಾಡುಗೊಲ್ಲರ ಆರಾಧ್ಯದೈವವಾದ ಚಿತ್ರದೇವರು, ಭೂತಪ್ಪ ಹಾಗೂ ಎಲ್ಲಮ್ಮ ದೇವರುಗಳ ಮಂಟಪಗಳಿವೆ. ಇಲ್ಲಿನ ರಂಗನಾಥಸ್ವಾಮಿಯನ್ನು ಕಂಬದ ರಂಗಪ್ಪ, ಕಂಬದಯ್ಯ, ಮುಂತಾದ ಹೆಸರುಗಳಿಂದಲೂ ಕರೆಯುತ್ತಾರೆ.

ಹೂವಿನ ತುಲಾಭಾರ

ಮಾರ್ಗಶಿರ ಮಾಸದ ಶುದ್ಧ ಪೂರ್ಣಿಮೆಯ ಮೊದಲ ಶನಿವಾರದಿಂದ ಆರಂಭವಾಗುವ ಮಾಗೋಡು ರಂಗನಾಥ ಸ್ವಾಮಿಯ ಜಾತ್ರೋತ್ಸವವು ಮುಂದಿನ ಶನಿವಾರದವರೆಗೆ ನಡೆಯುತ್ತದೆ. ಜಾತ್ರೆಯ ಮೂರನೇ ದಿನಪ್ರಸಿದ್ಧ ಹೂವಿನ ರಥೋತ್ಸವ ನೆರವೇರಲಿದ್ದು ಅಂದು ಲಕ್ಷಕ್ಕೂ ಅಧಿಕ ಭಕ್ತರು ನೆರೆಯುತ್ತಾರೆ. ಇದೇ ದಿನದಂದು ಸ್ವಾಮಿಯ ಕರುಣೆಯಿಂದ ಸಂತಾನ ಭಾಗ್ಯ ಹೊಂದಿದವರು ತಮ್ಮ ಮಗುವಿನ ತೂಕದಷ್ಟು ಹೂವನ್ನು ಸ್ವಾಮಿಗೆ ಅರ್ಪಿಸುವ ತುಲಾಭಾರ

ಕಾರ್ಯಕ್ರಮವೂ ಇರುತ್ತದೆ. ಆರನೇ ದಿನ ಸ್ವಾಮಿಗೆ 101 ಎಡೆಗಳನ್ನು ಹಾಕಿ ಪೂಜಿಸಿ ತದನಂತರ ಭಕ್ತರಿಗೆ ಅನ್ನಸಂತರ್ಪಣೆ ಮಾಡುತ್ತಾರೆ. ಅಂದು ರಾತ್ರಿ ಕಂಬದ ರಂಗನಾಥ ಸ್ವಾಮಿಯ ಜಾನಪದ ಕಾವ್ಯವನ್ನು ಹಾಡಲಾಗುತ್ತದೆ ಮತ್ತು ಪೌರಾಣಿಕ ನಾಟಕ ಪ್ರದರ್ಶನವೂ ಇರುತ್ತದೆ. ಎಂಟನೆಯ ರಥಕ್ಕೆ ಕಟ್ಟಲಾಗಿದ್ದ ಜಾಡೇವು ಮರದ ಕೊಂಬೆಗಳನ್ನು ಇಳಿಸುವುದರ ಮೂಲಕ ಜಾತ್ರೆಯು ಅಂತ್ಯಗೊಳ್ಳುತ್ತದೆ.

ಹೂವಿನ ಉತ್ಸವ!

ಅಲಂಕೃತಗೊಂಡ ಕಲ್ಲುಗಾಲಿಯ ರಥದಲ್ಲಿ ಬೆಳಗ್ಗೆ 10 ಗಂಟೆ ಸುಮಾರಿಗೆ ಸ್ವಾಮಿಯ ಉತ್ಸವ ಮೂರ್ತಿಯನ್ನು ಕೂರಿಸಲಾಗುತ್ತದೆ. ಜಾತ್ರಾ ದಿನದಂದು ಗ್ರಾಮಕ್ಕೆ ಆಗಮಿಸಿ ರಥಕ್ಕೆ ಹೂ ಅರ್ಪಿಸುವುದರ ಮೂಲಕ ತಮ್ಮ ಹರಕೆಯನ್ನು ದೇವರಿಗೆ ತೀರಿಸುವುದು ವಾಡಿಕೆ.

ಸಂತಾನಫಲ, ಜಾನುವಾರುಗಳನ್ನು ಖಾಯಿಲೆಗಳಿಂದ ಪಾರುಮಾಡುವುದು ಮುಂತಾದ ಕಾರಣ ಗಳಿಗಾಗಿ ಭಕ್ತರು ರಂಗನಾಥಸ್ವಾಮಿಗೆ ಹೂ ಅರ್ಪಿಸುತ್ತಾರೆ. ಅಂದು ನೂರು ಟನ್‌ಗೂ ಅಧಿಕ ಹೂ ರಥಕ್ಕೆ ಸಮರ್ಪಿಸಲಾಗುತ್ತಿದ್ದು ಇಲ್ಲಿನ ರಥಕ್ಕೆ ಅರ್ಪಣೆಯಾಗುವಷ್ಟು ಹೂವಿನ ಪ್ರಮಾಣವು ಜಗತ್ತಿನ ಮತ್ಯಾವುದೇ ರಥಕ್ಕೂ ಅರ್ಪಣೆಯಾಗುವುದಿಲ್ಲ ಎಂಬುದು ಸಮೀಕ್ಷೆಯೊಂದರ ವರದಿ. ಈ ವರ್ಷ ಫೆಬ್ರವರಿ 10ರ ಸೋಮವಾರ ಹೂವಿನ ರಥೋತ್ಸವ ನಡೆಯಲಿದೆ.

ಕರ್ಮಲೇಪ

ಒಮ್ಮೆ ಒಬ್ಬ ಗುರು ತನ್ನ ಶಿಷ್ಯನೊಡನೆ ಪ್ರಯಾಣಿಸುತ್ತಿದ್ದ ವೇಳೆ ನದಿಯೊಂದು ಎದುರಾಯಿತು ಒಬ್ಬಾಕೆ ಹೆಣ್ಣುಮಗಳು ನದಿ ದಾಟಲು ಯೋಚಿಸುತ್ತಿದ್ದಳು. ಆಗ ಶಿಷ್ಯನು, 'ಗುರುಗಳೇ, ಆ ಮಹಿಳೆಗೆ ಸಹಾಯ ಮಾಡಲೆ?' ಎಂದನು. 'ಎಲ್ಲಾದರೂ ಉಂಟೇ? ನಾವು ಬ್ರಹ್ಮಚಾರಿಗಳು. ಸ್ತ್ರೀಯರನ್ನು ನೋಡುವುದು ಕೂಡ ಪಾಪ. ' ಎಂದರು. ಆದರೆ ಶಿಷ್ಯನು ಸಹಾಯದ ದೃಷ್ಟಿಯಿಂದ, ಆ ಮಹಿಳೆಯ ಕೈ ಹಿಡಿದು, ನದಿ ದಾಟಿಸಿದನು. ಗುರುಗಳು ಕೋಪದಿಂದ, ಶಿಷ್ಯನನ್ನು ನೋಡಿದರು. ಆ ಮೇಲೆ ಆ ಘಟನೆ ನೆನಪಾದಾಗಲೆಲ್ಲ ಗುರು ಶಿಷ್ಯನಿಗೆ 'ನಾವು ಸನ್ಯಾಸಿಗಳು, ಆ ದಿನ ನೀನು ಮಾಡಿದ್ದು ಸರಿಯಲ್ಲ' ಎಂದು ಹೇಳುತ್ತಿದ್ದರು. ಕೊನೆಗೊಂದು ದಿನ ಶಿಷ್ಯ ನುಡಿದ 'ಗುರುಗಳೇ, ನನಗೆ ಆ ಘಟನೆ ಮರೆತೇ ಹೋಗಿದೆ. ಆದರೆ ತಾವು ಅದನ್ನೇ ಮೆಲುಕು ಹಾಕುತ್ತಾ ಇದ್ದೀರಾ. ಆ ದಿನ ಆಕೆಗೆ ಸಹಾಯಮಾಡುವುದು ನನ್ನ ಧರ್ಮ ಎಂದು ಮಾಡಿದೆ' ಎಂದ. ಆಗ ಗುರುವಿಗೆ ಜ್ಞಾನೋದಯವಾಯಿತು. ಶಿಷ್ಯ ನಿರ್ಮಲ ಮನಸ್ಸಿನಿಂದ ತನ್ನ ಕರ್ತವ್ಯವನ್ನು ನಿರ್ವಹಿಸಿ ಕರ್ಮ ಲೇಪದಿಂದ ಮುಕ್ತನಾಗಿದ್ದ. ತಾನು ಮಾತ್ರ ಆತನ ಮೇಲೆ ವೃಥಾ ಸಂಶಯ ಪಟ್ಟು ಪಾಪ ಕಟ್ಟಿಕೊಂಡಿದ್ದ. ಭಗವಾನ್ ಕೃಷ್ಣನ ವಾಣಿಯಂತೆ ಆಸಕ್ತಿ, ಫಲಾಪೇಕ್ಷೆಗಳಿಲ್ಲದೆ ಮಾಡಿದ ಕರ್ಮಗಳು ಆ ವ್ಯಕ್ತಿಗೆ ಅಂಟಿಕೊಳ್ಳುವುದಿಲ್ಲ. ಆದ್ದರಿಂದ ಎಲ್ಲರೂ ನಿರ್ಮಲ ಮನಸ್ಕರಾಗಲು ಯತ್ನಿಸೋಣ. ನಮ್ಮ ಕರ್ತವ್ಯಗಳನ್ನು ತಪ್ಪದೆ ಪಾಲಿಸೋಣ. ಇದೇ ಉತ್ತಮ ಬದುಕು.

● ಕೆ. ಸುಮಂಗಲಾ ಅಡೂರು

ಪ ದ ಬಂ ಧ



ಎಡದಿಂದ ಬಲಕ್ಕೆ

1. ಅವನಿಗೆ ನೀಡಿದ ವಿಶೇಷವಾದ ಗೌರವ (3)
3. ಸ್ನೇಹ, ಒಡನಾಟಕ್ಕೆ ಮತ್ತೊಂದು ಹೆಸರು (4)
6. ಎಲುಬಿಗೆ ಮತ್ತೊಂದು ಹೆಸರು (2)
7. ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವುದು (3)
10. ಅಳತೆ ಮಾಡುವಿಕೆ (3)
12. ಸೂರ್ಯನ ಮತ್ತೊಂದು ಹೆಸರು (4)
13. ತಿರುಗಿ ಬಂದಿರುವ ಆನೆ (3)
15. ಮರಿ ಬಿದ್ದ ಆಳವಾದ ಪ್ರಪಾತ (3)
17. ಆಕೆಗೆ ಉಂಟಾದ ದಾಹ (4)
18. ದೊಡ್ಡದಾದ ಪಟ್ಟಣ (3)
20. ಗತಿಯ ನಡುವೆ ಸಿಲುಕಿದ ಪತಿವ್ರತೆ (3)
23. ಯಜ್ಞ ಎರಡಕ್ಷರದಲ್ಲಿ ಬಂದಿದೆ (2)
24. ಅತಿ ದೊಡ್ಡ ಗಾತ್ರದ ಒಂದು ಸಸ್ತನಿ (4)
25. ಕರದ ನಡುವೆ ಸಿಲುಕಿರುವುದು ಬಿರುಸಾಗಿದೆ (3)

ಮೇಲಿನಿಂದ ಕೆಳಕ್ಕೆ:

1. ಗಾಳಿಯ ಮತ್ತೊಂದು ಹೆಸರು (3)
2. ಇದೊಂದು ಮಾದರಿ (3)
4. ಮತ್ತೊಂದು ಶತ್ರುತ್ವ (2)
5. ಸನಿಹ ಅಥವಾ ಹತ್ತಿರ (3)
8. ನೀರಿನಲ್ಲಿ ಹುಟ್ಟುವ ತಾವರೆಗೆ ಹೀಗೊಂದು ಹೆಸರು (3)
9. ನಿದ್ದೆಯಲ್ಲಿ ಮಾತನಾಡಿಕೊಳ್ಳುವಿಕೆ (5)
10. ಹಾನಿಕರವಾದುದು (3)
11. ಚರ್ಮವಾದ್ಯವೊಂದು ನಾರಿಯ ಮಧ್ಯೆ ಬಂದಿದೆ (3)
13. ರುಚಿ ತಿಳಿಸುವ ನಾಲಗೆ (3)
14. ಮಣ್ಣಿನ ಪಾತ್ರೆಗಳನ್ನು ಮಾಡುವವನು (3)
16. ಸಿಹಿಯಾದುದು ಎನ್ನುವುದು ಮರದ ನಡುವೆಯೇ ಇದೆ (3)
19. ಎಷ್ಟಿದೆಯೆಂದು ಮಾಡುವ ಎಣಿಕೆ (3)
20. ರಾಗವಾಗಿ ಕಾವ್ಯವನ್ನು ಓದುವುದು (3)
21. ತಿರುಗಾಡುವಾಗ ಕಂಡಿತು ಕತ್ತಲೆ (3)
22. ವಿರಾಗಿ ಬಳಸಿದ ಒಂದು ಧಾನ್ಯ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ
2. ಹಜಾಮ 4. ಹಾವಸೆ 5. ಜಿಪುಣ 6. ರಹಸ್ಯ 7. ತೆಗಳು 10. ಅರವಿಂದ 12. ನೀರಧಿ 13. ಸವಿನಯ 15. ಅರಿಕೆ 18. ರುಮಾಲು 19. ಕುಲೀನ 20. ಕರುಳು 21. ಗುಡಾಣ
ಮೇಲಿನಿಂದ ಕೆಳಕ್ಕೆ
1. ತ್ಯಜಿಸು 2. ಹಣತೆ 3. ಮರಳು 4. ಹಾಸ್ಯಗಾರ 8. ಗಣನೀಯ 9. ಮೋದಕ 10. ಅಧಿಕಾರಿ 11. ಹಾಸನ 14. ನಟ್ಟಿರುಳು 15. ಅಲುಗು 16. ಕೆಕುಣ 17. ದಾನವ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ?

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಅಲ್ಲೊಬ್ಬ ಶ್ರೀಮಂತ ಜಮೀನುದಾರರಿದ್ದರು. ಸ್ವಶ್ರಮದಿಂದ ಸಿರಿವಂತರಾಗಿದ್ದವರು. ಐವತ್ತು ವರ್ಷ ವಯಸ್ಸಾಗಿದ್ದ ಅವರಿಗೆ ಮೂವತ್ತು ವರ್ಷ ವಯಸ್ಸಿನ ಮಗನಿದ್ದ. ಒಬ್ಬನೇ ಮಗ, ವಂಶೋದ್ಧಾರಕ ಎಂಬಿತ್ಯಾದಿ ಕಾರಣಗಳಿಂದ ಅವನನ್ನು ಬಹಳ ಮುದ್ದಿನಿಂದ ಬೆಳೆಸಿದ್ದರು.

ಆದರೆ ಅವನು ತಿಂದುಂಡು, ಆಟವಾಡಿಕೊಂಡು, ಮೋಜು ಮಾಡಿಕೊಂಡು ಕಾಲ ಕಳೆಯುತ್ತಿದ್ದ. ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ, ಏಕೆಂದರೆ ಅಪ್ಪ ಅವನಿಗೆ ಕೆಲಸ ಮಾಡುವುದನ್ನು ಕಲಿಸಿ ಕೊಟ್ಟಿರ ಲಿಲ್ಲ. ಇನ್ನೂ ಸಮಯವಿದೆ ಎಂದುಕೊಂಡು ಸುಮ್ಮ ನಿದ್ದರು. ಅವನೂ ಸುಮ್ಮನಿದ್ದ, ಏನೂ ಕಲಿಯಲಿಲ್ಲ.

ಒಮ್ಮೆ ಜ್ಯೋತಿಷಿಯೊಬ್ಬರು ಅವರ ಮನೆಗೆ ಬಂದರು. ತಂದೆ-ಮಕ್ಕಳ ಕೈಗಳನ್ನು ಕೂಲಂಕಷವಾಗಿ ನೋಡಿದರು. ನಂತರ 'ಜಮೀನುದಾರರೇ, ನಿಮ ಗೀಗ ಐವತ್ತು ವರ್ಷ ವಯಸ್ಸು. ನೀವು ಇನ್ನೂ 30 ವರ್ಷ ಬದುಕುತ್ತೀರಿ. ನಿಮ್ಮ ಮಗನು ಇನ್ನೂ 32 ವರ್ಷಗಳ ಕಾಲ ಬದುಕುತ್ತಾನೆ' ಎಂದು ಭವಿಷ್ಯ ನುಡಿದರು.

ಜಮೀನುದಾರರು ತಾವು ಇನ್ನೂ ಮೂವತ್ತು ವರ್ಷ ಬದುಕುವ ಭರವಸೆ ಸಿಕ್ಕಿದ್ದರಿಂದ ಸಂತಸಗೊಂಡರು. ಆದರೆ ಅವರ ಮಗ ಗಟ್ಟಿಯಾಗಿ ಅಳಲಾ ರಂಭಿಸಿದ. ಅಪ್ಪ ಗಾಬರಿಗೊಂಡು ಅವನ ಅಳುವಿಗೆ ಕಾರಣ ಕೇಳಿದಾಗ ಆತ, 'ನೀವು ಇನ್ನು ಮೂವತ್ತು ವರ್ಷಕ್ಕೆ ಸತ್ತು ಹೋಗುತ್ತೀರಿ. ನಾನು ಮೂವತ್ತೆರಡು ವರ್ಷ ಬದುಕಿರುತ್ತೇನೆ, ಅಂದರೆ ನೀವು ಸತ್ತ ನಂತರದ ಎರಡು ವರ್ಷ ನನ್ನನ್ನು ನೋಡಿಕೊಳ್ಳುವವರು ಯಾರು?' ಎಂದು ಬಿಕ್ಕಳಿಸಿ ಅಳತೊಡಗಿದ.

'ಜ್ಯೋತಿಷಿಯು ಇನ್ನೂ ಮೂವತ್ತು ವರ್ಷಗಳ ಕಾಲ ನಿಮ್ಮಪ್ಪ ಬದುಕಿರುತ್ತಾರೆ. ಅಲ್ಲಿಯವರೆಗೂ ನೀನು ನಿಶ್ಚಿಂತೆಯಾಗಿರಬಹುದು, ಆನಂತರ ನೋಡಿಕೊಳ್ಳೋಣ' ಎಂದು ಹೇಳಿದರೂ ಆತ ಅಳು ನಿಲ್ಲಿಸಲಿಲ್ಲ. ಆಗ ಜಮೀನುದಾರರು ಮಗನ ತಲೆ ನೇವರಿಸುತ್ತಾ, 'ಮಗು, ನಿನಗೆ ಐವತ್ತೊಂಬತ್ತು ವರ್ಷ ವಯಸ್ಸಾದಾಗ ಅಂದರೆ ನಾನು ಸಾಯುವುದಕ್ಕೆ ಒಂದು ವರ್ಷ ಮುಂಚೆ ನಿನಗೆ ವ್ಯವಸಾಯ ಮಾಡುವುದನ್ನೂ, ಜಮೀನುದಾರಿಕೆಯ ಕೆಲಸವನ್ನೂ ಹೇಳಿ ಕೊಡುತ್ತೇನೆ. ನೀನು ಅದನ್ನು ಕಲಿತರೆ, ನಾನು ಸತ್ತ ಮೇಲೂ ಎರಡು ವರ್ಷಗಳ ಕಾಲ ನಿಶ್ಚಿಂತೆಯಾಗಿ ಬದುಕಬಹುದು, ಚಿಂತಿಸಬೇಡ' ಎಂದು ಸಮಾಧಾನ ಹೇಳಿದರು. ಆತ ಅಳುವುದನ್ನು ನಿಲ್ಲಿಸಿ ನಿರುಮ್ಮಳ ನಾಗಿ ಕುಳಿತ. ಆಗ ಜ್ಯೋತಿಷಿಯು 'ಸ್ವಾಮಿ, ನೀವು ಅವನಿಗೆ ಕೆಲಸ ಕಲಿಸಲು ಬದುಕಿನ ಕೊನೆಯ ವರ್ಷ ದವರೆಗೂ ಕಾಯಬೇಕೆ? ಐವತ್ತೊಂಬತ್ತು ವರ್ಷ ವಯಸ್ಸಾದಾಗ ವ್ಯವಸಾಯವನ್ನೂ, ಜಮೀನುದಾರಿಕೆಯನ್ನೂ ಹೇಳಿಕೊಟ್ಟು ಆತನ ಕೊನೆಯ ಎರಡು ವರ್ಷಗಳು ನಿಶ್ಚಿಂತೆಯಿಂದ ಬದುಕುವಂತೆ ಮಾಡುವುದರ ಬದಲು ಅದನ್ನು ಅವನಿಗೆ ಇಂದೇ ಹೇಳಿಕೊಟ್ಟರೆ ಇನ್ನೂ ಮೂವತ್ತೆರಡು ವರ್ಷಗಳ ಕಾಲವೂ ಆತ ನಿಶ್ಚಿಂತೆಯಾಗಿ ಬದುಕುವಂತೆ ಮಾಡಬಹುದಲ್ಲವೇ?' ಎಂದು ಹೇಳಿದಾಗ, ಅಪ್ಪ-ಮಗ ಇಬ್ಬರಿಗೂ ಮಿಂಚು ಹೊಳೆದಂತಾಯಿತು.

ಅವರಿಬ್ಬರೂ ಒಮ್ಮೆಗೇ 'ಅಯ್ಯೋ! ಇದರ ಬಗ್ಗೆ ನಾವು ಮೊದಲೇ ಏಕೆ ಚಿಂತಿಸಲಿಲ್ಲ?' ಎಂದು ಉದ್ಗಾರ ತೆಗೆದರು. ಅಂದಿನಿಂದ ಅಪ್ಪ-ಮಕ್ಕಳ ದೃಷ್ಟಿಕೋನ ಬದಲಾಯಿತು, ಬದುಕೂ ಬದಲಾಯಿತು. ಬಹುತೇಕ ಅಪ್ಪ-ಅಮ್ಮಂದಿರು ಮಾಡುವುದು ಇದನ್ನೇ ಅಲ್ಲವೇ? ಮಕ್ಕಳನ್ನು ಮುದ್ದು ಮಾಡುವುದು. ನಾವು ಬಾಲ್ಯದಲ್ಲಿ ಕಷ್ಟಪಟ್ಟೆವು, ಈಗ ಅವರೇಕೆ ಕಷ್ಟಪಡಬೇಕು, ಅವರು ಕಷ್ಟಪಟ್ಟರೆ ಎಲ್ಲಿ ಬಾಡಿ ಹೋಗುತ್ತಾರೋ ಎನ್ನುವ ಆಲೋಚನೆಗಳು ಅಪ್ಪಂದಿರಲ್ಲೂ ಇರಬಹುದು.

ಮನೆ ಕೆಲಸಗಳನ್ನು, ಕಲಿಸಲು ಮಕ್ಕಳಿಗೆ ಯಾವುದೇ ವಯಸ್ಸು ಎಂಬುದು ಇರುವುದಿಲ್ಲ. ಹುಟ್ಟಿನಿಂದ ಅವರು ದೊಡ್ಡವರು ಕೆಲಸ ಮಾಡುವುದನ್ನು ನೋಡುತ್ತಿರುತ್ತಾರೆ. ನಿಧಾನವಾಗಿ ಅವರನ್ನು ಈ ಕೆಲಸಗಳಿಗೆ ಒಳಗೊಳ್ಳಬೇಕು. ಊಟಕ್ಕೆ ಬಡಿಸುವಾಗ ನೀರು ಹಾಕಿ ತಟ್ಟೆ ಕ್ಲೀನ್ ಮಾಡುವುದು, ಟೇಬಲ್ ಕ್ಲೀನ್ ಮಾಡುವುದು ಚಿಕ್ಕ ಚಿಕ್ಕ ಪಾತ್ರೆ ತೊಳೆಯುವುದು ಇದನ್ನು ಮಕ್ಕಳು ಚಿಕ್ಕವರಾಗಿದ್ದಾಗಿನಿಂದ ಮಾಡುತ್ತಾ ಬಂದರೆ ಬೆಳೆಯುತ್ತಾ ಅದೇ ಒಂದು ಜೀವನಕ್ರಮವಾಗುತ್ತದೆ.

ಅತ್ತ ಹೊರಗೆ ಹೋಗಿ ಜೀವನ ಕಟ್ಟಿಕೊಳ್ಳುವುದಕ್ಕೂ ಕೂಡ ಅವರಿಗೆ ಒಳ್ಳೆ ವಿದ್ಯೆಯನ್ನು ಕೊಟ್ಟು ಮಾನಸಿಕ ವಾಗಿ ಅವರನ್ನ ಸಿದ್ಧ ಮಾಡಿದರೆ, ಜವಾಬ್ದಾರಿಯಿಂದ ಓದಿ ಒಳ್ಳೆಯ ಅವಕಾಶವನ್ನು ಸೃಷ್ಟಿಸಿಕೊಂಡು ಒಳ್ಳೆ ಕೆಲಸವನ್ನು ಪಡೆದುಕೊಳ್ಳುವಲ್ಲಿ ಅವರು ಸಫಲರಾಗು ತ್ತಾರೆ. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?' -ಹಿರಿಯರು ಅದಕ್ಕೇ ಹೀಗೆ ಹೇಳಿರುವುದು..!

ವಿಶ್ವವಾಣಿ



ಯುಗಾದಿ ವಿಶೇಷಾಂಕ 2025

ವಿಶ್ವವಾಣಿಯು ಹೊರತರಲಿರುವ ವರ್ಣರಂಜಿತ ಯುಗಾದಿ ವಿಶೇಷಾಂಕಕ್ಕಾಗಿ, ಓದುಗರಿಂದ ಬರಹಗಳನ್ನು ಆಹ್ವಾನಿಸಲಾಗಿದೆ.

1. ನಾನು ಮಾಡಿದ ರೀಲ್ಸ್

ಈಗ ನಡೆಯುತ್ತಿರುವುದು ಸಾಮಾಜಿಕ ಜಾಲತಾಣದ ಯುಗ. ಮಕ್ಕಳು, ಯುವಜನತೆ, ಹಿರಿಯರು, ಸೆಲೆಬ್ರಿಟಿಗಳು, ಅನಾಮಿಕರು ಎಲ್ಲರೂ ಮೊಬೈಲ್‌ನಲ್ಲಿ ವಿಡಿಯೋ ಚಿತ್ರೀಕರಿಸಿ, ಅಂತರ್ಜಾಲದಲ್ಲಿ ತೇಲಿಬಿಡುತ್ತಿದ್ದಾರೆ. ಕೆಲವು ರೀಲ್ಸ್‌ಗಳು ಒಮ್ಮೆಗೇ ಎಲ್ಲೆಡೆ ವೈರಲ್ ಆಗುತ್ತಿವೆ! ಇನ್ನು ಕೆಲವು ರೀಲ್ಸ್‌ನ ವಿವರಗಳನ್ನು ನೋಡಿ ಇತರರು ಅನುಕರಿಸುತ್ತಿದ್ದಾರೆ. ಕೆಲವು ರೀಲ್ಸ್‌ಗಳು ಕೆಲವರನ್ನು ಪೇಚಿಗೆ ಸಿಲುಕಿಸಿದ್ದೂ ಉಂಟು! ನೀವು ರೀಲ್ಸ್ ಮಾಡಿದ್ದೀರಾ? ಬೇರೆಯವರ ರೀಲ್ಸ್‌ನಿಂದ ಪ್ರಭಾವಿತರಾಗಿದ್ದೀರಾ? ನಿಮ್ಮ ಅನುಭವವನ್ನು 200 ಪದಗಳ ಒಳಗೆ ಬರೆದು ನಮಗೆ ಕಳುಹಿಸಿ.

2. ಅಪರಿಚಿತರು ಮಾಡಿದ ಸಹಾಯ

ನೀವು ಯಾವುದೋ ದೂರದ ಊರಿಗೆ ಪ್ರವಾಸಕ್ಕೆ ಹೋಗಿರಬಹುದು; ವಿದೇಶ ಪ್ರವಾಸದಲ್ಲಿ ಅದಾವುದೋ ಪ್ರದೇಶದಲ್ಲಿ ಭಾಷೆ ಬಾರದೇ ಪರದಾಡುತ್ತಿರಬಹುದು; ರೈಲಿನ ಪ್ರಯಾಣದಲ್ಲಿ ಬಳಲಿ, ಏನು ಮಾಡುವುದೆಂದು ತೋಚದೇ ಕುಳಿತಿರಬಹುದು; ಕಾಡು ದಾರಿಯ ನಡುವೆ ಬಸವಳಿದು, ಮರದ ಬುಡಕ್ಕೆ ಒರಗಿರಬಹುದು - ಅಂತಹ ಸಂದರ್ಭದಲ್ಲಿ, ಅದಾರೋ ಬಂದು ಸಹಾಯ ಮಾಡಿ, ಸಂಕಷ್ಟವನ್ನು ದೂರಮಾಡಿರಬಹುದು. ಅಂತಹವರು ಕೆಲವರು ನಂತರ ಗೆಳೆಯರೂ ಆಗಿರಬಹುದು; ಇನ್ನು ಕೆಲವರು ತಮ್ಮ ಪಾಡಿಗೆ ತಾವು ಹೋಗಿರಬಹುದು. ಇಂತಹ ಅನುಭವ ನಿಮಗಾಗಿದ್ದರೆ, ಅದನ್ನು 200 ಪದಗಳ ಒಳಗೆ ಬರೆದು ನಮಗೆ ಕಳುಹಿಸಿ.

ನುಡಿ ಅಥವಾ ಯುನಿಕೋಡ್‌ನಲ್ಲಿ ಟಂಕಿಸಿದ ಬರಹಗಳನ್ನು specialvishwa@gmail.com ಇಲ್ಲಿಗೆ ಕಳುಹಿಸಿ. ಸೂಕ್ತ ಎನಿಸಿದರೆ ಪ್ರಕಟಿಸುತ್ತೇವೆ. ಬರಹ ಕಳುಹಿಸಲು ಕೊನೆಯ ದಿನಾಂಕ : 15.2.2025

ಇಂದು ಮೌನಿ ಅಮಾವಾಸ್ಯೆ: ಕುಂಭಮೇಳಕ್ಕೆ 10 ಕೋಟಿ ಜನ

ತ್ರಿವೇಣಿ ಸಂಗಮ ಸ್ಥಳದಲ್ಲಿ ಪವಿತ್ರ ಸ್ನಾನಕ್ಕೆ ಜನಸಾಗರ ನಿರೀಕ್ಷೆ | ದೇಶದ ವಿವಿಧೆಡೆಯಿಂದ ಪ್ರಯಾಗ್‌ರಾಜ್‌ಗೆ 60 ವಿಶೇಷ ರೈಲು

ಪ್ರಯಾಗ್‌ರಾಜ್: ಜ.29ರ ಬುಧವಾರ 'ಮೌನಿ ಅಮಾವಾಸ್ಯೆ' ಇರುವುದರಿಂದ ಉತ್ತರ ಪ್ರದೇಶದಲ್ಲಿನ ಪ್ರಯಾಗ್‌ರಾಜ್ ನಗರದಲ್ಲಿ ನಡೆದಿರುವ ಮಹಾಕುಂಭ ಮೇಳಕ್ಕೆ ದೇಶ-ವಿದೇಶದಿಂದ ಒಟ್ಟು 10 ಕೋಟಿ ಭಕ್ತರು ಆಗಮಿಸಿ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡುವ ನಿರೀಕ್ಷೆ ಇದೆ.

ಮೌನಿ ಅಮಾವಾಸ್ಯೆ ದಿನ ಬಹಳ ವಿಶೇಷವಾಗಿರುವುದರಿಂದ ಗಂಗಾ-ಯಮುನಾ-ಸರಸ್ವತಿ(ಗುಪ್ತಗಾಮಿನಿ) ನದಿಗಳ ಸಂಗಮ ಸ್ಥಳದಲ್ಲಿ ಪುಣ್ಯಸ್ನಾನ ಮಾಡುವುದರಿಂದ ಶ್ರೇಷ್ಠ ಫಲ ಸಿಗಲಿದೆ, ಪಾಪವೆಲ್ಲಾ ತೊಳೆದುಹೋಗಲಿದೆ, ಸದ್ಗತಿ ದೊರಕಲಿದೆ ಎಂಬ ನಂಬಿಕೆ ಸನಾತನ ಧರ್ಮದಲ್ಲಿ ಇರುವುದರಿಂದ ಬುಧವಾರ ಪ್ರಯಾಗ್‌ರಾಜ್‌ನಲ್ಲಿನ ಮಹಾ ಕುಂಭ ಮೇಳಕ್ಕೆ ಜನಸಾಗರವೇ ಹರಿದು ಬರುವ ಸಾಧ್ಯತೆ ಇದೆ. ಅದಕ್ಕಾಗಿ ಉತ್ತರ ಪ್ರದೇಶ ಸರಕಾರ ಭಾರೀ ಸಿದ್ಧತೆ ಮಾಡಿಕೊಂಡಿದೆ.

ಭಾರತೀಯ ರೈಲ್ವೆ ಇಲಾಖೆಯೂ ದೇಶದ ಮೂಲೆ ಮೂಲೆಗಳಿಂದ 60ಕ್ಕೂ ಅಧಿಕ ವಿಶೇಷ ರೈಲುಗಳನ್ನು ಪ್ರಯಾಗ್ ರಾಜ್‌ನತ್ತ ಸಾಗಿ ಬರಲು ವ್ಯವಸ್ಥೆ ಮಾಡಿದೆ. ದೂರ ದೂರದ ಊರುಗಳಿಂದ ಅದಾಗಲೇ ಪ್ರಯಾಣ ಆರಂಭಿಸಿರುವ ವಿಶೇಷ ರೈಲುಗಳು ಪ್ರಯಾಗ್‌ರಾಜ್‌ನತ್ತ ಧಾವಿಸುತ್ತಿವೆ.

10 ಕೋಟಿ ಭಕ್ತರ ಆಗಮನ ನಿರೀಕ್ಷೆ ಇರುವುದರಿಂದ ರೈಲ್ವೆ ನಿಲ್ದಾಣದಲ್ಲಿನ ಭದ್ರತಾ ವ್ಯವಸ್ಥೆಯಲ್ಲಿಯೂ ಗಮನಾರ್ಹ ಬದಲಾವಣೆ ಮಾಡಲಾಗಿದೆ. 10 ಸಾವಿರ ರೈಲ್ವೆ ಸುರಕ್ಷಾ ಪಡೆ(ಆರ್‌ಪಿಎಫ್) ಸಿಬ್ಬಂದಿಗಳನ್ನೂ ಪ್ರಯಾಣಿಕರ ಸುರಕ್ಷತೆ ಮತ್ತು ಸರಾಗ ಸಂಚಾರಕ್ಕಾಗಿ ನಿಯೋಜಿಸಲಾಗಿದೆ.

ಜ.28ರ ಬೆಳಗ್ಗೆವರೆಗೆ 14.76 ಕೋಟಿ ಜನರ ಪವಿತ್ರ ಸ್ನಾನ: ಪ್ರಯಾಗ್‌ರಾಜ್: ಉತ್ತರ ಪ್ರದೇಶದ ಪುಣ್ಯಕ್ಷೇತ್ರ ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಬೃಹತ್ ಧಾರ್ಮಿಕ ಕಾರ್ಯಕ್ರಮ ಮಹಾ ಕುಂಭಮೇಳದಲ್ಲಿ ದಿನವೂ ಲಕ್ಷಾಂತರ ಭಕ್ತರು ಭಾಗಿಯಾಗುತ್ತಿದ್ದು, ಜ.13ರಿಂದ ಈವರೆಗೆ 14.76 ಕೋಟಿ ಭಕ್ತರು ತ್ರಿವೇಣಿ ಸಂಗಮ ಸ್ಥಳದಲ್ಲಿ ಪವಿತ್ರ ಸ್ನಾನ ಮಾಡಿ ಪುನೀತ ಭಾವ ಅನುಭವಿಸಿದ್ದಾರೆ.

ಮಂಗಳವಾರವೂ ಬೆಳಗ್ಗೆ 8ರ ವೇಳೆಗೆಲ್ಲಾ 10 ಲಕ್ಷ ಸಾಧು-ಸಂತರು, ಸನಾತನ ಧರ್ಮದ ಅನುಯಾಯಿಗಳು ಸೇರಿ 45.50 ಲಕ್ಷ ಜನರು ಗಂಗಾ ಮತ್ತು ಯಮುನಾ, ಸರಸ್ವತಿ ನದಿಗಳ ಸಂಗಮ ಸ್ಥಳದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆಂದು ಉತ್ತರ ಪ್ರದೇಶದ ಮಾಹಿತಿ ಇಲಾಖೆ ಸುದ್ದಿಸಂಸ್ಥೆಗೆ ಅಂಕಿ ಅಂಶ ನೀಡಿದೆ.

360 ರೈಲುಗಳ ಸಂಚಾರ

ಮೌನಿ ಅಮಾವಾಸ್ಯೆ ದಿನಕ್ಕೆಂದೇ ಆಗಮಿಸುವ ಭಕ್ತರಿಗಾಗಿ ದೇಶದ ವಿವಿಧೆಡೆಯಿಂದ 60 ವಿಶೇಷ ರೈಲುಗಳ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ. ಈ ಹಿಂದಿನ ಕುಂಭಮೇಳಗಳ ಸಂದರ್ಭದಲ್ಲಿನ ಅನುಭವದ ಆಧಾರದ ಮೇಲೆ ವಿಶೇಷ ರೈಲುಗಳ ವ್ಯವಸ್ಥೆ ಮಾಡಲಾಗಿದೆ. ವಿಶೇಷ ರೈಲುಗಳಷ್ಟೇ ಅಲ್ಲದೇ ದಿನನಿತ್ಯ ಸಂಚರಿಸುವ 110 ರೈಲುಗಳು, ಮಹಾಕುಂಭ ಮೇಳಕ್ಕೆಂದೇ ಯೋಜಿಸಲಾದ 190 ಕುಂಭಮೇಳ ರೈಲುಗಳು ಸೇರಿದಂತೆ ಒಟ್ಟು 360 ರೈಲುಗಳು ಈ ಸಂದರ್ಭದಲ್ಲಿ ಪ್ರಯಾಗ್‌ರಾಜ್‌ಗೆ ಸಂಚರಿಸುತ್ತಿವೆ. ರೈಲುಗಳ ಮೂಲಕವೇ ಹತ್ತಿರಹತ್ತಿರ ಕೋಟಿ ಭಕ್ತರ ಆಗಮನವಾಗಲಿದೆ. ಅದೇ ರೀತಿ ಪ್ರಯಾಗ್‌ರಾಜ್‌ನಿಂದ ವಾಪಸಾಗುವ ಭಕ್ತರಿಗಾಗಿ ನಿತ್ಯವೂ ಪ್ರತಿ 4 ನಿಮಿಷಕ್ಕೊಂದು ರೈಲು ದೇಶದ ವಿವಿಧೆಡೆಗೆ ಸಂಚರಿಸುವ ವ್ಯವಸ್ಥೆ ಮಾಡಲಾಗಿದೆ. ಈ ಎಲ್ಲಾ ರೈಲುಗಳ ಸಂಚಾರ ನಿಯಂತ್ರಣಕ್ಕಾಗಿ 'ವಾರ್ ರೂಂ' ರೀತಿಯ ನಿಯಂತ್ರಣ ಕೊಠಡಿಯನ್ನೂ ಸ್ಥಾಪಿಸಲಾಗಿದೆ ಎಂದು ಭಾರತೀಯ ರೈಲ್ವೆ ಮಂಡಳಿಯ ಅಧ್ಯಕ್ಷ-ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಸತೀಶ್ ಕುಮಾರ್ ಅಂಕಿ ಅಂಶ ನೀಡಿದ್ದಾರೆ.

ಕುಂಭಮೇಳ ವಿಶೇಷ ರೈಲಿಗೆ ಕಲ್ಲೆಸೆತ

ಹರಪಾಲ್‌ಪುರ: ಪ್ರಯಾಗ್‌ರಾಜ್‌ನಲ್ಲಿನ ಮಹಾ ಕುಂಭಮೇಳಕ್ಕೆ ಭಕ್ತರು, ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ವಿಶೇಷ ರೈಲಿನ ಮೇಲೆ ಹರಪಾಲ್‌ಪುರ ಬಳಿ ಮಂಗಳವಾರ ಕಲ್ಲು ತೂರಾಟ ನಡೆದಿದೆ. ಕಿಟಕಿ ಗಾಜು ಛಿದ್ರವಾಗಿವೆ. ರೈಲಿನೊಳಗಿದ್ದ ಜನರು ಭಯದಿಂದ ಚೀರಿದ್ದಾರೆ.

ಮಧ್ಯಪ್ರದೇಶದ ಝೂನ್ಸಿ ರೈಲು ನಿಲ್ದಾಣದಿಂದ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ಗೆ ಸಂಚರಿಸುತ್ತಿದ್ದ ವಿಶೇಷ ರೈಲು ಗಾಡಿಗಾಗಿ ಹರಪಾಲ್‌ಪುರ ನಿಲ್ದಾಣದಲ್ಲಿ ನೂರಾರು ಪ್ರಯಾಣಿಕರು ಕಾಯುತ್ತಿದ್ದರು. ಹರಪಾಲ್‌ಪುರ ನಿಲ್ದಾಣದಲ್ಲಿ ಮಂಗಳವಾರ ನಸುಕಿನ 2 ಗಂಟೆಗೆ ವಿಶೇಷ ರೈಲು ನಿಲುಗಡೆಗೊಂಡಾಗ ಪ್ಲಾಟ್‌ಫಾರ್ಮ್‌ನಲ್ಲಿದ್ದ ಪ್ರಯಾಣಿಕರು ಬೋಗಿಗಳಿಗೆ ಹತ್ತಲು ಮುಂದಾದಾಗ ಬಾಗಿಲು ತೆರೆದುಕೊಳ್ಳಲಿಲ್ಲ. ಎಸಿ ಕೋಚ್‌ಗಳ ಬಾಗಿಲು ಒಳಗಿನಿಂದ ಲಾಕ್ ಆಗಿತ್ತು. ಪ್ಲಾಟ್‌ಫಾರ್ಮ್‌ನಲ್ಲಿದ್ದ ಪ್ರಯಾಣಿಕರು, ಬಾಗಿಲು ತೆಗೆಯಿರಿ ಎಂದು ಕೂಗಿದರೂ ಒಳಗಿದ್ದವರು ಬಾಗಿಲು ತೆರೆಯಲಿಲ್ಲ. ಇದರಿಂದ ಸಿಟ್ಟಿಗೆದ್ದ ಪ್ಲಾಟ್‌ಫಾರ್ಮ್‌ನಲ್ಲಿದ್ದ ಪ್ರಯಾಣಿಕರು ರೈಲಿನತ್ತ ಕಲ್ಲು ತೂರಿದ್ದಾರೆ. ಎಸಿ ಬೋಗಿಯೊಂದರ ಕಿಟಕಿ ಗಾಜು ಛಿದ್ರವಾಗಿದೆ. ಒಳಗಿದ್ದ ಪ್ರಯಾಣಿಕರು ಭಯದಿಂದ ಚೀರಿದ್ದಾರೆ.

ಎಸಿ ಕೋಚ್ ಬಾಗಿಲು ಲಾಕ್ ಆಗಿದ್ದರಿಂದ ಸಿಟ್ಟಿಗೆದ್ದ ಪ್ರಯಾಣಿಕರು ಕಲ್ಲೆಸೆದಿದ್ದಾರೆ. ರೈಲ್ವೆ ಪೊಲೀಸರು ಪ್ರಯಾಣಿಕರನ್ನು ಶಾಂತಗೊಳಿಸಿ ಪ್ರಯಾಣಕ್ಕೆ ವ್ಯವಸ್ಥೆ ಮಾಡಿದ್ದಾರೆ ಎಂದು ಪೊಲೀಸ್ ಅಧಿಕಾರಿ ಪುಷ್ಪಕ್ ಶರ್ಮಾ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಜನವರಿ 13ರಂದು ಮಹಾ ಕುಂಭಮೇಳ ಆರಂಭವಾಗಿದ್ದು, 14.76 ಕೋಟಿ ಜನರು ಗಂಗಾ, ಯಮುನಾ, ಸರಸ್ವತಿ ನದಿಗಳ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ. ಕೇಂದ್ರ ಸಚಿವರುಗಳಾದ ರಾಜನಾಥ್ ಸಿಂಗ್, ಅಮಿತ್ ಶಾ, ಕಿರಣ್ ರಿಜಿಜು, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಸಮಾಜವಾದಿ ಪಕ್ಷದ ಮುಖಂಡ ಅಖಿಲೇಶ್ ಯಾದವ್, ಚಿತ್ರ ನಟ-ನಟಿಯರು, ಕ್ರೀಡಾಪಟುಗಳು ಸೇರಿದಂತೆ ನೂರಾರು ಸೆಲೆಬ್ರಿಟಿಗಳು ಮಹಾಕುಂಭ ಮೇಳ ಸ್ಥಳಕ್ಕೆ ಭೇಟಿ ನೀಡಿ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿ ತೆರಳಿದ್ದಾರೆ. 144 ವರ್ಷಗಳ ನಂತರ ನಡೆಯುತ್ತಿರುವ ಮಹಾ ಕುಂಭಮೇಳ ವಿಶ್ವದೆಲ್ಲೆಡೆಯಿಂದಲೂ ಅಪಾರ ಸಂಖ್ಯೆಯ ಭಕ್ತರು, ಪ್ರವಾಸಿಗನ್ನು ಆಕರ್ಷಿಸುತ್ತಿದೆ. ಅಮೆರಿಕ, ರಷ್ಯಾ, ಉಕ್ರೇನ್, ಬ್ರಿಟನ್, ಬ್ರೆಜಿಲ್ ಮೊದಲಾದ ದೇಶಗಳ ಪ್ರವಾಸಿಗರು ಮಹಾ ಕುಂಭಮೇಳಕ್ಕೆ ಭೇಟಿ ನೀಡಿದ್ದಾರೆ. ಆಪಲ್ ಕಂಪನಿಯ ಸಂಸ್ಥಾಪಕರಾಗಿದ್ದ ಸ್ಟೀವ್ ಜಾಬ್ಸ್ ಅವರ ಪತ್ನಿ ಲಾರೆನ್ಸ್ ಪೋವೆಲ್ ಅವರೂ ಸನಾತನ ಧರ್ಮದ ಅನುಯಾಯಿಯಾಗಿದ್ದು, ಮಹಾ ಕುಂಭಮೇಳದಲ್ಲಿ ಈ ಬಾರಿ ಭಾಗಿಯಾಗಿದ್ದರು. ಇಟಲಿಯ ಯಾತ್ರಿಕ ಆಂಟೋನಿಯೊ ಕುಂಭಮೇಳದಲ್ಲಿ ಪಾಲ್ಗೊಳ್ಳುವ ತಮ್ಮ ದಶಕದ ಕನಸು ಅಂತಿಮವಾಗಿ ಈಡೇರಿದೆ ಎಂದು ಸಂತಸದಿಂದ ಹೇಳಿಕೊಂಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಹಿಂದೂ ದೇವರ ನಿಂದೆ: ರಾಣಾ ವಿರುದ್ಧ ದೂರು

ದೆಹಲಿ: ಹಿಂದೂ ದೇವತೆಗಳ ನಿಂದೆ, ದೇಶ ವಿರೋಧಿ ಚಿಂತನೆ ಹರಡುವಿಕೆ, ಧಾರ್ಮಿಕ ವಿಚಾರಗಳ ಬಗ್ಗೆ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಪ್ರಕಟಿಸಿದ ಆರೋಪದಡಿ ಪತ್ರಕರ್ತೆ ರಾಣಾ ಅಯ್ಯೂಬ್ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ದೆಹಲಿ ನ್ಯಾಯಾಲಯವೊಂದು ಮಂಗಳವಾರ ಆದೇಶ ನೀಡಿದೆ. 2016-17ರಲ್ಲಿ ಮಾಡಿದ ಜಾಲತಾಣ ಪೋಸ್ಟ್‌ಗಳ ಸಂಬಂಧ ರಾಣಾ ಅಯ್ಯೂಬ್ ವಿರುದ್ಧ ಎಫ್‌ಐಆರ್ ದಾಖಲಿಸಿ, ಕ್ರಮಬದ್ಧವಾಗಿ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ದೆಹಲಿ ನ್ಯಾಯಾಲಯದ ನ್ಯಾಯಾಧೀಶ ಹಿಮಾಂಶು ರಮಣ್ ಸಿಂಗ್ ಅವರು ಪೊಲೀಸರಿಗೆ ಆದೇಶಿಸಿದೆ. ಅಯ್ಯೂಬ್ ವಿರುದ್ಧ ಪ್ರಕರಣ ದಾಖಲಿಸಲು ಪೊಲೀಸರಿಗೆ ನಿರ್ದೇಶನ ನೀಡುವಂತೆ ವಕೀಲರೊಬ್ಬರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಅಕ್ರಮ ಮತಾಂತರ ಗಂಭೀರ ಅಪರಾಧವಲ್ಲ

ದೆಹಲಿ: ಅಕ್ರಮ ಮತಾಂತರ ನಡೆಸುವುದು ಕೊಲೆ, ಡಕಾಯಿತಿ, ಅತ್ಯಾಚಾರದಷ್ಟು ಗಂಭೀರ ಅಪರಾಧವಲ್ಲ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಅಲ್ಲದೇ, ಬುದ್ಧಿಮಾಂದ್ಯ ಬಾಲಕನನ್ನು ಇಸ್ಲಾಂ ಧರ್ಮಕ್ಕೆ ಅಕ್ರಮವಾಗಿ ಮತಾಂತರಗೊಳಿಸಿದ ಆರೋಪ ಹೊತ್ತಿದ್ದ ಮುಸ್ಲಿಂ ಮೌಲ್ವಿಗೆ ಮಂಗಳವಾರ ಜಾಮೀನು ಮಂಜೂರು ಮಾಡಿದೆ. ಜಾಮೀನು ಅರ್ಜಿ ವಿಚಾರಣೆ ನಡೆಸುವಾಗ ವಿಚಾರಣಾ ನ್ಯಾಯಾಲಯಗಳು ಹೇಗೆ ವಿವೇಚನೆ ಬಳಸಬೇಕು ಎಂಬ ಕುರಿತು ಸಾಕಷ್ಟು ಕಾರ್ಯಾಗಾರ, ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಅವುಗಳಿಗೆ ಹಾಜರಾಗಿರುವ ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು ಜಾಮೀನು ಅರ್ಜಿಗಳನ್ನು ತಿರಸ್ಕರಿಸುವುದಕ್ಕೆ ಹೆಚ್ಚು ಆದ್ಯತೆ ನೀಡುತ್ತಾರೆ. ಇದು ಸರಿಯಾದ ಕ್ರಮವಲ್ಲ ಎಂದು ನ್ಯಾ.ಜೆ.ಬಿ.ಪರದಿವಾಲಾ ಮತ್ತು ನ್ಯಾ. ಆರ್.ಮಹದೇವನ್ ಅವರ ಪೀಠ ಹೇಳಿದೆ. ವಿಚಾರಣಾ ನ್ಯಾಯಾಲಯಗಳ ನ್ಯಾಯಾಧೀಶರಿಗೆ ಸಿಆರ್‌ಪಿಸಿ ಸೆಕ್ಷನ್ 439 ಅಥವಾ ಬಿಎನ್‌ಎಸ್‌ಎಸ್ ಸೆಕ್ಷನ್ 483ರ ವ್ಯಾಪ್ತಿ ತಿಳಿಯದಿರುವುದೇ ಇದಕ್ಕೆ ಕಾರಣ ಎನಿಸುತ್ತದೆ ಎಂದು ಪೀಠ ವಿಷಾದಿಸಿದೆ.

ಗುರ್ಮೀತ್‌ಗೆ ಮತ್ತೆ 30 ದಿನ ಪೆರೋಲ್

ಚಂಡೀಗಢ: ಅತ್ಯಾಚಾರ, ಕೊಲೆ ಪ್ರಕರಣದಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿರುವ ಡೇರಾ ಸಚ್ಚಾಸೌಧ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಮ್ ಸಿಂಗ್‌ಗೆ ಮತ್ತೆ 30 ದಿನಗಳ ಪೆರೋಲ್ ದೊರೆತಿದೆ. ಇದು 11ನೇ ಬಾರಿ ನೀಡಲಾದ ಪೆರೋಲ್. ಮಂಗಳವಾರ ನಸುಕಿನ 5.30ರಲ್ಲಿ ರೋಹ್ಟಕ್‌ನ ಸುನಾರಿಯಾ ಜೈಲಿನಿಂದ ಗುರ್ಮೀತ್ ಬಿಡುಗಡೆಯಾದ. ಆತನನ್ನು ಬರಮಾಡಿಕೊಳ್ಳಲು ಆಪ್ತ ಸಹಾಯಕಿ ಹನಿಪ್ರೀತ್ ಜೈಲಿನ ಹಾಜರಿದ್ದರು ಎಂದು ಮೂಲಗಳು ತಿಳಿಸಿವೆ. ಇಬ್ಬರು ಶಿಷ್ಯೆಯರ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿದ ಆರೋಪದಡಿ ಗುರ್ಮೀತ್ 20 ವರ್ಷಗಳ ಜೈಲು ಶಿಕ್ಷೆಗೆ ಒಳಗಾಗಿದ್ದಾನೆ.



ದೆಹಲಿಯಲ್ಲಿ 4 ಮಹಡಿ ಕಟ್ಟಡ ಕುಸಿದು 2 ಸಾವು

ದೆಹಲಿ: ಉತ್ತರ ದೆಹಲಿಯ ಬುರಾರಿ ಪ್ರದೇಶದಲ್ಲಿ ಹೊಸದಾಗಿ ನಿರ್ಮಿಸಲಾಗುತ್ತಿದ್ದ 4 ಅಂತಸ್ತುಗಳ ಕಟ್ಟಡ ಸೋಮವಾರ ಸಂಜೆ ಕುಸಿದುಬಿದ್ದಿದ್ದು, ಅವಶೇಷಗಳಡಿ ಸಿಲುಕಿದವರಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ. ಕೆಲವರು ಗಾಯಗೊಂಡಿದ್ದಾರೆ. 12 ಜನರನ್ನು ರಕ್ಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. 200 ಚದರ ಗಜಗಳಷ್ಟು ವಿಸ್ತೀರ್ಣದಲ್ಲಿ ಹೊಸ ಕಟ್ಟಡದ ನಿರ್ಮಾಣ ಕಾರ್ಯ ನಡೆದಿತ್ತು.

{ ಅಣ್ಣಾಮಲೈ } ತಮಿಳುನಾಡು ಬಿಜೆಪಿ ಅಧ್ಯಕ್ಷ

ತಮಿಳುನಾಡು ರಾಜ್ಯ ಡಿಎಂಕೆ ಆಡಳಿತ ವೈಖರಿಯಿಂದಾಗಿ 2 ದಶಕಗಳಷ್ಟು ಹಿಂದಕ್ಕೆ ಹೋಗಿದೆ. ರಾಜ್ಯ ಈಗ ಸುಸ್ಥಿತಿಯಲ್ಲಿಲ್ಲ. ದ್ರಾವಿಡ ರಾಜಕೀಯ ಪಕ್ಷಗಳ ಸಾಂಸ್ಕೃತಿಕ ಐಕಾನ್‌ಗಳು ಈಗ ಹಳೆಯದಾಗಿವೆ. ರಾಜ್ಯದಲ್ಲಿ ಬಿಜೆಪಿ ತಳಮಟ್ಟದಿಂದ ನೆಲೆ ಕಂಡುಕೊಳ್ಳುತ್ತಿದೆ. 2026ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ.

5 ವರ್ಷ ಬಳಿಕ ಭಾರತ, ಚೀನಾ ನೇರ ವಿಮಾನ

ದೆಹಲಿ: ಕೋವಿಡ್-19 ವೈರಸ್ ವ್ಯಾಪಕ ಹರಡುವಿಕೆ ಸಂದರ್ಭ ಭಾರತ-ಚೀನಾ ನಡುವಿನ ನೇರ ವಿಮಾನ ಸೇವೆ ಸ್ಥಗಿತವಾಗಿದ್ದುದು, ಈಗ 5 ವರ್ಷಗಳ ಬಳಿಕ ಪುನಾರಂಭಗೊಳ್ಳುತ್ತಿದೆ. ನೇರ ವಿಮಾನ ಸಂಚಾರಕ್ಕೆ ಭಾರತ-ಚೀನಾ ಸರಕಾರಗಳು ಇದೀಗ ಒಪ್ಪಿಗೆ ನೀಡಿವೆ.

ಚೀನಾ ಉಪ ವಿದೇಶಾಂಗ ಸಚಿವ ವಾಂಗ್ ಯಿ ಅವರನ್ನು ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಬೀಜಿಂಗ್‌ನಲ್ಲಿ ಭೇಟಿ ಮಾಡಿದ ಬಳಿಕ ನೇರ ವಿಮಾನ ಸಂಚಾರಕ್ಕೆ ತಾತ್ವಿಕ ಒಪ್ಪಿಗೆ ನೀಡಲಾಗಿದೆ ಎಂದು ದೆಹಲಿಯಲ್ಲಿನ ವಿದೇಶಾಂಗ ಸಚಿವಾಲಯದ ಅಧಿಕಾರಿಗಳು ಸುದ್ದಿಸಂಸ್ಥೆಗೆ ಮಂಗಳವಾರ ತಿಳಿಸಿದ್ದಾರೆ.

ಇದಲ್ಲದೇ, ಕೈಲಾಸ ಮಾನಸ ಸರೋವರ ಯಾತ್ರೆ ಪುನಾರಂಭಕ್ಕೂ ಭಾರತ-ಚೀನಾ ಸಮ್ಮತಿಸಿವೆ. ಟಿಬೆಟ್ ಮೂಲಕ ನಡೆಸಲಾಗುವ ಕೈಲಾಸ ಪರ್ವತ ಮತ್ತು ಮಾನಸ ಸರೋವರ ಯಾತ್ರೆಯನ್ನು 2020ರಲ್ಲಿ ಕೋವಿಡ್-19 ಸಂದರ್ಭ ಸ್ಥಗಿತಗೊಳಿಸಲಾಗಿತ್ತು.

ಎನ್‌ಐಎ ದಾಳಿ: ಚೆನ್ನೈನಲ್ಲಿ ಒಬ್ಬ ಸೆರೆ

ಚೆನ್ನೈ: ತಮಿಳುನಾಡಿನಲ್ಲಿ ಐಎಸ್‌ಐಎಸ್ ಜಾಲವಿದ್ದು, ಸದಸ್ಯರ ನೇಮಕವಾಗುತ್ತಿದೆ ಎಂಬ ಮಾಹಿತಿ ಲಭ್ಯವಾದ ಬಳಿಕ ರಾಷ್ಟ್ರೀಯ ತನಿಖಾ ಏಜೆನ್ಸಿ(ಎನ್‌ಐಎ)ಯ ಅಧಿಕಾರಿಗಳ ತಂಡ ಮಂಗಳವಾರ ದಾಳಿ ನಡೆಸಿ ರಾಜ್ಯದಲ್ಲಿನ 20 ಸ್ಥಳಗಳಲ್ಲಿ ಶೋಧ ಕಾರ್ಯ ಕೈಗೊಂಡಿದೆ. ವಾಟ್ಸಾಪ್ ಗ್ರೂಪ್, ಟೆಲಿಗ್ರಾಂ, ಸಿಗ್ನಲ್‌ನಂತಹ ಆ್ಯಪ್‌ಗಳ ಮೂಲಕ ಯುವಕರ ಮನವೊಲಿಸಿ ಕೆಡಿಸಿ ಐಸಸ್ ಉಗ್ರ ಸಂಘಟನೆಗೆ ಸೇರಿಸಿದ ಆರೋಪದಡಿ ಮೈಲುಡಾತುರೈ ಜಿಲ್ಲೆಯ ತಿರುಮುಲೈವಾಸಲ್‌ನ ಅಲ್ ಫಾಸಿತ್ ಎಂಬಾತನನ್ನು ಚೆನ್ನೈನಲ್ಲಿ ಬಂಧಿಸಿ ಕಂಪ್ಯೂಟರ್, ಮೊಬೈಲ್ ಫೋನ್ ಸೇರಿದಂತೆ ಹಲವು ಎಲೆಕ್ಟ್ರಾನಿಕ್ ಉಪಕರಣಗಳನ್ನು ವಶಪಡಿಸಿಕೊಂಡಿದೆ. ಫಾಸಿತ್, ನಬೀನ್ ಮತ್ತು ಸಂಬಂಧಿಕರಿಗೆ ಭಯೋತ್ಪಾದಕ ಸಂಘಟನೆಗಳ ಸಂಪರ್ಕ ಇರುವುದರಿಂದ ಎನ್‌ಐಎ ಶೋಧ ನಡೆಸುತ್ತಿದೆ ಎನ್ನಲಾಗಿದೆ.

ಗೃಹಸಾಲ ಲಭ್ಯತೆ ಸರಳವಾಗಲಿ, ಬಡ್ಡಿ ತಗ್ಗಲಿ

ಸ್ವಂತ ಮನೆ ಕನಸಿಗೆ ಸರಕಾರ ಶಕ್ತಿ ತುಂಬಲಿ | ಇದು ಮಧ್ಯಮ ವರ್ಗದ ದೊಡ್ಡ ಬೇಡಿಕೆ

ದೆಹಲಿ: ಕೇಂದ್ರ ಸರಕಾರದ 2025-26ನೇ ಹಣಕಾಸು ವರ್ಷದ ಮುಂಗಡಪತ್ರ ಮಂಡನೆಗೆ ಇನ್ನು 3 ದಿನಗಳಷ್ಟೇ ಬಾಕಿ ಇವೆ. ಎಲ್ಲರ ಗಮನವೂ ಈಗ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರತ್ತಲೇ ಇದೆ. ಸಚಿವೆ, ಸಿಂಹಲಾಂಛನವುಳ್ಳ ಕೆಂಪು ವಸ್ತ್ರದೊಳಗೆ ಮುಚ್ಚಿಟ್ಟುಕೊಂಡು ಸಂಸತ್‌ಗೆ ತರಲಿರುವ ಡಿಜಿಟಲ್ ಕಡತದಲ್ಲೇನಿರಲಿದೆ ಎಂಬ ಕುತೂಹಲವಿದೆ.

ಮುಂದಿನ ಕೆಲ ವರ್ಷಗಳಲ್ಲಿ 5 ಟ್ರಿಲಿಯನ್ ಆರ್ಥಿಕ ಶಕ್ತಿಗೆ ಬೆಳವಣಿಗೆ ಕಾಣಬೇಕೆಂಬ ಕನಸು ಪ್ರಧಾನಿ ನರೇಂದ್ರ ಮೋದಿ ಅವರದ್ದಾಗಿದೆ. ಈ ಕನಸನ್ನು ನನಸು ಮಾಡಬೇಕಾದ್ದು ಮೋದಿ ಅವರ ಸಂಪುಟದಲ್ಲಿ ವಿತ್ತ ಸಚಿವರಾಗಿರುವ ನಿರ್ಮಲಾ ಸೀತಾರಾಮನ್ ಅವರದ್ದಾಗಿದೆ. ಈ ಕನಸು ನನಸು ಮಾಡಿಸಲು ತೆರಿಗೆ ಸಂಪನ್ಮೂಲ ಇನ್ನಷ್ಟು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಕಠಿಣ ಸವಾಲು ವಿತ್ತ ಸಚಿವೆ ಮುಂದಿದೆ.

ಇದೇ ಕಾರಣವಾಗಿ, ಕಾರ್ಪೊರೇಟ್ ಕಂಪನಿಗಳು ಮತ್ತು ಉದ್ಯಮ ಸಂಸ್ಥೆಗಳಿಗೆ ವಿತ್ತ ಸಚಿವೆ ನಿರ್ಮಲಾ ಅವರು ಯಾವ ಕ್ಷೇತ್ರಗಳಿಗೆಲ್ಲಾ ಹೊಸದಾಗಿ ತೆರಿಗೆ ಹೇರುವರೋ ಎಂಬ ಆತಂಕವಿದೆ.

ಇನ್ನೊಂದೆಡೆ, ದೇಶದಲ್ಲಿನ ವೇತನದಾರರಿಗೆ ಆದಾಯ ತೆರಿಗೆ 'ವಿನಾಯಿತಿ' ಮಿತಿ ಹೆಚ್ಚಳವಾಗಲಿದೆಯೋ ಇಲ್ಲವೋ ಎಂಬ ಚಿಂತೆಯಾಗಿದೆ. ಸ್ವಂತ ಮನೆಯ ಕನಸು ಕಾಣುತ್ತಿರುವವರಿಗೆ ಗೃಹ ಸಾಲ ಮಂಜೂರು ಪ್ರಕ್ರಿಯೆ ಇನ್ನಷ್ಟು ಸರಳವಾಗಲಿ, ಗೃಹ ಸಾಲದ ಬಡ್ಡಿದರ ಮತ್ತಷ್ಟು ತಗ್ಗಲಿ. ಹೊಸ ತೆರಿಗೆ ವ್ಯವಸ್ಥೆಯಡಿ ಸ್ವಂತಮನೆ ಹೊಂದಲು ಇಚ್ಛಿಸುವವರನ್ನು ಕೇಂದ್ರ ಸರಕಾರ ಪ್ರೋತ್ಸಾಹಿಸಬೇಕು ಎಂಬುದಾಗಿದೆ. ಜನಸಾಮಾನ್ಯರ ಚಿಂತೆ ಅಗತ್ಯ ವಸ್ತುಗಳ ಧಾರಣೆ. ಬೆಲೆ ಏರಿಕೆಯಿಂದ ಜನರು ತತ್ತರಿಸಿದ್ದಾರೆ. ಹಣದುಬ್ಬರವಂತೂ ಮತ್ತೆ ಏರುಮುಖಿಯಾಗಿದೆ. ಇದರ ಮಧ್ಯೆಯೇ ಭಾರತೀಯ ರಿಸರ್ವ್ ಬ್ಯಾಂಕ್ 2025ರಲ್ಲಿ ದೇಶದಲ್ಲಿನ ಹಣದುಬ್ಬರ ಶೇ.4.8ಕ್ಕೆ ಏರಿಕೆ ಆಗಲಿದೆ ಎಂದು ಭವಿಷ್ಯ ನುಡಿದ ಭಯ ಹೆಚ್ಚುವಂತೆ ಮಾಡಿದೆ. ಈ ಮೊದಲು 2025ರಲ್ಲಿ ಹಣದುಬ್ಬರ ಶೇ.4.5ರಷ್ಟಿರಲಿದೆ ಎಂದಿದ್ದ ಆರ್‌ಬಿಐ, ಹೊಸ ವರ್ಷದಲ್ಲಿ ತನ್ನದೇ ಅಂದಾಜನ್ನು ಪರಿಷ್ಕರಿಸಿದೆ.

ಭಾರತ, ಚೀನಾ, ಬ್ರೆಜಿಲ್‌ಗೆ ಹೆಚ್ಚಿನ ಸುಂಕ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ | 'ಅಮೆರಿಕ ಮೊದಲು' ಎಂಬುದೇ ನಮ್ಮ ಆದ್ಯತೆ

ಫ್ಲೋರಿಡಾ: ಅಮೆರಿಕದ ವಾಣಿಜ್ಯ ಹಿತಾಸಕ್ತಿಗೆ ಹಾನಿ ಮಾಡುವಂತಹ ಕ್ರಮಗಳನ್ನು ಕೈಗೊಳ್ಳುವ ದೇಶಗಳ ಮೇಲೆ ಅಮೆರಿಕ ಕೂಡಾ ಹೆಚ್ಚುವರಿ ಸುಂಕ ವಿಧಿಸಲಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ಸಂದೇಶ ರವಾನಿಸಿದ್ದಾರೆ. ಅವರ ಪ್ರಕಾರ ಚೀನಾ, ಬ್ರೆಜಿಲ್ ಮತ್ತು ಭಾರತ ಆ ಪಟ್ಟಿಯಲ್ಲಿರುವ ದೇಶಗಳು.

ಫ್ಲೋರಿಡಾದ ರಿಟ್ರೀಟ್‌ನಲ್ಲಿ ರಿಪಬ್ಲಿಕನ್ ಪಕ್ಷದ ನಾಯಕರು, ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡಿದ ಟ್ರಂಪ್, ಅಮೆರಿಕದ ವ್ಯಾಪಾರ ವಹಿವಾಟಿಗೆ ತೊಡಕಾಗುವಂತೆ ಹೆಚ್ಚಿನ ತೆರಿಗೆ, ಆಮದು ಸುಂಕ ವಿಧಿಸುವ ದೇಶಗಳ ಉತ್ಪನ್ನಗಳ ಮೇಲೆಯೂ ನಾವೂ ಅಧಿಕ ಪ್ರಮಾಣದ ಸುಂಕ ವಿಧಿಸಲಿದ್ದೇವೆ. ಆ ದೇಶಗಳು ತಮ್ಮಲ್ಲಿನ ಆರ್ಥಿಕ ಉತ್ಪನ್ನಗಳ ಮಾರಾಟಕ್ಕಾಗಿ ಹಾಗೆ ಮಾಡುವುದಾದರೆ ನಾವೂ ಅದೇ ಪ್ರತ್ಯುತ್ತರ ನೀಡಬೇಕಾಗುತ್ತದೆ ಎಂದಿದ್ದಾರೆ.

ಚೀನಾಕ್ಕೆ ಮೊದಲು ಸುಂಕ ಹೆಚ್ಚಳ ಮಾಡಲಾಗುವುದು, ನಂತರ ಬ್ರೆಜಿಲ್, ಭಾರತ ಮತ್ತಿತರ ದೇಶಗಳ ಸಾಲಿದೆ. 'ಅಮೆರಿಕ ಮೊದಲು' ಎಂಬುದೇ ನಮ್ಮ ಆದ್ಯತೆ. ನಮ್ಮ ಉತ್ಪನ್ನಗಳಿಗೆ ಹೆಚ್ಚಿನ ಆಮದು ಸುಂಕ ವಿಧಿಸುವ ದೇಶಗಳ ಮೇಲೆ ನಾವೂ ಅಧಿಕ ಸುಂಕ ವಿಧಿಸುವುದು ಅನಿವಾರ್ಯ. ಹೀಗೆ ಮಾಡುವುದರಿಂದ ಮಾತ್ರವೇ ನಮ್ಮ ಕೈಗಾರಿಕೆಗಳ ಹಿತರಕ್ಷಣೆಯಾಗಲಿದೆ, ಸರಕಾರದ ಬೊಕ್ಕಸಕ್ಕೆ ಹಣವೂ ಬರಲಿದೆ ಎಂದರು.

ಅಮೆರಿಕ ಮರಳಿ ಆರ್ಥಿಕ ಪ್ರಗತಿ ಕಾಣಬೇಕಿದೆ. ಅದಕ್ಕಾಗಿ ನ್ಯಾಯಯುತ ವ್ಯವಸ್ಥೆ ಮರು ಸ್ಥಾಪಿಸಲಾಗುವುದು. ಅಮೆರಿಕ ದೇಶವನ್ನು ಈ ಅವಧಿಯಲ್ಲೇ ಹಿಂದೆಂದಿಗಿಂತಲೂ ಸಿರಿವಂತ ಮತ್ತು ಬಲಿಷ್ಠ ದೇಶವನ್ನಾಗಿ ಮಾಡಬೇಕಿದೆ ಎಂದರು.

ಸದ್ಯವೇ ಮೋದಿ ಅಮೆರಿಕಕ್ಕೆ

ಫೆಬ್ರವರಿ ಮಾಸದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಶ್ವೇತಭವನಕ್ಕೆ ಭೇಟಿ ನೀಡಲಿದ್ದಾರೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ವಾಯುನೆಲೆಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಟ್ರಂಪ್, ಪ್ರಧಾನಿ ಮೋದಿ ಮತ್ತು ಭಾರತದೊಂದಿಗೆ ಉತ್ತಮ ಸಂಬಂಧವಿದೆ. ಸೋಮವಾರ ಬೆಳಗ್ಗೆ ಮೋದಿ ಅವರೊಂದಿಗೆ ದೀರ್ಘ ಮಾತುಕತೆ ನಡೆಸಿದೆ. ಅವರು ಫೆಬ್ರವರಿಯಲ್ಲಿ ಶ್ವೇತಭವನಕ್ಕೆ ಬರಲಿದ್ದಾರೆ ಎಂದರು. ಮೊದಲ ಬಾರಿ ಅಧ್ಯಕ್ಷರಾಗಿದ್ದಾಗ 4 ವರ್ಷಗಳ ಹಿಂದೆ ಟ್ರಂಪ್ ಅವರ ಕೊನೆಯ ವಿದೇಶ ಪ್ರವಾಸ ಭಾರತವಾಗಿತ್ತು. ಟ್ರಂಪ್ ಮತ್ತು ಮೋದಿ ಮಧ್ಯೆ ಉತ್ತಮ ಸ್ನೇಹ ಸಂಬಂಧವಿದೆ. 2019ರ ಸೆಪ್ಟೆಂಬರ್‌ನಲ್ಲಿ ಅಮೆರಿಕದ ಹ್ಯೂಸ್ಟನ್‌ನಲ್ಲಿ, ಬಳಿಕ 2020ರ ಫೆಬ್ರವರಿಯಲ್ಲಿ ಗುಜರಾತ್‌ನ ಅಹಮದಾಬಾದ್‌ನಲ್ಲಿ ವಿಭಿನ್ನ ರ‍್ಯಾಲಿ ನಡೆಸಿ ಸಾವಿರಾರು ಜನರನ್ನುದ್ದೇಶಿಸಿ ಜಂಟಿ ಭಾಷಣ ಮಾಡಿದ್ದರು.

ಶ್ರೀಲಂಕಾ ನೌಕಾಪಡೆ ಗುಂಡಿನ ದಾಳಿ: ಭಾರತದ 5 ಮೀನುಗಾರರಿಗೆ ಗಾಯ

ದೆಹಲಿ: ಶ್ರೀಲಂಕಾ ನೌಕಾಪಡೆ ಯೋಧರು ಬುಧವಾರ ಭಾರತೀಯ ಮೀನುಗಾರರ ಮೇಲೆ ಗುಂಡಿನ ದಾಳಿ ನಡೆಸಿದ್ದು, ಐವರು ಮೀನುಗಾರರು ಗುಂಡೇಟಿನಿಂದ ಗಾಯಗೊಂಡಿದ್ದಾರೆ. ಇಬ್ಬರು ಮೀನುಗಾರರಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ. ಡೆಲ್ಫ್ ದ್ವೀಪದ ಬಳಿ ಘಟನೆ ನಡೆದಿದೆ.

ಗುಂಡಿನ ದಾಳಿ ಬಳಿಕ ಗಾಯಾಳುಗಳನ್ನು ತನ್ನ ವಶಕ್ಕೆ ಪಡೆದುಕೊಂಡ ಲಂಕಾ ನೌಕಾಪಡೆ ಜಾಫ್ನಾಗೆ ಕರೆದೊಯ್ದು ಆಸ್ಪತ್ರೆಗೆ ದಾಖಲಿಸಿದೆ. ಐವರೂ ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಲಂಕಾ ನಡೆಗೆ ಭಾರತ ಕೆಂಡ -ಹೈಕಮಿಷನರ್‌ಗೆ ತರಾಟೆ

ತೀವ್ರ ಪ್ರತಿಭಟನೆ: ಗುಂಡಿನ ದಾಳಿ ಸುದ್ದಿ ತಿಳಿದ ಬಳಿಕ ಭಾರತ ಸರಕಾರ ಶ್ರೀಲಂಕಾ ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದೆ. ವಿದೇಶಾಂಗ ಸಚಿವಾಲಯ ದೆಹಲಿಯಲ್ಲಿರುವ ಶ್ರೀಲಂಕಾ ಹಂಗಾಮಿ ಹೈಕಮಿಷನರ್‌ಗೆ ಸಮನ್ ಮಾಡಿ ಕಚೇರಿಗೆ ಕರೆಸಿಕೊಂಡು ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದೆ. ಮೀನುಗಾರರ ಸಮಸ್ಯೆ, ಜೀವನೋಪಾಯ ಗಮನದಲ್ಲಿಟ್ಟುಕೊಂಡು ಕಾಳಜಿ ಮತ್ತು ಮಾನವೀಯ ರೀತಿಯಲ್ಲಿ ಪರಿಗಣಿಸಬೇಕಾದ ಅಗತ್ಯವಿದೆ ಎಂಬುದನ್ನು ಭಾರತ ಸರಕಾರ ಬಹಳಷ್ಟು ಬಾರಿ ಲಂಕಾ ಬಳಿ ಒತ್ತಿ ಹೇಳಿದೆ. ಯಾವುದೇ ಸಂದರ್ಭದಲ್ಲೂ ಶಸ್ತ್ರ ಪ್ರಯೋಗ ಸಲ್ಲದು. ಉಭಯ ದೇಶಗಳ ನಡುವಿನ ಎಂಒಯುವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಹೇಳಿದೆ.

ಕೊಲಂಬೊದಲ್ಲಿರುವ ಭಾರತೀಯ ಹೈಕಮಿಷನರ್ ಕೂಡ ಲಂಕಾ ಸರಕಾರದ ವಿದೇಶಾಂಗ ಸಚಿವಾಲಯದ ಜತೆ ಗುಂಡಿನ ದಾಳಿ ವಿಷಯ ಪ್ರಸ್ತಾಪಿಸಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಹುಲಿ ಉದರದಲ್ಲಿ ಮಹಿಳೆ ಕೂದಲು, ಬಟ್ಟೆ, ಓಲೆ ಪತ್ತೆ

ವಯನಾಡು: ಮಹಿಳೆಯನ್ನು ಕೊಂದು ತಿಂದು 'ನರಭಕ್ಷಕ' ಎನಿಸಿಕೊಂಡಿದ್ದ 5 ವರ್ಷದ ಹುಲಿ ಕೇರಳದ ವಯನಾಡಿನ ಪಿಲಕಾವುವಿನ ಜನನಿಬಿಡ ಪ್ರದೇಶದ ಮನೆಯೊಂದರ ಹಿಂಬದಿ ಸತ್ತು ಬಿದ್ದಿದ್ದು, ಅದರ ಹೊಟ್ಟೆಯಲ್ಲಿ ಮಹಿಳೆಯ ಕಿವಿಯೋಲೆ, ಕೂದಲು ಮತ್ತು ಬಟ್ಟೆ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2 ದಿನದ ಹಿಂದೆ ಕಾಫಿ ಬೀಜ ಸಂಗ್ರಹಿಸಲು ಕಾಫಿ ಎಸ್ಟೇಟ್‌ಗೆ ತೆರಳಿದ್ದ ಮಹಿಳೆ ರಾಧಾ ಮೇಲೆ ಹುಲಿ ದಾಳಿ ನಡೆಸಿ, ಕೊಂದು ದೇಹವನ್ನು ಎಳೆದೊಯ್ದಿತ್ತು. ಮಹಿಳೆಯ ದೇಹವನ್ನು ತಿಂದ ಹುಲಿ ಬಳಿಕ ಸಾವಿಗೀಡಾಗಿದೆ. ಹುಲಿಯ ಮರಣೋತ್ತರ ಪರೀಕ್ಷೆ ನಡೆಸಿದಾಗ ಅದರ ಹೊಟ್ಟೆಯಲ್ಲಿ ಮಹಿಳೆ ದೇಹದ ಭಾಗಗಳು ಪತ್ತೆಯಾಗಿವೆ. ಹುಲಿಯ ಕುತ್ತಿಗೆಯಲ್ಲಿ ಆಳವಾದ ಗಾಯವಾಗಿದೆ. ಅದರಿಂದಲೇ ಸಾವಾಗಿದೆ. ಮತ್ತೊಂದು ಹುಲಿ ಜತೆ ಕಾಳಗ ನಡೆಸಿದಾಗ ಗಾಯಗೊಂಡಿರಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ನಟಿಗೆ ಕಿರುಕುಳ: ಮಲಯಾಳಂ ನಿರ್ದೇಶಕನ ವಿರುದ್ಧ ಪ್ರಕರಣ

ಕೊಚ್ಚಿ: ಕೇರಳ ಮೂಲದ ಖ್ಯಾತ ಬಹುಭಾಷಾ ನಟಿ ಮಂಜು ವಾರಿಯರ್ ಮತ್ತು ಪುತ್ರಿಗೆ ಜಾಲತಾಣದಲ್ಲಿ ಕಿರುಕುಳ, ಜೀವ ಬೆದರಿಕೆ ಒಡ್ಡಿದ ಆರೋಪದಡಿ ಮಲಯಾಳಂನ ಖ್ಯಾತ ನಿರ್ದೇಶಕ-ನಿರ್ಮಾಪಕ ಸನಲ್ ಕುಮಾರ್ ಶಶಿಧರನ್ ವಿರುದ್ಧ ಎಳಮಕ್ಕರ ಪೊಲೀಸ್ ಠಾಣೆಯಲ್ಲಿ ಅಪರಾಧ ಪ್ರಕರಣ ದಾಖಲಾಗಿದೆ.

'ಕಾಯಂ' ಸಿನಿಮಾ ನಿರ್ದೇಶಕ ಸನಲ್ ಕುಮಾರ್ ವಿರುದ್ಧ ನಟಿ ಮಂಜು ವಾರಿಯರ್ ಸೋಮವಾರ ದೂರು ನೀಡಿದ್ದಾರೆ. ಭಾರತೀಯ ನ್ಯಾಯ ಸಂಹಿತೆಯ(ಬಿಎನ್‌ಎಸ್) ವಿವಿಧ ಸೆಕ್ಷನ್‌ಗಳಡಿ ನಟಿಯನ್ನು ಹಿಂಬಾಲಿಸಿ ಕಿರುಕುಳ ನೀಡಿರುವುದು, ಜೀವ ಬೆದರಿಕೆ ಮತ್ತು ಮಾನಹಾನಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಇದೇ ವಿಚಾರವಾಗಿ ನಿರ್ದೇಶಕ ಸನಲ್ ಕುಮಾರ್ ತಮ್ಮ ಫೇಸ್‌ಬುಕ್ ಪುಟದಲ್ಲಿ 'ಎಫ್‌ಐಆರ್' ಪ್ರತಿ ಹಂಚಿಕೊಂಡಿದ್ದು, ನಟಿಯ ಹೆಸರಲ್ಲಿ ಬೇರೊಬ್ಬರು ದೂರು ನೀಡಿದ್ದಾರೆಂದು ಬರೆದುಕೊಂಡಿದ್ದಾರೆ.

ಬ್ಲ್ಯಾಕ್‌ಮೇಲ್ ಮತ್ತು ಸಾಮಾಜಿಕ ವೇದಿಕೆಗಳಲ್ಲಿ ತಮ್ಮ ಪ್ರತಿಷ್ಠೆ, ಮಾನಕ್ಕೆ ಧಕ್ಕೆ ತಂದ ಆರೋಪದಡಿ ನಟಿ ಮಂಜು ವಾರಿಯರ್ ಈ ಹಿಂದೆಯೂ ಸನಲ್ ವಿರುದ್ಧ ದೂರು ನೀಡಿದ್ದರು. ಬಳಿಕ ಸನಲ್‌ರನ್ನು 2022ರ ಮೇನಲ್ಲಿ ಬಂಧಿಸಲಾಗಿತ್ತು. ಜಾಮೀನಿನ ಮೇಲೆ ಅವರು ಬಿಡುಗಡೆಗೊಂಡಿದ್ದರು.

ವಿಶ್ವ ಮಹಾಯುದ್ಧ-2: ನಾಜಿ ಶಿಬಿರ ಬಂಧಮುಕ್ತಿಗೆ 80 ವರ್ಷ

2ನೇ ವಿಶ್ವ ಮಹಾಯುದ್ಧದಲ್ಲಿ ಜರ್ಮನಿಯ ನಾಜಿ ಚಿತ್ರಹಿಂಸಾ ಶಿಬಿರಗಳಿಂದ ಬಂಧಮುಕ್ತಿಯಾದ 80 ವರ್ಷಗಳ ನೆನಪಿನಲ್ಲಿ ಜರ್ಮನಿಯ ಅಂದಿನ ನಾಯಕ ಅಡಾಲ್ಫ್ ಹಿಟ್ಲರ್ ಮತ್ತವನ ಸೇನೆಯಿಂದ ಬಂಧನಕ್ಕೊಳಗಾಗಿ ನರಕಯಾತನೆ ಅನುಭವಿಸಿ ಪ್ರಾಣ ಕಳೆದುಕೊಂಡ ಲಕ್ಷಾಂತರ ಜನರ ಕುಟುಂಬದವರು, ವಂಶಸ್ಥರು, ಹೋಲೋಕಾಸ್ಟ್‌ನಿಂದ ಪಾರಾದವರ ಕುಟುಂಬದವರು ಸೋಮವಾರ ಜರ್ಮನಿಯ ಆಸ್ಟ್‌ವಿಟ್ಜ್ ಪ್ರದೇಶಕ್ಕೆ ಭೇಟಿ ನೀಡಿ ನಾಜಿ ಶಿಬಿರದಲ್ಲಿ ಮಡಿದವರನ್ನು ಸ್ಮರಿಸಿ ಪ್ರಾರ್ಥನೆ ಸಲ್ಲಿಸಿದರು. ಜೀವಕಳೆದುಕೊಂಡವರ ಸದ್ಗತಿಗೆ ಪ್ರಾರ್ಥಿಸಿದರು. ಅಪರೂಪದ ಈ ಸಂದರ್ಭಕ್ಕೆ ಗ್ರೇಟ್ ಬ್ರಿಟನ್‌ನ ಕಿಂಗ್ ಚಾರ್ಲ್ಸ್, ಫ್ರಾನ್ಸ್ ಅಧ್ಯಕ್ಷ ಎಮ್ಯಾನ್ಯುವಲ್ ಮ್ಯಾಕ್ರೋನ್ ಕೂಡಾ ಸಾಕ್ಷಿಯಾದರು. ಉಕ್ರೇನ್ ಅಧ್ಯಕ್ಷ-ಯಹೂದಿ ಧಾರ್ಮಿಕ ವೊಲೊದಿಮಿರ್ ಝೆಲೆನ್ಸ್ಕಿ ಮೇಣದಬತ್ತಿ ಬೆಳಗಿ ಪ್ರಾರ್ಥನೆ ಸಲ್ಲಿಸಿದರು.

ಸಮಾಚಾರ ಸಣ್ಣದಲ್ಲ

ಸಮೀರ್ ರಿಜ್ವಿ ಮೂರನೇ ದ್ವಿಶತಕ

ಅಹಮ್ಮದಾಬಾದ್: ಕರ್ನಲ್ ಸಿ.ಕೆ ನಾಯುಡು ಟ್ರೋಫಿ ಟೂರ್ನಿಯಲ್ಲಿ ಉತ್ತರ ಪ್ರದೇಶ ಪರ ಆಡುತ್ತಿರುವ ಸಮೀರ್ ರಿಜ್ವಿ ಗುಜರಾತ್ ವಿರುದ್ಧದ ಪಂದ್ಯದಲ್ಲಿ ದಾಖಲೆಯ ದ್ವಿಶತಕ ಸಿಡಿಸಿದ್ದಾರೆ. ತಮ್ಮ ಇನ್ನಿಂಗ್ಸ್‌ನಲ್ಲಿ 159 ಎಸೆತಗಳನ್ನು ಎದುರಿಸಿದ ಸಮೀರ್ ರಿಜ್ವಿ 20 ಸಿಕ್ಸರ್‌ಗಳೊಂದಿಗೆ 262 ರನ್ ಕಲೆಹಾಕಿದರು. ಇದು ಕಳೆದ 37 ದಿನಗಳಲ್ಲಿ ಸಮೀರ್ ರಿಜ್ವಿ ಸಿಡಿಸಿದ ಮೂರನೇ ದ್ವಿಶತಕವಾಗಿದೆ. ಇದಕ್ಕೂ ಮುನ್ನ 23 ವರ್ಷದೊಳಗಿನವರ ರಾಜ್ಯ ಎ-ಟ್ರೋಫಿ ಪಂದ್ಯದಲ್ಲಿ ಸಮೀರ್ 97 ಎಸೆತಗಳಲ್ಲಿ ವೇಗದ ದ್ವಿಶತಕ ಬಾರಿಸಿ ಇತಿಹಾಸ ನಿರ್ಮಿಸಿದ್ದರು. ಕೇವಲ 4 ದಿನಗಳ ನಂತರ ಡಿಸೆಂಬರ್ 25ರಂದು ನಡೆದಿದ್ದ ವಿದರ್ಭ ವಿರುದ್ಧದ ಪಂದ್ಯದಲ್ಲಿ ಸಮೀರ್ ರಿಜ್ವಿ ಕೇವಲ 105 ಎಸೆತಗಳಲ್ಲಿ 202 ರನ್ ಸಿಡಿಸಿದ್ದರು.

ಎಟಿಪಿ ಪಟ್ಟಿಯಿಂದ ಹೊರಬಿದ್ದ ನಗಾಲ್



ದೆಹಲಿ: ಎಟಿಪಿ ಚಾಲೆಂಜರ್ ಟೂರ್ನಿಗಳಲ್ಲಿ ಸತತವಾಗಿ ಹಿನ್ನಡೆ ಕಂಡ ಪರಿಣಾಮವಾಗಿ ಭಾರತದ ಅಗ್ರ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಹತ್ತು ತಿಂಗಳ ನಂತರ ಅಗ್ರ 100 ಸಿಂಗಲ್ಸ್ ಆಟಗಾರರ ಪಟ್ಟಿಯಿಂದ ಹೊರಬಿದ್ದಿದ್ದಾರೆ. ರೋಹನ್ ಬೋಪಣ್ಣ ಅವರು ಕೂಡಾ ವಿಶ್ವದ ಅಗ್ರ 20 ಡಬಲ್ಸ್ ಆಟಗಾರರ ಪಟ್ಟಿಯಿಂದ ಸ್ಥಾನ ಕಳೆದುಕೊಂಡಿದ್ದಾರೆ.

ಮಿಲ್ಲರ್ ಗಾಯಾಳು

ಜೋಹಾನ್ಸ್‌ಬರ್ಗ್: ಚಾಂಪಿಯನ್ಸ್ ಟ್ರೋಫಿಗೂ ಮೊದಲೆ ದಕ್ಷಿಣ ಆಫ್ರಿಕಾ ತಂಡಕ್ಕೆ ದೊಡ್ಡ ಆಘಾತಕ್ಕೊಳಗಾಗಿದೆ. ತಂಡದ ಸ್ಟಾರ್ ಬ್ಯಾಟ್ಸ್‌ಮನ್ ಡೇವಿಡ್ ಮಿಲ್ಲರ್ ಗಾಯಕ್ಕೆ ತುತ್ತಾಗಿದ್ದಾರೆ. ದಕ್ಷಿಣ ಆಫ್ರಿಕಾ ಟಿ20 ಲೀಗ್‌ನಲ್ಲಿ ಡರ್ಬನ್ ಸೂಪರ್‌ಜೈಂಟ್ಸ್ ವಿರುದ್ಧದ ಪಂದ್ಯದ ವೇಳೆ ಮಿಲ್ಲರ್ ಮೊಣಕಾಲಿಗೆ ಗಾಯವಾಗಿದೆ. ಪಾರ್ಲ್ ರಾಯಲ್ಸ್ ತಂಡದ ನಾಯಕನಾಗಿರುವ ಮಿಲ್ಲರ್, ಡರ್ಬನ್ ಬ್ಯಾಟ್ಸ್‌ಮನ್ ಮಾರ್ಕಸ್ ಸ್ಟೊಯಿನಿಸ್ ಹೊಡೆದ ಚೆಂಡನ್ನು ಬೌಂಡರಿಗೆ ಹೋಗದಂತೆ ತಡೆಯುವಾಗ ಗಾಯಗೊಂಡಿದ್ದಾರೆ. ಕೂಡಲೇ ಸ್ಥಳಕ್ಕಾಗಮಿಸಿದ ವೈದ್ಯಕೀಯ ತಂಡ ಮಿಲ್ಲರ್‌ಗೆ ಪ್ರಥಮ ಚಿಕಿತ್ಸೆ ನೀಡಿತಾದರೂ ಕೆಲ ಸಮಯದ ಬಳಿಕ ಪಂದ್ಯದ ಅರ್ಧದಲ್ಲೇ ಮಿಲ್ಲರ್ ಮೈದಾನ ತೊರೆದರು.

ಟೀಂ ಇಂಡಿಯಾ-ಇಂಗ್ಲೆಂಡ್ 3ನೇ ಟಿ 20 | ಭಾರತೀಯ ಬ್ಯಾಟರ್‌ಗಳ ವೈಫಲ್ಯ

ಆಂಗ್ಲರಿಗೆ ಮಣಿದ ಭಾರತ

ರಾಜ್‌ಕೋಟ್: 172 ರನ್‌ಗಳ ಸಾಧಾರಣ ಗುರಿ ಹೊಂದಿದ್ದರೂ, ಬಹುತೇಕ ಬ್ಯಾಟರ್‌ಗಳ ಬೇಜವಾಬ್ದಾರಿತನದ ಆಟದ ಕಾರಣದಿಂದಾಗಿ ಇಂಗ್ಲೆಂಡ್ ವಿರುದ್ಧ ಇಲ್ಲಿ ನಡೆದ ಟಿ-20 ಕ್ರಿಕೆಟ್‌ನ ಐದು ಪಂದ್ಯಗಳ ಸರಣಿಯ ಮೂರನೇ ಪಂದ್ಯದಲ್ಲಿ ಭಾರತ ತಂಡವು 26 ರನ್‌ಗಳ ಸೋಲನ್ನೊಪ್ಪಿಕೊಂಡಿತು.

ಟಾಸ್ ಗೆದ್ದ ಟೀಂ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿದರು. ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ಪರ ನಾಯಕ ಜೋಸ್ ಬಟ್ಲರ್ ಅವರ ಅಮೋಘ 76, ಓಪನರ್ ಬೆನ್ ಡುಕೆಟ್ ಅವರ 28 ಎಸೆತ ಎದುರಿಸಿ 51 ಹಾಗೂ ಲಿವಿಂಗ್ ಸ್ಟೋನ್ ಅವರ (24 ಎಸೆತಗಳಲ್ಲಿ 43 ರನ್) ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಉತ್ತಮ ಮೊತ್ತವನ್ನು ತಂಡ ಪೇರಿಸಿತು.

16ನೇ ಓವರ್ ವರೆಗೂ ಇಂಗ್ಲೆಂಡ್ ತಂಡವು 8 ವಿಕೆಟ್‌ಗಳನ್ನು ಕಳೆದುಕೊಂಡು 127 ರನ್‌ಗಳನ್ನಷ್ಟೇ ಗಳಿಸಿತ್ತು. ಈ ಸಂದರ್ಭದಲ್ಲಿ ಕ್ರೀಸ್‌ಗೆ ಬಂದ ಲಿವಿಂಗ್ ಸ್ಟೋನ್ ಅಬ್ಬರಿಸಿದರು. ಕೊನೆಯ ನಾಲ್ಕು ಓವರ್‌ಗಳಲ್ಲಿ 44 ರನ್ ಕಲೆ ಹಾಕುವ ಮೂಲಕ ತಂಡಕ್ಕೆ 171 ರನ್ ತಲುಪುವಲ್ಲಿ ತಮ್ಮ ಅಮೂಲ್ಯ ಕಾಣಿಕೆ ನೀಡಿದರು.

ವರುಣ್ ಚಕ್ರವರ್ತಿ ಒಂದೇ ಓವರ್‌ನಲ್ಲಿ ಎರಡು ಪ್ರಮುಖ ವಿಕೆಟ್‌ಗಳನ್ನು ಕಬಳಿಸಿದರು. ಡುಕೆಟ್ ಅವರ ವಿಕೆಟ್ ಅಕ್ಷರ್ ಪಟೇಲ್ ಪಾಲಾಯಿತು.

172 ರನ್‌ಗಳ ಗುರಿಯನ್ನು ಬೆಂಬೆತ್ತಿದ ಭಾರತದ ಮೊದಲ ವಿಕೆಟ್ ಕೇವಲ 16 ರನ್ ಆಗುವಷ್ಟರಲ್ಲಿ ಪತನವಾಯಿತು. ಆರಂಭಿಕ ಬ್ಯಾಟ್ಸ್‌ಮನ್ ಸಂಜು ಸಾಮ್ಸನ್ ಕೇವಲ 3 ರನ್ ಗಳಿಸಿ ಆರ್ಚರ್ ಬೌಲಿಂಗ್‌ನಲ್ಲಿ ರಶೀದ್ ಕೈಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದರು. ಆ ಬಳಿಕ 24 ರನ್ ಗಳಿಸಿದ ಅಭಿಷೇಕ್ ಶರ್ಮಾ ತಂಡದ ಮೊತ್ತ 31 ಆಗುವಷ್ಟರಲ್ಲಿ ಔಟ್ ಆದರು. ಬಳಿಕ ನಾಯಕ ಸೂರ್ಯಕುಮಾರ್ ಯಾದವ್ ಕೂಡಾ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. 14 ರನ್ ಗಳಿಸಿದ್ದಾಗ ಸೂರ್ಯಕುಮಾರ್ ತನ್ನ ವಿಕೆಟ್ ಒಪ್ಪಿಸಿದರು. ಆ ನಂತರ ಸೂರ್ಯಕುಮಾರ್ ಸ್ವಲ್ಪ ಹೊತ್ತು ಇಂಗ್ಲೆಂಡ್ ಬೌಲರ್‌ಗಳಿಗೆ ಪ್ರತಿರೋಧ ಒಡ್ಡಿದರು. 18 ರನ್ ಗಳಿಸಿದ ತಿಲಕ್ ವರ್ಮಾ ರಶೀದ್‌ಗೆ ವಿಕೆಟ್ ಒಪ್ಪಿಸಿದರು. ಆ ಬಳಿಕ ಕ್ರೀಸ್‌ಗೆ ಬಂದ ಹಾರ್ದಿಕ್ ಪಾಂಡ್ಯ-ವಾಷಿಂಗ್‌ಟನ್ ಜೋಡಿ ಇಂಗ್ಲೆಂಡ್ ಬೌಲರ್‌ಗಳನ್ನು ಅಲ್ಪಮಟ್ಟಿಗೆ ದಂಡಿಸಿದರು. ಆದರೆ ಅವರಿಬ್ಬರೂ ಬೆನ್ನು ಬೆನ್ನಿಗೆ ವಿಕೆಟ್ ಕಳೆದುಕೊಂಡಾಗ ಭಾರತ ತಂಡದ ಗೆಲುವಿನ ಆಸೆ ಸಂಪೂರ್ಣವಾಗಿ ಕಮರಿತು.

ಕೊನೆಯಲ್ಲಿ ಭಾರತವು 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 145 ರನ್‌ಗಳನ್ನಷ್ಟೇ ಗಳಿಸಿಕೊಂಡಿತು. ಇಂಗ್ಲೆಂಡ್ ಪರ ಓವರ್ ಟನ್ 3 ವಿಕೆಟ್, ಆರ್ಚರ್ ಹಾಗೂ ಕಾರ್ಸ್ ತಲಾ 2 ವಿಕೆಟ್ ಹಾಗೂ ಮಾರ್ಕ್‌ವುಡ್ ಮತ್ತು ರಶೀದ್ ತಲಾ ಒಂದೊಂದು ವಿಕೆಟ್ ಗಳಿಸಿ ಇಂಗ್ಲೆಂಡ್ ತಂಡವನ್ನು ಗೆಲುವಿನಂಚಿಗೆ ಕೊಂಡೊಯ್ದರು.

ಐಸಿಸಿ ಅಂಡರ್-19 ಮಹಿಳಾ ಟಿ-20 ವಿಶ್ವಕಪ್ ಕ್ರಿಕೆಟ್ | ತ್ರಿಷಾ ದಾಖಲೆಯ ಶತಕ

ಮಹಿಳಾ ಕ್ರಿಕೆಟ್: ಭರ್ಜರಿ ಜಯ

ಕೌಲಾಲಂಪುರ: ಐಸಿಸಿ ಅಂಡರ್-19 ಮಹಿಳಾ ಟಿ-20 ವಿಶ್ವಕಪ್ ಟೂರ್ನಿಯಲ್ಲಿ ಭಾರತದ ಆರಂಭಿಕ ಆಟಗಾರ್ತಿ ತ್ರಿಷಾ ಗೊಂಗಡಿ ಐತಿಹಾಸಿಕ ಶತಕದ ಸಾಧನೆ ಮಾಡಿದ್ದಾರೆ. ಅವರ ಆ ಸಾಧನೆಯಿಂದ ಭಾರತ ತಂಡವು ಸ್ಕಾಟ್ಲೆಂಡ್ ವಿರುದ್ಧ ಸೂಪರ್ ಸಿಕ್ಸ್ ಪಂದ್ಯದಲ್ಲಿ ಭರ್ಜರಿ 150 ರನ್ ಅಂತರದ ಗೆಲುವು ಸಾಧಿಸಿದೆ.

ಮಂಗಳವಾರ ನಡೆದ ಒಂದನೇ ಗುಂಪಿನ ಸೂಪರ್ ಸಿಕ್ಸ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ನಡೆಸಿದ ಭಾರತವು ತನ್ನ ಆರಂಭಿಕ ಆಟಗಾರ್ತಿಯರಾದ ತ್ರಿಷಾ ಗೊಂಗಡಿ ಮತ್ತು ಜಿ. ಕಮಲಿನಿ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಕೇವಲ ಒಂದು ವಿಕೆಟ್‌ಗೆ 208 ರನ್ ಬಾರಿಸಿತು. ಆದರೆ ಆ ಗುರಿಯನ್ನು ಬೆನ್ನಟ್ಟಿದ ಸ್ಕಾಟ್ಲೆಂಡ್ ತಂಡವು 58ರನ್‌ಗೆ ಸರ್ವಪತನ ಕಂಡಿತು. ಭಾರತ ತಂಡವು ಲೀಗ್ ಸೇರಿ ಸೂಪರ್ ಸಿಕ್ಸ್‌ನಲ್ಲಿ ಆಡಿದ ಎರಡು ಪಂದ್ಯಗಳನ್ನು ಗೆಲ್ಲುವ ಮೂಲಕ ಟೂರ್ನಿಯಲ್ಲಿ ಅಜೇಯವಾಗಿ ಉಳಿದಿದೆ.

ಜಿದ್ದಿಗೆ ಬಿದ್ದವರಂತೆ ಬ್ಯಾಟ್ ಬೀಸಿದ ತ್ರಿಷಾ ಹಾಗೂ ಕಮಲಿನಿ ಎದುರಾಳಿ ಸ್ಕಾಟ್ಲೆಂಡ್ ತಂಡದ ಬೌಲರ್‌ಗಳನ್ನು ಇನ್ನಿಲ್ಲದಂತೆ ಕಾಡಿದರು. ಉಭಯ ಆಟಗಾರ್ತಿಯರು 13.3 ಓವರ್ ತನಕ ಬ್ಯಾಟಿಂಗ್ ನಡೆಸಿ ಮೊದಲ ವಿಕೆಟ್‌ಗೆ 147 ರನ್ ಚಚ್ಚಿದರು. ತ್ರಿಷಾ 59 ಎಸೆತಗಳಲ್ಲಿ 13 ಬೌಂಡರಿ ಹಾಗೂ ನಾಲ್ಕು ಸಿಕ್ಸರ್ ನೆರವಿನಿಂದ ಅಜೇಯ 110 ರನ್ ಗಳಿಸಿದರೆ, ಅವರ ಜತೆಗಾರ್ತಿ ಕಮಲಿನಿ 42 ಎಸೆತಗಳಲ್ಲಿ ಒಂಬತ್ತು ಬೌಂಡರಿಗಳ ನೆರವಿನಿಂದ 51 ರನ್ ಬಾರಿಸಿದರು. ಸಾನಿಕಾ ಚಲ್ಕೆ 29 ರನ್ ಬಾರಿಸಿ ಅಜೇಯರಾಗಿ ಉಳಿದರು.

ಭಾರತದ ಪರ ಆಯುಷಿ ಶುಕ್ಲಾ 3 ಓವರ್ ಬೌಲಿಂಗ್ ನಡೆಸಿ ಕೇವಲ 8 ರನ್ ನೀಡಿ ಸ್ಕಾಟ್ಲೆಂಡ್‌ನ 4 ವಿಕೆಟ್ ಪಡೆದರೆ, ವೈಷ್ಣವಿ ಶರ್ಮಾ 5 ರನ್ ನೀಡಿ 3 ವಿಕೆಟ್ ಪಡೆದರು. ಬೌಲಿಂಗ್ ಮತ್ತು ಬ್ಯಾಟಿಂಗ್‌ನಲ್ಲಿ ಸಂಪೂರ್ಣವಾಗಿ ವಿಫಲವಾದ ಸ್ಕಾಟ್ಲೆಂಡ್‌ನ ಆರಂಭಿಕರಿಬ್ಬರು ಗಳಿಸಿದ ತಲಾ 12 ರನ್ ತಂಡದ ಪರ ದಾಖಲಾದ ಗರಿಷ್ಠ ವೈಯಕ್ತಿಕ ಮೊತ್ತವಾಯಿತು. ಭಾರತದ ಮಹಿಳೆಯರ ಮೊನಚಿನ ದಾಳಿಯ ಎದುರು ಸ್ಕಾಟ್ಲೆಂಡ್‌ನ ಮೂವರು ಆಟಗಾರರು ಯಾವುದೇ ಸ್ಕೋರ್ ಗಳಿಸುವಲ್ಲಿ ವಿಫಲರಾದರು.

ತ್ರಿಷಾ ದಾಖಲೆಯ ಆಟ

ತ್ರಿಷಾ ಗೊಂಗಡಿ ಚೊಚ್ಚಲ ಶತಕ ಬಾರಿಸುವ ಮೂಲಕ ಮಹಿಳಾ ಅಂಡರ್-19 ವಿಶ್ವಕಪ್ ಇತಿಹಾಸದಲ್ಲೇ ಶತಕ ಗಳಿಸಿದ ವಿಶ್ವದ ಮೊದಲ ಬ್ಯಾಟರ್ ಎಂಬ ದಾಖಲೆ ಬರೆದರು. ಬ್ಯಾಟಿಂಗ್ ಮಾತ್ರವಲ್ಲದೆ ಬೌಲಿಂಗ್‌ನಲ್ಲಿಯೂ ಮಿಂಚಿದ ತ್ರಿಷಾ, 2 ಓವರ್ ಬೌಲಿಂಗ್ ಮಾಡಿ ಕೇವಲ 6 ರನ್ ನೀಡಿ ಸ್ಕಾಟ್ಲೆಂಡ್ ತಂಡದ ಪ್ರಮುಖ ಮೂರು ವಿಕೆಟ್ ಕಿತ್ತರು. ಅವರ ಆಲ್‌ರೌಂಡರ್ ಪ್ರದರ್ಶನಕ್ಕೆ ಪಂದ್ಯಶ್ರೇಷ್ಠ ಪ್ರಶಸ್ತಿಯೂ ಲಭಿಸಿತು.

ರೋಹಿತ್, ಜೈಸ್ವಾಲ್, ಶ್ರೇಯಸ್ ಅಲಭ್ಯ

ಮುಂಬೈ: ಇಂದಿನಿಂದ ಆರಂಭವಾಗಲಿರುವ ಮೇಘಾಲಯ ವಿರುದ್ಧದ ರಣಜಿ ಟ್ರೋಫಿಯ ಪಂದ್ಯದಿಂದ ಮುಂಬೈ ತಂಡದ ಆಟಗಾರರಾದ ರೋಹಿತ್ ಶರ್ಮಾ, ಸಹ ಆಟಗಾರರಾದ ಯಶಸ್ವಿ ಜೈಸ್ವಾಲ್ ಮತ್ತು ಶ್ರೇಯಸ್ ಅಯ್ಯರ್ ಅಲಭ್ಯರಾಗಿದ್ದಾರೆ.

ಕಳೆದ ವಾರ ನಡೆದಿದ್ದ ಜಮ್ಮು ಮತ್ತು ಕಾಶ್ಮೀರ ವಿರುದ್ಧದ ಪಂದ್ಯದಲ್ಲಿ ಈ ಮೂರು ಆಟಗಾರರು ಮುಂಬೈ ತಂಡವನ್ನು ಪ್ರತಿನಿಧಿಸಿದ್ದರೂ ನಿರೀಕ್ಷಿತ ಆಟ ಪ್ರದರ್ಶಿಸಲಿಲ್ಲ. ಹೀಗಾಗಿ ಮುಂಬೈ ತಂಡ ಸೋಲು ಕಂಡಿತ್ತು. ಇದೀಗ ರೋಹಿತ್ ಸೇರಿ ಅಯ್ಯರ್ ಮತ್ತು ಜೈಸ್ವಾಲ್ ಇಂಗ್ಲೆಂಡ್ ವಿರುದ್ಧದ ಏಕದಿನ ಮತ್ತು ಚಾಂಪಿಯನ್ಸ್ ಟ್ರೋಫಿಗೆ ಹೆಚ್ಚಿನ ಅಭ್ಯಾಸ ನಡೆಸುವ ಸಲುವಾಗಿ ರಣಜಿ ಪಂದ್ಯದಿಂದ ಹೊರಗುಳಿಯಲು ನಿರ್ಧರಿಸಿದ್ದಾರೆ ಎಂದು ತಿಳಿದುಬಂದಿದೆ. ಜಮ್ಮು ಮತ್ತು ಕಾಶ್ಮೀರ ಎದುರು ಸೋಲು ಕಂಡ ಕಾರಣದಿಂದ ಅಜಿಂಕ್ಯ ರಹಾನೆ ನೇತೃತ್ವದ ಮುಂಬೈ ತಂಡದ ಕ್ವಾರ್ಟರ್ ಫೈನಲ್ ಪ್ರವೇಶ ಕಠಿಣವಾಗಿಸಿದೆ. ಮೇಘಾಲಯ ವಿರುದ್ಧ ದೊಡ್ಡ ಅಂತರದಿಂದ ಗೆದ್ದರಷ್ಟೇ ನಾಕೌಟ್ ಕನಸು ಜೀವಂತವಾಗಿ ಉಳಿಯಲಿದೆ.

ಕೊಹ್ಲಿ ಕಣಕ್ಕೆ: 2012ರ ಬಳಿಕ ಮೊದಲ ಬಾರಿ ರಣಜಿ ಟ್ರೋಫಿ ಕ್ರಿಕೆಟ್ ಆಡಲಿರುವ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ದೆಹಲಿ ತಂಡದೊಂದಿಗೆ ಅಭ್ಯಾಸ ನಡೆಸಿದ್ದಾರೆ. ಕೆ.ಎಲ್.ರಾಹುಲ್ ಕೂಡ 5 ವರ್ಷಗಳ ಬಳಿಕ ರಣಜಿ ಕ್ರಿಕೆಟ್‌ಗೆ ಮರಳಿದ್ದಾರೆ. ಹರಿಯಾಣ ವಿರುದ್ಧದ ರಣಜಿ ಪಂದ್ಯದಲ್ಲಿ ಕರ್ನಾಟಕ ತಂಡವನ್ನು ಅವರು ಪ್ರತಿನಿಧಿಸಲಿದ್ದಾರೆ.

ಅಮರಾವತಿಯಲ್ಲಿ ವಿಶ್ವದ ಅತಿ ದೊಡ್ಡ ಕ್ರಿಕೆಟ್ ಸ್ಟೇಡಿಯಂ ನಿರ್ಮಿಸಲು ಸಜ್ಜು

ಅಮರಾವತಿ: ಭಾರತದಲ್ಲಿ ಮತ್ತೊಂದು ವಿಶ್ವದ ಅತೀ ದೊಡ್ಡ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಆಂಧ್ರ ಪ್ರದೇಶ ಕ್ರಿಕೆಟ್ ಮಂಡಳಿ ಮುಂದಡಿ ಇಟ್ಟಿದೆ. ಪ್ರಸ್ತುತ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣವು ವಿಶ್ವದ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣ ಎನಿಸಿದೆ. ಇದನ್ನೂ ಮೀರಿಸುವಂತಹ ಸ್ಟೇಡಿಯಂ ನಿರ್ಮಾಣ ಮಾಡಲು ಆಂಧ್ರ ಕ್ರಿಕೆಟ್ ಮಂಡಳಿ ಎಲ್ಲ ಸಿದ್ಧತೆಗಳನ್ನು ನಡೆಸಿದೆ ಎಂದು ತಿಳಿದುಬಂದಿದೆ. ಅಮರಾವತಿಯಲ್ಲಿ ಈ ಮೈದಾನ ತಲೆ ಎತ್ತಲಿದೆ.

ಅಹಮದಾಬಾದ್‌ನ ಮೋದಿ ಸ್ಟೇಡಿಯಂ 1.32 ಲಕ್ಷ ಆಸನಗಳ ವ್ಯವಸ್ಥೆ ಕಲ್ಪಿಸುವ ಮೂಲಕ ವಿಶ್ವದ ಅತೀ ದೊಡ್ಡ ಕ್ರಿಕೆಟ್ ಸ್ಟೇಡಿಯಂ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದೀಗ ಆಂಧ್ರ ಕ್ರಿಕೆಟ್ ಮಂಡಳಿ ಅಮರಾವತಿಯಲ್ಲಿ ನಿರ್ಮಿಸಲು ಮುಂದಾದ ಸ್ಟೇಡಿಯಂ ಸುಮಾರು 200 ಎಕರೆ ಪ್ರದೇಶದಲ್ಲಿ ವ್ಯಾಪಿಸಿರುವಂತೆ, 1.50 ಲಕ್ಷ ಪ್ರೇಕ್ಷಕರಿಗೆ ಆಸನ ವ್ಯವಸ್ಥೆ ಇರಲಿದೆ ಎಂದು ಹೇಳಲಾಗುತ್ತಿದೆ.

1.50 ಲಕ್ಷ ಆಸನಗಳಿರುವ ಉತ್ತರ ಕೊರಿಯಾದ ರುಂಗ್ರಾಡೊ ಮೆ ಡೆ ಸ್ಟೇಡಿಯಂ ಜಗತ್ತಿನ ಅತಿ ದೊಡ್ಡ ಮೈದಾನ ಎಂಬ ಖ್ಯಾತಿ ಹೊಂದಿದೆ.

ಈ ಬಗ್ಗೆ ಮಾತನಾಡಿದ ಎಸಿಎ ಅಧ್ಯಕ್ಷ ಕೇಶಿನೇನಿ ಶಿವನಾಥ್, ಆಂಧ್ರ ಪ್ರದೇಶದಲ್ಲಿ ಕ್ರಿಕೆಟ್ ಅಭಿವೃದ್ಧಿಗೆ ಈ ಯೋಜನೆ ಮೈಲಿಗಲ್ಲು ಆಗಲಿದೆ. ಈ ಕ್ರೀಡಾಂಗಣದ ಜತೆಗೆ ಆಂಧ್ರದ ಉತ್ತರ ಕರಾವಳಿ, ವಿಜಯವಾಡ ಮತ್ತು ರಾಯಲಸೀಮಾದಲ್ಲಿ ಅತ್ಯಾಧುನಿಕ ಕ್ರಿಕೆಟ್ ಅಕಾಡೆಮಿಗಳನ್ನು ಸ್ಥಾಪಿಸಲು ಎಸಿಎ ಯೋಜಿಸಿದೆ ಎಂದು ತಿಳಿಸಿದರು.

ಯೋಜನೆಯ ಅನುಷ್ಠಾನಕ್ಕಾಗಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯಿಂದ (ಬಿಸಿಸಿಐ) ಈಗಾಗಲೇ ಹಣಕಾಸಿನ ನೆರವು ಪಡೆಯಲು ಎಸಿಎ ಯೋಜಿಸಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ 2029ರ ವೇಳೆಗೆ ಈ ಮೈದಾನದಲ್ಲಿ ರಾಷ್ಟ್ರೀಯ ಕ್ರೀಡಾಕೂಟವನ್ನು ಆಯೋಜಿಸುವ ಗುರಿಯನ್ನು ಹೊಂದಿದ್ದೇವೆ ಎಂದು ಶಿವನಾಥ್ ಹೇಳಿದರು.

ಗುಜರಾತ್‌ನ ಮೋದಿ ಸ್ಟೇಡಿಯಂ 64 ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆ. 76 ಕಾರ್ಪೊರೇಟ್ ಬಾಕ್ಸ್ ಗಳು, ನಾಲ್ಕು ಡ್ರೆಸ್ಸಿಂಗ್ ರೂಮ್‌ಗಳು ಮತ್ತು ಮೂರು ಅಭ್ಯಾಸ ಮೈದಾನಗಳಿವೆ. ಕೆಂಪು ಮತ್ತು ಕಪ್ಪು ಮಣ್ಣು ಬಳಸಿ ಮೂರು ಮಾದರಿಯ ಪಿಚ್‌ಗಳನ್ನು ನಿರ್ಮಿಸಲಾಗಿದೆ. ಅವುಗಳ ಪೈಕಿ ಒಂದನ್ನು ಕಪ್ಪು ಮಣ್ಣಿನಿಂದ, ಒಂದು ಕೆಂಪು ಮಣ್ಣಿನಿಂದ ನಿರ್ಮಿಸಲಾಗಿದೆ. ಎರಡೂ ಮಣ್ಣುಗಳ ಮಿಶ್ರಣದಿಂದ ಮತ್ತೊಂದು ಪಿಚ್ ಒಳಗೊಂಡಿದೆ.

ಪ್ರೊ ಕಬಡ್ಡಿ: ಬುಲ್ಸ್‌ಗೆ ಬಿ.ಸಿ.ರಮೇಶ್ ಕೋಚ್

ಬೆಂಗಳೂರು: ಕಳೆದ 11ನೇ ಆವೃತ್ತಿಯ ಪ್ರೊ ಕಬಡ್ಡಿ ಲೀಗ್‌ನಲ್ಲಿ ನೀರಸ ಪ್ರದರ್ಶನ ತೋರಿ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನ ಪಡೆದಿದ್ದ ಬೆಂಗಳೂರು ಬುಲ್ಸ್ ತಂಡದ ಕೋಚ್ ರಣದೀರ್ ಸಿಂಗ್ ಸೆಹ್ರಾವತ್ ಅವರ ಬದಲಾವಣೆಯಾಗಿದೆ. ನೂತನ ಕೋಚ್ ಆಗಿ ಕನ್ನಡಿಗ ಬಿ.ಸಿ

ರಮೇಶ್ ಆಯ್ಕೆಯಾಗಿದ್ದಾರೆ. ಸತತ 11 ಸೀಸನ್‌ಗಳಿಂದ ರಣದೀರ್‌ಗೆ ಬುಲ್ಸ್ ತಂಡದೊಂದಿಗೆ ಇದ್ದ ನಂಟು ಇದೀಗ ಕೊನೆಗೊಂಡಿದೆ. ರಣಧೀರ್ ನಿರ್ಗಮನದ ಕುರಿತಾಗಿ ಫ್ರಾಂಚೈಸಿಯು ಇನ್‌ಸ್ಟಾಗ್ರಾಮ್ ಪೋಸ್ಟ್ ಮೂಲಕ ದೃಢಪಡಿಸಿದೆ.

ರಣಧೀರ್ ಸಿಂಗ್ ಸೆಹ್ರಾವತ್ ಅವರ ಕೋಚಿಂಗ್‌ನಲ್ಲಿ ಬೆಂಗಳೂರು ಬುಲ್ಸ್ ತಂಡ 2018ರ ಆವೃತ್ತಿಯಲ್ಲಿ ಚಾಂಪಿಯನ್ ಆಗಿತ್ತು. ಈ ವೇಳೆ ಬಿ.ಸಿ ರಮೇಶ್ ಸಹಾಯಕ ಕೋಚ್ ಆಗಿದ್ದರು. ರಮೇಶ್ ಕೋಚಿಂಗ್‌ನಲ್ಲಿ 2019ರಲ್ಲಿ ಬೆಂಗಾಲ್ ವಾರಿಯರ್ಸ್ ಚಾಂಪಿಯನ್ ಆಗಿತ್ತು. ಕಳೆದ ಆವತ್ತಿಯಲ್ಲಿ ಬುಲ್ಸ್ ತಂಡ ಆಡಿದ 22 ಪಂದ್ಯಗಳಲ್ಲಿ ಕೇವಲ 2 ಪಂದ್ಯ ಮಾತ್ರ ಗೆದ್ದು ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನಿಯಾಗಿತ್ತು. 'ಅರ್ಜುನ ಪ್ರಶಸ್ತಿ ಪುರಸ್ಕೃತ ಬಿ.ಸಿ.ರಮೇಶ್, ಈಗ ಬೆಂಗಳೂರು ಬುಲ್ಸ್ ತಂಡದ ದ್ರೋಣ. ಗೂಳಿ ಪಡೆಯನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ನಿರೀಕ್ಷೆಯೊಂದಿಗೆ, ಬಿ.ಸಿ.ರಮೇಶ್ ಅವರನ್ನು ಸ್ವಾಗತಿಸುತ್ತಿದ್ದೇವೆ' ಎಂದು ಬೆಂಗಳೂರು ಬುಲ್ಸ್ ತಂಡ ತನ್ನ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದೆ.

ಲೂಸಿಫರ್ 2 ಟೀಸರ್ ರಿಲೀಸ್

ಮಲೆಯಾಳಂ ಸ್ಟಾರ್ ನಟ ಮೋಹನ್ ಲಾಲ್ ಹಾಗೂ ಪೃಥ್ವಿರಾಜ್ ಸುಕುಮಾರನ್ ಕಾಂಬಿನೇಷನ್‌ನಲ್ಲಿ ಮೂಡಿಬಂದ ಲೂಸಿಫರ್ ಸೂಪರ್ ಹಿಟ್ ಆಗಿತ್ತು. ಆ ಯಶಸ್ಸಿನ ಖುಷಿಯಲ್ಲಿ ಲೂಸಿಫರ್ 2 ಎಂಪುರಾನ್ ಚಿತ್ರ ಮೂಡಿಬರುತ್ತಿದ್ದು, ಸದ್ಯ ಟೀಸರ್ ಮೂಲಕ ಗಮನಸೆಳೆದಿದೆ. ಲೂಸಿಫರ್ ಮೊದಲ ಭಾಗದ ಮುಂದುವರಿದ ಅಧ್ಯಾಯವಾಗಿರುವ ಲೂಸಿಫರ್ 2 ಎಂಪುರಾನ್‌ನಲ್ಲಿ ಭರ್ಜರಿ ಆ್ಯಕ್ಷನ್ ಮಿಳಿತಗೊಂಡಿದೆ. ಮಾಲಿವುಡ್ ಮತ್ತೊಬ್ಬ ಸೂಪರ್ ಸ್ಟಾರ್ ಮಮ್ಮುಟ್ಟಿ, ಲೂಸಿಫರ್ 2 ಟೀಸರ್ ರಿಲೀಸ್ ಮಾಡಿ ಶುಭಕೋರಿದರು.

ಪೃಥ್ವಿರಾಜ್ ಸುಕುಮಾರನ್ ನಿರ್ದೇಶಿಸಿ ಪ್ರಮುಖ ಪಾತ್ರದಲ್ಲಿಯೂ ನಟಿಸಿದ್ದು, ಮೋಹನ್ ಲಾಲ್ ಸ್ಟೀಫನ್ ನೆಡುಂಪಲ್ಲಿ ಎಂಬ ಪಾತ್ರದಲ್ಲಿ ಅಬ್ಬರಿಸಿದ್ದಾರೆ. ಇಂದ್ರಜಿತ್ ಸುಕುಮಾರನ್, ಟೊವಿನೋ ಥಾಮಸ್, ಮಂಜು ವಾರಿಯರ್, ಸಾನಿಯಾ ಅಯ್ಯಪ್ಪನ್, ಸಾಯಿ ಕುಮಾರ್ ಮತ್ತು ಬೈಜು ಸಂತೋಷ್ ತಾರಾಬಳಗದಲ್ಲಿದ್ದಾರೆ. ಎಂಪುರಾನ್ ಚಿತ್ರಕ್ಕೆ ಮುರಳಿ ಗೋಪಿ ಕಥೆ ಬರೆದಿದ್ದು, ದೀಪಕ್ ದೇವ್ ಸಂಗೀತ ಸಂಯೋಜಿಸಿದ್ದಾರೆ. ಸುಜಿತ್ ವಾಸುದೇವ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ಅದ್ದೂರಿ ವೆಚ್ಚದ ಈ ಚಿತ್ರವನ್ನು ಲೈಕಾ ಪ್ರೊಡಕ್ಷನ್ಸ್ ನಿರ್ಮಾಣ ಮಾಡಿದ್ದು, ಈ ಚಿತ್ರದ ಮೂಲಕ ಮಾಲಿವುಡ್‌ಗೆ ಎಂಟ್ರಿಯಾಗಿದೆ. ಲೂಸಿಫರ್ ಎಂಪುರಾನ್ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಮಾರ್ಚ್ 27 ರಂದು ಮಲೆಯಾಳಂ, ಕನ್ನಡ, ತೆಲುಗು, ತಮಿಳು ಮತ್ತು ಹಿಂದಿ ಭಾಷೆಗಳಲ್ಲಿ ವಿಶ್ವದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗಲಿದೆ.

ಗಜರಾಮನಾದ ರಾಜವರ್ಧನ



ಚಂದನವನದಲ್ಲಿ ಬಿಚ್ಚುಗತ್ತಿ ಹಿಡಿದು ಅಬ್ಬರಿಸಿದ ನಟ ರಾಜವರ್ಧನ್, ಈಗ ಗಜರಾಮನಾಗಿ ಅವತಾರ ತಾಳಿದ್ದು ತೆರೆಗೆ ಬರಲು ಸಿದ್ಧವಾಗಿದ್ದಾರೆ. ಸದ್ಯ ಗಜರಾಮನ ಟ್ರೇಲರ್ ರಿಲೀಸ್ ಆಗಿದೆ. ಆ್ಯಕ್ಷನ್, ಎಮೋಷನ್, ಸೆಂಟಿಮೆಂಟ್, ಲವ್ ಅಂಶಗಳೇ ಟ್ರೇಲರ್‌ನಲ್ಲಿ ಹೈಲೈಟ್ಸ್ ಆಗಿವೆ. ರಾಜವರ್ಧನ್ ಕುಸ್ತಿಕಣದಲ್ಲಿ ಪೈಲ್ವಾನ್ ಆಗಿ ತೊಡೆ ತಟ್ಟಿದ್ದು, ಗಜರಾಮನ ಜತೆಯಾಗಿ ತಪಸ್ವಿನಿ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಕಬೀರ್ ಸಿಂಗ್ ಖಳನಾಯಕನಾಗಿ ಅಬ್ಬರಿಸಿದ್ದು, ಪೊಲೀಸ್ ಪಾತ್ರದಲ್ಲಿ ದೀಪಕ್ ಖದರ್ ತೋರಿದ್ದಾರೆ. ರಾಗಿಣಿ ದ್ವಿವೇದಿ, ಸಾರಾಯಿ ಶಾಂತಮ್ಮ..ಎಂದು ಹಾಡಿ ಕುಣಿಸಿದ್ದಾರೆ.

ಹಲವು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವ ಸುನಿಲ್ ಕುಮಾರ್ ಗಜರಾಮ ಚಿತ್ರವನ್ನು ನಿರ್ದೇಶಿಸಿದ್ದು, ಈ ಸಿನಿಮಾದ ಮೂಲ ಸ್ವತಂತ್ರ ನಿರ್ದೇಶಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಲೈಫ್ ಲೈನ್ ಫಿಲಂ ಪ್ರೊಡಕ್ಷನ್‌ನಲ್ಲಿ ನರಸಿಂಹಮೂರ್ತಿ ಸಿನಿಮಾವನ್ನು ನಿರ್ಮಾಣ ಮಾಡಿದ್ದು, ಕೆ.ಎಸ್. ಚಂದ್ರಶೇಖರ್ ಛಾಯಾಗ್ರಾಹಣ, ಜ್ಞಾನೇಶ್ .ಬಿ.ಮಠದ್ ಸಂಕಲನ, ಧನಂಜಯ್ ನೃತ್ಯ ನಿರ್ದೇಶನ, ಚಿನ್ಮಯ್ ಭಾವಿಕೆರೆ, ಜಯಂತ್ ಕಾಯ್ಕಿಣಿ, ಚೇತನ್ ಕುಮಾರ್ ಅವರ ಸಾಹಿತ್ಯ ಈ ಚಿತ್ರಕ್ಕಿದೆ. ಮೆಲೋಡಿ ಮಾಂತ್ರಿಕ ಮನೋಮೂರ್ತಿ ಸಂಗೀತ ತೂಕ ಚಿತ್ರಕ್ಕೆ ಹೊಸತನ ತುಂಬಿದೆ.

ಅಮೇರಿಕಾದಲ್ಲಿ ತಿಮ್ಮನ ಮೊಟ್ಟೆಗಳು

ರಕ್ಷಿತ್ ತೀರ್ಥಹಳ್ಳಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ತಿಮ್ಮನ ಮೊಟ್ಟೆಗಳು ಚಿತ್ರ ಅಮೇರಿಕಾದ ಡಾಲಸ್‌ನಲ್ಲಿ ಪ್ರದರ್ಶನ ಕಂಡಿದ್ದು, ಪ್ರೇಕ್ಷಕರ ಮೆಚ್ಚುಗೆ ಪಡೆದಿದೆ. ಮನುಷ್ಯ ಮತ್ತು ಪ್ರಕೃತಿ ನಡುವಿನ ಸಂಬಂಧಗಳ ಬಗ್ಗೆ ಬೆಳಕು ಚೆಲ್ಲುವ ಸುಂದರ ಕೌಟುಂಬಿಕ ಕಥಾನಕವನ್ನ ಹೊಂದಿರುವ ಚಿತ್ರ ಕೊಲ್ಕತ್ತಾ ಅಂತರಾಷ್ಟ್ರಿಯ ಚಲನಚಿತ್ರೋತ್ಸವದಲ್ಲಿಯೂ ಪ್ರದರ್ಶನಗೊಂಡಿತ್ತು. ದೆಹಲಿಯಲ್ಲಿ ದಾದಾ ಸಾಹೇಬ್ ಫಾಲ್ಕೆ ಚಲನಚಿತ್ರೋತ್ಸವದಲ್ಲಿ ಸ್ಪೆಷಲ್ ಜೂರಿ ಮೆನ್ಷನ್ ಅವಾರ್ಡ್ ಕೂಡ ಪಡೆದುಕೊಂಡಿತ್ತು.

ರಕ್ಷಿತ್ ತೀರ್ಥಹಳ್ಳಿಯವರೇ ಬರೆದ ಕಾಡಿನ ನೆಂಟರು ಕಥಾ ಸಂಕಲನದ ಆಯ್ದ ಒಂದು ಕಥೆ ತಿಮ್ಮನ ಮೊಟ್ಟೆಗಳು ಸಿನಿಮಾವಾಗಿದೆ. ಮಾನವೀಯ ಮೌಲ್ಯಗಳು, ಪ್ರಕೃತಿ ಮತ್ತು ಮನುಷ್ಯ ನಡುವಿನ ಸಂಬಂಧಗಳು, ದೈವಾರಾಧನೆ ಮತ್ತು ಮನುಷ್ಯನ ನಂಬಿಕೆಗಳ ಬಗ್ಗೆ ಚಿತ್ರದ ಕಥೆ ಸಾಗುತ್ತದೆ. ಚಿತ್ರದ ಕಥೆಯಲ್ಲಿ ಕಾಳಿಂಗ ಹಾವಿನ ಪಾತ್ರ ಬಹುಮುಖ್ಯವಾಗಿದ್ದು ಚಿತ್ರದ ಓಟಕ್ಕೆ ಸಹಕಾರಿಯಾಗಿದೆ. ಸುಚೇಂದ್ರ ಪ್ರಸಾದ್, ಕೇಶವ್ ಗುತ್ತಳಿಕೆ, ಆಶಿಕಾ ಸೋಮಶೇಕರ್, ಪ್ರಗತಿ ಪ್ರಭು, ಶೃಂಗೇರಿ ರಾಮಣ್ಣ, ರಘು ರಾಮನಕೊಪ್ಪ, ಮಾಸ್ಟರ್ ಹರ್ಷ, ವಿನಯ್ ಕಣಿವೆ ಮುಂತಾದವರು ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಪ್ರವೀಣ್ ಛಾಯಾಗ್ರಹಣ, ಬಿ.ಎಸ್. ಕೆಂಪರಾಜು ಸಂಕಲನ ಹಾಗೂ ಹೇಮಂತ್ ಜೋಯಿಸ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ವಾಸುಕಿ ವೈಭವ್, ಐಶ್ವರ್ಯ ರಂಗರಾಜನ್, ಆದರ್ಶ ಅಯ್ಯಂಗಾರ್ ಮತ್ತು ಚಿನ್ಮಯಿ ಚಂದ್ರಶೇಖರ್ ದನಿಯಲ್ಲಿ ಮೂಡಿಬಂದಿರುವ ಹಾಡುಗಳು ಕೇಳಲು ಮಧುರವಾಗಿವೆ. ಕೃಷ್ಣ ಪ್ರೊಡಕ್ಷನ್ಸ್ ಬ್ಯಾನರಿನಲ್ಲಿ ಆದರ್ಶ ಅಯ್ಯಂಗಾರ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಟೈಮ್ ಟ್ರಾವೆಲ್ಲಿಂಗ್ ಕಥೆಯ ಗಣ

ಪ್ರಜ್ವಲ್ ದೇವರಾಜ್ ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದು, ವರ್ಷಾರಂಭದಲ್ಲಿಯೇ ಗಣ ಚಿತ್ರದಲ್ಲಿ ಅಬ್ಬರಿಸಲಿದ್ದಾರೆ. ಗಣ ಎರಡು ಕಾಲಘಟ್ಟದಲ್ಲಿ ನಡೆಯುವ ಕಥೆಯಾಗಿದೆ. ಒಮ್ಮೆ ತೊಂಬತ್ತರ ಕಾಲಘಟ್ಟಕ್ಕೆ ಕಥೆ ಸಾಗಿದರೆ, ಇನ್ನೊಮ್ಮೆ ಪ್ರಸ್ತುತತೆಗೆ ಹೊರಳುತ್ತದೆ. ಹೀಗೆ ಟೈಮ್ ಟ್ರಾವೆಲಿಂಗ್ ಹಿನ್ನೆಲೆಯಲ್ಲಿ ಪ್ರೇಕ್ಷಕರನ್ನು ಸೀಟಿನ ತುದಿಗೆ ತಂದು ಕೂರಿಸುವ ಸ್ಟೋರಿ ಇಲ್ಲಿದೆ. ಆ ಎರಡು ಕಾಲಘಟ್ಟಕ್ಕೆ ಲ್ಯಾಂಡ್‌ಲೈನ್ ಫೋನ್ ಸೇತುವೆಯಾಗಿರುವುದು ಗಣ ಚಿತ್ರದ ವಿಶೇಷ.

ಪ್ರಜ್ವಲ್ ದೇವರಾಜ್ ಈ ಹಿಂದಿನ ಸಿನಿಮಾಗಳಿಗಿಂತ ವಿಭಿನ್ನ ಪಾತ್ರದಲ್ಲಿ ನಟಿಸಿದ್ದು, ಯಶಾ ಶಿವಕುಮಾರ್ ಹಾಗೂ ವೇದಿಕಾ ನಾಯಕಿಯರಾಗಿ ಅಭಿನಯಿಸಿದ್ದಾರೆ. ಕೃಷಿ ತಾಪಂಡ, ವಿಶಾಲ್ ಹೆಗಡೆ, ರವಿ ಕಾಳೆ, ಸಂಪತ್ ರಾಜ್, ಶಿವರಾಜ್ ಕೆ.ಆರ್ ಪೇಟೆ, ರಮೇಶ್ ಭಟ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಹರಿಪ್ರಸಾದ್ ಜಕ್ಕ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದು, ಚೆರಿ ಕ್ರಿಯೇಷನ್ಸ್ ಬ್ಯಾನರ್‌ನಲ್ಲಿ ಪಾರ್ಥು ಚಿತ್ರ ನಿರ್ಮಾಣ ಮಾಡಿದ್ದಾರೆ. ಅನೂಪ್ ಸೀಳಿನ್ ಸಂಗೀತ ಸಂಯೋಜಿಸಿರುವ ಈ ಚಿತ್ರದಲ್ಲಿ ಒಟ್ಟು ನಾಲ್ಕು ಹಾಡುಗಳಿದ್ದು, ಈಗಾಗಲೇ ಮೂರು ಹಾಡುಗಳು ರಿಲೀಸ್ ಆಗಿದ್ದು ಸಂಗೀತ ಪ್ರಿಯರ ಮನಗೆದ್ದಿವೆ. ಜೈ ಆನಂದ್ ಛಾಯಾಗ್ರಹಣ, ಹರೀಶ್ ಕೊಮ್ಮೆ ಸಂಕಲನ, ಸತೀಶ್ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.

ಇದೊಂದು ಪಕ್ಕಾ ಫ್ಯಾಮಿಲಿ ಎಂಟರ್‌ಟೇನರ್ ಸಿನಿಮಾ. ಒಳ್ಳೆಯ ಮನರಂಜನೆಯ ಜತೆಗೆ ಪ್ರೇಕ್ಷಕ ಬಯಸುವ ಎಲ್ಲ ಅಂಶಗಳೂ ಗಣ ಸಿನಿಮಾದಲ್ಲಿದೆ. ಕರ್ಮಷಿಯಲ್ ಆಯಾದಲ್ಲಿ ಚಿತ್ರ ನಿರ್ಮಾಣವಾಗಿದ್ದರೂ ಪ್ರೇಕ್ಷಕರನ್ನು ಸೀಟಿನ ತುದಿಗೆ ತಂದು ಕೂರಿಸುತ್ತದೆ. ಟ್ರೇಲರ್‌ನಲ್ಲಿ ಇದು ಸ್ಪಷ್ಟವಾಗಿದೆ. ಟೈಮ್ ಟ್ರಾವೆಲಿಂಗ್ ಜಾನರ್‌ನ ಈ ಸಿನಿಮಾ ಎರಡು ಕಾಲಘಟ್ಟದಲ್ಲಿ ಸಾಗುತ್ತದೆ. ಅಮ್ಮ ಮಗನ ಬಾಂಧವ್ಯದ ಕಥೆ ಈ ಸಿನಿಮಾದ ಹೈಲೈಟ್.

-ಪಾರ್ಥು ನಿರ್ಮಾಪಕ